ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

VOLUME-ಸಂಪುಟ:12 | ISSUE- ಸಂಚಿಕೆ: 341 | PAGE- ಪುಟ 8 | ಶನಿವಾರ 11.01.2025 ಬೀದರ | RNINO:KARKAN/2011/48371 | RS.ಬೆಲೆ 2/-

# ಸಚೀನ್ ಆತ್ಮಹತ್ಯೆ

## ಕಪನೂರ ಸೇರಿ ಐವರ ಬಂಧನ





ಮಲ್ಲಮ್ಮ ನುಡಿ ವಾರ್ತೆ

ಬೀದರ್ :ಜ.10: ಸಚಿನ್ ಆತ್ಮಹತ್ಯೆಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ರಾಜು ಕಪನೂರ್ ಸೇರಿ ಐವರ ಬಂಧನವಾಗಿದೆ.ರಾಜುಕಪನೂರ್, ಗೊರಕನಾಥ್,ನಂದಕುಮಾರ್ ನಾಗಭುಜಂಗೆ,ರಾಮನಗೌಡ ಪಾಟೀಲ್ ಹಾಗೂ ಸತೀಶ್ ಅವರನ್ನು ಬಂಧಿಸಿ ಆರೋಗ್ಯ ತಪಾಸಣೆಗಾಗಿ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿದೆ.

ಇತ್ತಿಚೆಗೆ ಸಚಿನ್ ಪಾಂಚಾಳ್ ಡೆತ್ ನೋಟ್ ಬರೆದಿಟ್ಟು ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು,ಸಚಿವ ಪ್ರಿಯಾಂಕ ಖರ್ಗೆಯವರ ಬೆಂಬಲಿಗರ ಹೆಸರು ಡೆತ್ ನೋಟ್‌ನಲ್ಲಿದ್ದ ಕಾರಣ ಬಿಜೆಪಿ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಬೀದರ,ಕಲಬುರಗಿ ಸೇರಿದಂತೆ ರಾಜ್ಯದ ವಿವಿಧ ಕಡೆ ಪ್ರತಿಭಟನೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರ ಪ್ರಕರಣವನ್ನು ಸಿಐಡಿಗೆ ತನಿಖೆಗೆ ಒಪ್ಪಿಸಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಸಿಐಡಿ ಬೀದರಗೆ ಆಗಮಿಸಿ ವಿಚಾರಣೆ ಆರಂಭಿಸಿತ್ತು. ಜ.6ರಂದು ಸಿಐಡಿ ಅಧಿಕಾರಿಗಳು ವಿಚಾರಣೆಗೆ ಹಾಜರಾಗುವಂತೆ ಐವರು ಆರೋಪಿಗಳಿಗೆ ನೋಟಿಸ್ ನೀಡಿದ್ದರು.ವಿಚಾರಣೆಗೆ ಆಗಮಿಸಿದ ಐವರನ್ನು ಇಂದು ಬಂಧಿಸಿ ವಿಚಾರಣೆಗೊಳಪಡಿಸಲಾಗಿದೆ.



ಹುಮನಾಬಾದ:ಕ್ಷೇತ್ರದ ಆರಾಧ್ಯದೈವ ಶ್ರೀ ವೀರಭದ್ರದೇವರಿಗೆ ಎಣ್ಣೆ ಹಚ್ಚುವ ಕಾರ್ಯಕ್ರಮ ಮುತ್ತೈದೆಯರಿಂದ ನಡೆಯಿತು. ಎಣ್ಣೆ ಹಚ್ಚುವ ಕಾರ್ಯಕ್ರಮದೊಂದಿಗೆ ವೀರಭದ್ರದೇವರ ಜಾತ್ರಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

# ಸಂಸ್ಕಾರದಿಂದ ಸಂಸಾರ ಸುಧಾರಣೆ ಬಿ.ಕೆ ಶಿವಾನಿ



ಬೀದರ. ಜ. 10 : ಸಂಸ್ಕಾರದಿಂದ ಸಂಸಾರ ಸುಧಾರಣೆ ಸಾಧ್ಯವಿದೆ ಎಂದು ಅಂತರಾಷ್ಟ್ರೀಯ ವಾಗ್ಮಿಗಳಾದ ಬಿ.ಕೆ ಶಿವಾನಿ ಬಹೆನ್ ಜಿ ಹೇಳಿದರು.

ನಗರದ ಗುಂಪಾ ರಸ್ತೆಯಲ್ಲಿರುವ ಕರ್ನಾಟಕ ಫಾರ್ಮಸಿ ಕಾಲೇಜು ಮೈದಾನದಲ್ಲಿ ಬ್ರಹ್ಮಾಕುಮಾರಿ ಕೇಂದ್ರ ಶಿವಶಕ್ತಿ ಭವನದಿಂದ ಶಿವಾನಿ ಬಹೆನಜಿ ಅವರಿಗಾಗಿ ಹಮ್ಮಿಕೊಂಡ ಆನಂದಮಯ ಜೀವನ ಕುರಿತ ವಿಶೇಷ ಪ್ರವಚನ ನೀಡಿದರು.ನಮ್ಮ ಜೊತೆ ನಮ್ಮ ಸತ್ಕಾರ್ಯ ಹಾಗೂ ನಮ್ಮ ಸಂಸ್ಕಾರ ಮಾತ್ರ ಬರುತ್ತವೆ. ಮಲಗುವಾಗ ನಮ್ಮ ತಲೆ ದಿಂಬಿನ ಕೆಳಗೆ ಒಂದು ಡೈರಿ ಹಾಗೂ ಪೆನ್ನು ಇಟ್ಟುಕೊಂಡು ನಮ್ಮ ನಿತ್ಯದ ಒಳ್ಳೆ ಹಾಗೂ ನಕಾರಾತ್ಮಕ ಕಾರ್ಯದ ಬಗ್ಗೆ ಬರೆದುಕೊಳ್ಳಬೇಕು. ಮಲಗುವುದಕ್ಕಿಂತ ಮುಂಚೆ ನಮ್ಮ ಜೊತೆ ತಪ್ಪಾಗಿ ನಡೆದುಕೊಂಡವರನ್ನು ಕ್ಷಮಿಸಬೇಕು,

(2ನೇ ಪುಟ ನೋಡಿ)

# 8.23 ಲಕ್ಷ ರೂ. ಮಾದಕ ವಸ್ತು ಜಪ್ತಿ: ಬಂಧನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.10:ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಬಂಧಿಸಿ 1.26 ಲಕ್ಷ ರೂ.ಮೌಲ್ಯದ ಮಾತ್ರೆಗಳು, 240 ಬಾಟಲ್ ಕೆಮ್ಮಿನ ಔಷಧಿ ಮತ್ತು 105 ಗ್ರಾಂ.ಗಾಂಜಾ ಸೇರಿ 8.23 ಲಕ್ಷ ರೂ.ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.



ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಬುರಗಿ ನಗರದ ಇಕ್ಬಾಲ್ ಕಾಲೋನಿಯ ಖದೀರ್ ಚೌಕ್ ನಿವಾಸಿ ಮಸಿಯೋದ್ದಿನ್ ತಂದೆ ಮೊಹ್ಮದ್ ಮೈನೋದ್ದಿನ್ (30) ಎಂಬಾತನನ್ನು ಬಂಧಿಸಿ ಲಾಭದ

(2ನೇ ಪುಟ ನೋಡಿ)

# ಸಮರ್ಪಕ ಮಾಹಿತಿ ನೀಡದ

## ಅಧಿಕಾರಿಗಳ ವಿರುದ್ಧ ಸಚಿವ ತಿಮ್ಮಾಪೂರ ಗರಂ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.10:ಸರಿಯಾದ ಮಾಹಿತಿ ಇಲ್ಲದೇ ಸಭೆಗೆ ಬಂದ ಅಧಿಕಾರಿಗಳ ವಿರುದ್ಧ ಹರಿಹಾಯ್ದ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಬಾಣಂತಿಯರ ವಿಷಯದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ತೋರುತ್ತಿರುವ ನಿರ್ಲಕ್ಷ್ಯದಿಂದಾಗಿಯೇ ಇಂದು ರಾಜ್ಯದಲ್ಲಿ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ಈ ನಿಗಾವಹಿಸಿ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತಾಕೀತು ಮಾಡಿದರು.ಶುಕ್ರವಾರ ಜಿಲ್ಲೆಯ ಮುಧೋಳ ತಾಲೂಕು ಪಂಚಾಯತಿ ಸಭಾಭವನದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ಸಭೆಗೆ ಬರುವಾಗ ಸಮರ್ಪಕ ಮಾಹಿತಿ ತರಬೇಕು. ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲ ಸೌಲಭ್ಯಗಳಿದ್ದರೂ ಅವು ರೋಗಿಗಳಿಗೆ ತಲುಪುತ್ತಿಲ್ಲ. ಇದಕ್ಕೆ ನಿರ್ಲಕ್ಷ್ಯವೇ ಕಾರಣ ಎಂದು ಹೇಳಿದರು.

ಈಚಿನ ದಿನಗಳಲ್ಲಿ ಬಾಣಂತಿಯರ ಸಾವಿನ ಪ್ರಕರಣಗಳು ನಿತ್ಯ ಕೇಳಿ ಬರುತ್ತಿವೆ. ಇದಕ್ಕೆ ವೈದ್ಯರು ಹಾಗೂ ಸಿಬ್ಬಂದಿಯ ನಿರ್ಲಕ್ಷತನವೇ

(2ನೇ ಪುಟ ನೋಡಿ)

# ಕೃಷಿ ಉತ್ಪಾದನಾ ವೆಚ್ಚದ ಅಧ್ಯಯನ ನಡೆಯಲಿ:ಡಾ.ದಳವಾಯಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.10 : ಕೃಷಿ ಉತ್ಪಾದನೆಗಳ ಉತ್ಪಾದನಾ ವೆಚ್ಚವನ್ನು ಕೃಷಿ ವಿವಿಗಳ ಮೂಲಕ ಅಧ್ಯಯನ ಮಾಡಿ, ಸರಾಸರಿ ಉತ್ಪಾದನಾ ವೆಚ್ಚದ ಆಧಾರದ ಮೇಲೆ ರೈತರಿಗೆ ಸಿಗಬೇಕಾದ ಎಂಎಸ್‌ಪಿಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಧ್ಯೇಯವಾಗಿದೆ ಎಂದು ಕೃಷಿ




ಬೆಲೆ ಆಯೋಗದ ಅಧ್ಯಕ್ಷರಾದ ಡಾ.ಅಶೋಕ ಎಂ.ದಳವಾಯಿ ಅವರು ಹೇಳಿದರು.

ನಗರದ ಕೃಷಿ ತಂತ್ರಜ್ಞಾನ ಸಂಸ್ಥೆಯಲ್ಲಿ ಜನವರಿ 10ರಂದು ಹಮ್ಮಿಕೊಂಡಿದ್ದ ರೈತರ ಹಿತ ಚಿಂತನೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೃಷಿ ವೆಚ್ಚಕ್ಕೂ ಉತ್ಪಾದನಾ ವೆಚ್ಚಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕೃಷಿ ವೆಚ್ಚವೆಂದರೇ ಒಂದು ಎಕರೆಗೆ ಎಷ್ಟು ಖರ್ಚಾಗುತ್ತದೆ ಎಂಬುವುದನ್ನು ತಿಳಿಸುತ್ತದೆ. ಈ ವೆಚ್ಚವು ಹಲವು ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಆಯಾ ಪ್ರದೇಶದಲ್ಲಿರುವ ಕೂಲಿ, ಯಂತ್ರೋಪಕರಣಗಳ ವೆಚ್ಚಕ್ಕೆ ತಕ್ಕಂತೆ ವ್ಯತ್ಯಾಸಗಳನ್ನು ಹೊಂದಿರುತ್ತದೆ. ಆದರೆ ಎಂಎಸ್ಪಿ ಎಂಬುವುದು ಉತ್ಪಾದನಾ ವೆಚ್ಚದ ಮೇಲೆ ನಿರ್ಧಾರವಾಗಿದ್ದು,

(2ನೇ ಪುಟ ನೋಡಿ)

# ಮಾಧ್ಯಮದವರ ರಕ್ಷಣೆಗೆ ಸರ್ಕಾರ ಸೂಕ್ತ ಕ್ರಮ ತೆಗೆದು ಕೊಳ್ಳಲು ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ದಾವಣಗೆರೆ : ಇತ್ತೀಚಿಗೆ ಪಾವಗಡದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಪತ್ರಿಕೆ ಸಂಪಾದಕ ರಾಮಾಂಜೀನಪ್ಪ ಅವರ ಮೇಲೆ ನಡೆದಿರುವ ದೌರ್ಜನ್ಯ ಖಂಡಿಸಿ ಹಲ್ಲೆಕೋರರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಿ ಹಲ್ಲೆಗೊಳಗಾದ ರಾಮಾಂಜೀನಪ್ಪ ಮತ್ತವರ ಕುಟುಂಬದವರಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ದಾವಣಗೆರೆ ಜಿಲ್ಲಾ ಘಟಕದಿಂದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ಅವರ ನೇತೃತ್ವದಲ್ಲಿ ದಾವಣಗೆರೆ ಅಪರ ಜಿಲ್ಲಾಧಿಕಾರಿಗಳಾದ ಪಿ.ಎನ್.ಲೋಕೇಶ್ ಅವರ ಮೂಲಕ ಜನವರಿ 10 ರ ಶುಕ್ರವಾರ ಮಧ್ಯಾಹ್ನ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು.

ಅಕ್ರಮ ದಂಧೆಗಳ ಕುರಿತು ದಿಟ್ಟತನದಿಂದ ರಾಮಾಂಜೀನಪ್ಪ ತಮ್ಮ ಪತ್ರಿಕಾ ವರದಿಗಳ ಮೂಲಕ ಪಾವಗಡ ತಾಲ್ಲೂಕಿನಲ್ಲಿ ಸಂಚಲ ಮೂಡುವಂತೆ ಮಾಡಿದ್ದರು. ತಾಲ್ಲೂಕಿನ ಪ್ರತಿಯೊಂದು ಸಮಸ್ಯೆಗಳ ಬಗ್ಗೆ ಕೆಲವು ಮಾಫಿಯಾಗಳ ಬಗ್ಗೆ ನೇರ ವರದಿ ಮಾಡುತ್ತಿದ್ದರು. ಪತ್ರಿಕಾ ಸುದ್ದಿಗಳು ಆಕ್ರಮ ದಂಧೆಗಳ ರಿಯಲ್ ಎಸ್ಟೇಟ್ ನ ಬಟಾಬಯಲು ಮಾಡಿದವು.

ಪಾವಗಡ ನಗರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸಂಪಾದಕ ರಾಮಾಂಜೀನಪ್ಪನವರ ಮೇಲೆ ನಡೆದಿರುವ ದೌಜನ್ಯ ಖಂಡನೀಯ. ರಾಮಾಂಜನಪ್ಪ ತಮ್ಮ ಬರವಣಿಗೆಯಿಂದ ಅಕ್ರಮಗಳು ಹೊರತಂದ ಕಾರಣ ಇವರ ಮೇಲೆ ನಡುಬೀದಿಯಲ್ಲಿಯೇ ಸಾರ್ವಜನಿಕವಾಗಿ ಅರೆ ಬೆತ್ತಲೆ ಮಾಡಿ ಮಹಿಳೆಯರನ್ನು ಬಿಟ್ಟು

(2ನೇ ಪುಟ ನೋಡಿ)

# 2-3 ತಿಂಗಳೊಳಗಾಗಿ ಭೂ ದಾಖಲೆಗಳ ಡಿಜಿಟಲೀಕರಣ :ಸಚಿವ ಈಶ್ವರ ಬಿ.ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.10 : ಜಿಲ್ಲಾಡಳಿತವು ಲಕ್ಷಾಂತರ ಭೂ ದಾಖಲೆಗಳು ಡಿಜಿಟಲೀಕರಣ ಮಾಡಲು ಸಜ್ಜಾಗಿದೆ. ಈಗಾಗಲೇ ದಾಖಲೀಕರಣ ಮಾಡಿಕೊಳ್ಳುವಂತಹ ಪ್ರಕ್ರಿಯೇ ಪ್ರಾರಂಭವಾಗಿದ್ದು, ಇನ್ನು 2–3 ತಿಂಗಳೊಳಗಾಗಿ ಭೂ ದಾಖಲೆಗಳ ಡಿಜಿಟಲೀಕರಣ ಮಾಡಲಾಗುತ್ತದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು.

ಅವರು ಶುಕ್ರವಾರ ಭಾಲ್ಕಿ ತಹಸೀಲ್ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಭೂ ಸುರಕ್ಷಾ ಇ–ಖಜಾನೆರ (ತಾಲ್ಲೂಕು ಕಛೇರಿ, ಸರ್ವೆ ಮತ್ತು ನೋಂದಣಿ ಇಲಾಖೆಗಳ

(2ನೇ ಪುಟ ನೋಡಿ)

# ಒಂದನೇ ಪುಟದಿಂದ

## ಸೂಕ್ತ ಕ್ರಮ ತೆಗೆದು ಕೊಳ್ಳಲು ಆಗ್ರಹ

ದೌಜನ್ಯ ಮಾಡಿರುವುದು ಕಾನೂನು ಬಾಹಿರ, ಅದರಲ್ಲೂ ವಿಡಿಯೋ ಮಾಡಿ ಸಾಮಾಜಿಕ ಜಾಲ ತಾಣಕ್ಕೆ ಬಿಟ್ಟಿರುವುದು ಅಮಾನವೀಯ ಕೃತ್ಯವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ರಾಮಾಂಜೀನಪ್ಪ ಅವರ ಮೇಲಿನ ಹಲ್ಲೆಯನ್ನು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘವು ತೀವ್ರವಾಗಿ ಖಂಡಿಸುತ್ತದೆ. ಹಲ್ಲೆಕೋರರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲು ಸರ್ಕಾರ ಮುಂದಾಗ ಬೇಕು. ರಾಜ್ಯದಲ್ಲಿ ಪತ್ರಿಕೆಯ ಸಂಪಾದಕರು ಮತ್ತು ವರದಿಗಾರರು ಸಮಾಜದಲ್ಲಿನ ಅನ್ಯಾಯ ಅಕ್ರಮಗಳನ್ನು ತಮ್ಮ ಬರವಣಿಗೆಯ ಮೂಲಕ ಪತ್ರಿಕೆಗಳಲ್ಲಿ ಬಯಲಿಗೆಳೆಯಲು ಮುಕ್ತ ಅವಕಾಶ ಇರಬೇಕು ಎಂದು ಮನವಿಯಲ್ಲಿ ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಪತ್ರಿಕಾ ಸಂಪಾದಕರಿಗೆ ಮತ್ತು ವರದಿಗಾರರಿಗೆ ಜೊತೆಗೆ ಟಿವಿ ವಾಹಿನಿಗಳ ವರದಿಗಾರರಿಗೆ ಮತ್ತು ನೌಕರರಿಗೆ ವರದಿ ಮಾಡುವುದಕ್ಕೆ ಮುಕ್ತ ಅವಕಾಶ ಕೊಟ್ಟು ಸೂಕ್ತ ರಕ್ಷಣೆ ಒದಗಿಸುವುದಕ್ಕೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಎಸ್ಪಿ ಅವರಿಗೆ ಸರ್ಕಾರದ ವತಿಯಿಂದ ಸೂಕ್ತ ನಿರ್ದೇಶನ ನೀಡುವಂತೆ ಮುಖ್ಯಮಂತ್ರಿಯವರಿಗೆ ಸಂಘದಿಂದ ಮನವಿ ಮಾಡಲಾಗಿದೆ.

ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಯವರಿಗೆ ಮನವಿಯನ್ನು ಕಳುಹಿಸಿ ಕೊಡಲಾಗುವುದೆಂದು ತಿಳಿಸಿದರು.

ಸಂಘದ ನಿಯೋಗದಲ್ಲಿ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ, ರಾಜ್ಯ ಸಂಘದ ನಾಮನಿರ್ದೇಶನ ಸದಸ್ಯರಾದ ಡಾ.ಬಿ.ವಾಸುದೇವ,ಡಾ.ಕೆ.ಜೈಮುನಿ, ಜಿಲ್ಲಾಧ್ಯಕ್ಷ ಸುರೇಶ್ ಆರ್ ಕುಣಿಬೆಳಕೆರೆ, ಸಹ ಕಾರ್ಯದರ್ಶಿ ಮಾರಣ್ಣ ಎ.ಕೆ, ಖಜಾಂಚಿ ಶಿವಮೂರ್ತಿ ಟಿ.ಜಿ, ಸದಸ್ಯ ಜಿ.ಹೆಚ್.ನಾಗರಾಜ ಇದ್ದರು.

## ಡಿಜಿಟಲೀಕರಣ :ಸಚಿವ ಈಶ್ವರ ಬಿ.ಖಂಡ್ರೆ

ಎಲ್ಲಾ ಭೂ ದಾಖಲೆಗಳ ಡಿಜಿಟಲೀಕರಣ) ಉದ್ಘಾಟನೆ ಮಾಡಿ ಮಾತನಾಡಿದರು.

ಕಚೇರಿಗಳಲ್ಲಿ ದಾಖಲೆಗಳು ನಾಪತ್ತೆಯಾಗುವುದು, ತಿದ್ದುಪಡಿಯಾಗುವುದು, ಸುಟ್ಟು ಹೋಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗುತ್ತಿರುವುದರಿಂದ ನಮ್ಮ ಸರ್ಕಾರ ಸುರಕ್ಷಿತವಾದ ಭೂದಾಖಲೆಗಳ ಜಾರಿಗೆ ಮಾಡಿ ಕೆಪಿಎಸ್‌ಸಿ ಅಂತಾ ಡಿವೈಸ್ ಮಾಡಿದ್ದಾರೆ. ದಾಖಲೆಗಳ ಡಿಜಿಟಲೀಕರಣ ಮಾಡುವುದರ ಜೊತೆಗೆ ಮ್ಯಾನವಲ್ ಕೂಡ ದೊರಕಲಿದೆ. "ಎ' ವರ್ಗದ ದಾಖಲೆಗಳು ಶಾಶ್ವತವಾಗಿರಲಿವೆ. "ಬಿ' ವರ್ಗದ ದಾಖಲೆಗಳು 30 ವರ್ಷ ಇರಲಿವೆ, "ಸಿ' ವರ್ಗದ ದಾಖಲೆಗಳು 10 ವರ್ಷಗಳು ಉಳಿಯಲಿವೆ. ಈ ಯೋಜನೆಯಿಂದ ಮಧ್ಯವರ್ತಿಗಳ ಮತ್ತು ಭ್ರಷ್ಟಾಚಾರ ಕೂಡ ತಪ್ಪಲಿದೆ. ಸಾರ್ವಜನಿಕರಿಗೆ ಅನುಕೂಲವಾಗಲು ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಈ ಯೋಜನೆಯ ಸದುಪಯೋಗ ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎಂ.ಜಿ.ಮೂಳೆ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಬೀದರ ಬಸವಕಲ್ಯಾಣ ಸಹಾಯಕ ಆಯುಕ್ತರಾದ ಎಂ.ಡಿ.ಶಕೀಲ್ ಮುಕುಲ ಜೈನ್, ಅಪರ ಜಿಲ್ಲಾಧಿಕಾರಿಗಳಾದ ಶಿವಕುಮಾರ ಶೀಲವಂತ, ಭಾಲ್ಕಿ ತಾಲ್ಲೂಕಿನ ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ, ಪಲ್ಲವಿ ಬೆಳಕೇರಿ, ಪುರಸಭೆ ಅಧ್ಯಕ್ಷರಾದ ಶಶಿಕಲಾ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಹಣಮಂತ ಚವ್ಹಾಣ, ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ಅಧಿಕಾರಿಗಳು ಸೇರಿದಂತೆ ತಹಸೀಲ್ ಕಾರ್ಯಾಲಯದ ಸಿಬ್ಬಂದಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಅಧಿಕಾರಿಗಳ ವಿರುದ್ಧ ಸಚಿವ ತಿಮ್ಮಾಪೂರ ಗರಂ

ಕಾರಣ. ಸಿಬ್ಬಂದಿ ಕೊರತೆಯ ನೆಪದಲ್ಲಿ ರೋಗಿಗಳು ಹಾಗೂ ಗರ್ಭಿಣಿಯರನ್ನು ಖಾಸಗಿ ಆಸ್ಪತ್ರೆಗೆ ಕಳುಹಿಲಾಗುತ್ತಿದೆ. ಇದು ಸರಿಯೇ ಎಂದು ಪ್ರಶ್ನಿಸಿದ ಸಚಿವ ತಿಮ್ಮಾಪೂರ, ಎಲ್ಲ ವೈದ್ಯಕೀಯ ಸೌಲಭ್ಯಗಳಿದ್ದರೂ ಅವುಗಳನ್ನು ಉಪಯೋಗಿಸಿಕೊಂಡು ಉತ್ತಮ ಚಿಕಿತ್ಸೆ ನೀಡುವಲ್ಲಿ ವಿಫಲರಾಗುತ್ತಿದ್ದೀರಿ ಎಂದು ವೈದ್ಯರನ್ನು ತರಾಟೆಗೆ ತೆಗೆದುಕೊಂಡರು.

ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದ ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸಚಿವರು, ಮುಂದಿನ ದಿನಗಳಲ್ಲಿ ಸಭೆಗೆ ಬರಬೇಕಾದರೆ ಎಲ್ಲ ಮಾಹಿತಿಯನ್ನು ತರಬೇಕು ಎಂದು ಎಚ್ಚರಿಸಿದರು.

ಉಳಿದಂತೆ ವಿವಿಧ ಇಲಾಖೆಗಳ ಪ್ರಗತಿಯನ್ನು ಪರಿಶೀಲಿಸಿದ ಸಚಿವ ತಿಮ್ಮಾಪೂರ, ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಿದರು. ಜಿಲ್ಲೆಯಲ್ಲಿ 55 ಸಾವಿರ ಬಿಪಿಎಲ್ ಕಾರ್ಡ್‌ಗಳಿವೆ. 2011ರ ಜನ ಗಣತಿ ಪ್ರಕಾರ 62 ಸಾವಿರ ಕುಟುಂಬಗಳಿದ್ದು, 71ಸಾವಿರ ಪಡಿತರ ಚೀಟಿಗಳು ವಿತರಣೆಯಾಗಿವೆ. ಮನೆಯಲ್ಲಿ ಹೆಚ್ಚುವರಿ ಜನರು ಕಾರ್ಡ್ ಮಾಡಿಕೊಂಡಿದ್ದರ ಪರಿಣಾಮ ಚೀಟಿಗಳು ಹೆಚ್ಚಾಗಿವೆ ಎಂದು ಆಹಾರ ಇಲಾಖೆಯ ಅಧಿಕಾರಿ ಸಭೆಯ ಗಮನಕ್ಕೆ ತಂದಾಗ ಕಾರ್ಡ ಅರ್ಹರರಿಗೆ ಸಿಗುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ರಾಜ್ಯ ಹೆದ್ದಾರಿಗೆ ಸಂಬಂಧಿಸಿದಂತೆ 9 ಕಾಮಗಾರಿ ಪ್ರಗತಿಯಲ್ಲಿವೆ. ಡಿಎಂಎಫ್‌ಅಡಿ 3 ಕಾಮಗಾರಿ ಟೆಂಡರ್ ಆಗಿ ಇನ್ನು ಕಾಮಗಾರಿ ಆರಂಭವಾಗಿಲ್ಲ. 2 ಜಿಲ್ಲಾ ಮುಖ್ಯ ರಸ್ತೆಗಳು ಕಾಮಗಾರಿ ಆರಂಭಿಸಬೇಕಿದೆ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿ ಮಾಚಕನೂರ ಸಭೆಗೆ ಮಾಹಿತಿ ನೀಡಿದರು.

ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಾಪಂ ಅಧಿಕಾರಿ ಉಕ್ಕಲಿ, ಯುಕೆಪಿ ಜಿಲ್ಲಾಧಿಕಾರಿ ರಜಪೂತ, ತಹಸೀಲ್ದಾರ್ ಮಹಾದೇವ ಸಣಮುರಿ, ಕೆಡಿಪಿ ನಾಮ ನಿರ್ದೇಶಿತ ಸದಸ್ಯರು ಸಭೆಯಲ್ಲಿ ಹಾಜರಿದ್ದರು.

## ಮಾದಕ ವಸ್ತು ಜಪ್ತಿ: ಬಂಧನ

ಉದ್ದೇಶದಿಂದ ಮಾರಾಟ ಮಾಡಲು ಆತನು ಸಂಗ್ರಹಿಸಿದ್ದ 8.23 ಲಕ್ಷ ರೂ. ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಿದೆ ಎಂದರು.

ಮಾದಕ ವಸ್ತುಗಳ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲು ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್ ಮಾರ್ಗದರ್ಶನದಲ್ಲಿ ಕಲಬುರಗಿ ದಕ್ಷಿಣ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಭೂತೇಗೌಡ ವಿ.ಎಸ್.ಅವರ ನೇತೃತ್ವದಲ್ಲಿ ಆರ್.ಜಿ.ನಗರ ಪೊಲೀಸ್ ಠಾಣೆಯ ಪ್ರಭಾರಿ ಪಿಐ ಅರುಣಕುಮಾರ, ಸಿಬ್ಬಂದಿಗಳಾದ ಮಲ್ಲನಗೌಡ, ಸಿಕ್ರೇಶ್ವರ, ರಾಜಕುಮಾರ, ಉಮೇಶ, ಮುಜಾಹಿದ್, ಕರಣಕುಮಾರ, ಆರೇಶ, ಆತ್ಮಕುಮಾರ, ತುಕಾರಾಮ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು.

## ಜ. 20ರಿಂದ ಬಿಯರ್ ಬೆಲೆ ಹೆಚ್ಚಳ

ಮೊದಲ 9 ತಿಂಗಳಲ್ಲಿ ಅಬಕಾರಿಯಿಂದ ನಿರೀಕ್ಷಿತ ಆದಾಯ ಬಾರದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಬಜೆಟ್?ಗೂ ಮುನ್ನವೇ ಬಿಯರ್? ದರ ಏರಿಕೆ ಮಾಡಲು ನಿರ್ಧರಿಸಿದೆ.

ಜನವರಿ 20ರಿಂದ ಬಿಯರ್ ಬೆಲೆ ಕನಿಷ್ಠ 15 ರೂಪಾಯಿಯಿಂದ 50 ರೂಪಾಯಿ ವರೆಗೂ ಹೆಚ್ಚಳವಾಗುವ ಸಾಧ್ಯತೆ ಇದ್ದು, ಒಂದು ವೇಳೆ ಹೆಚ್ಚಳವಾದರೆ ಒಂದು ವರ್ಷದಲ್ಲಿ ಮೂರನೇ ಬಾರಿಗೆ ಬಿಯರ್ ಬೆಲೆ ಹೆಚ್ಚಳವಾದಂತೆ ಆಗುತ್ತದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅಬಕಾರಿ ಸಚಿವ ಆರ್ ಬಿ ತಿಮ್ಮಾಪುರ ಅವರು, ಬಿಯರ್ ಬೆಲೆ ಏರಿಕೆ ಕುರಿತಂತೆ ಚರ್ಚೆಗಳು ನಡೆಯುತ್ತಿವೆ. ಆದರೆ ಈ ಬಗ್ಗೆ ಅಂತಿಮ ನಿರ್ಧಾರವಾಗಿಲ್ಲ. ಬಿಯರ್ ಬೆಲೆ ಹೊರತುಪಡಿಸಿ ಬೇರೆ ಯಾವುದೇ ಮದ್ಯದ ಬೆಲೆಯ ಹೆಚ್ಚಳದ ಬಗ್ಗೆ ಚಿಂತನೆ ಇಲ್ಲ. ಆದರೆ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಇನ್ನು ಚರ್ಚಿಸಬೇಕಿದೆ ಎಂದು ಸ್ಪಷ್ಟಪಡಿಸಿದ್ದಾರೆ.

## ವೆಚ್ಚದ ಅಧ್ಯಯನ ನಡೆಯಲಿ:ಡಾ.ದಳವಾಯಿ

ಒಂದು ಕ್ವಿಂಟಾಲ್‌ಗೆ ಎಷ್ಟು ವೆಚ್ಚವಾಗುತ್ತದೆ ಎಂಬುವುದನ್ನು ತಿಳಿಸುತ್ತದೆ. ಉತ್ಪಾದನಾ ವೆಚ್ಚದ ದೇಶದ ಸರಾಸರಿ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಅನೇಕ ರಾಜ್ಯಗಳಲ್ಲಿರುವ ತಂತ್ರಜ್ಞಾನ, ವಾತವರಣ, ಇಳುವರಿ ಸೇರಿದಂತೆ ಇತರೆ ಕಾರಣಗಳಿಂದ ಪ್ರತಿಫಲಿಸುವುದಿಲ್ಲ. ಉತ್ಪಾದನಾ ವೆಚ್ಚ ಹೆಚ್ಚಿರುವ ರಾಜ್ಯಗಳಲ್ಲಿ ಎಂಎಸ್ಪಿ ರೈತರಿಗೆ ಲಾಭವಾಗುವುದಿಲ್ಲ ಎಂದರು.

ರಾಜ್ಯವಾರು, ಪ್ರಾದೇಶಿಕವಾರು ಎಂಎಸ್ಪಿಯನ್ನು ನಿಗದಿಪಡಿಸಬೇಕೆಂಬ ಹಲವು ರೈತರ ಬೇಡಿಕೆ ಈಡೇರಿಸಲು ಸಾಧ್ಯವಾಗುವುದಿಲ್ಲ. ಆದರೆ ರಾಜ್ಯಗಳಲ್ಲಿರುವ ಪ್ರಾಧಿಕಾರಗಳು ಸಮಿತಿಗಳಿಂದ ರಾಜ್ಯದ ರೈತರಿಗೆ ಆಗುವ ನಷ್ಟಗಳನ್ನು ಸರಿದೂಗಿಸಲು ಸ್ವಲ್ಪಮಟ್ಟಿಗೆ ಅನುಕೂಲವಾಗಲಿವೆ. ದೇಶದಲ್ಲಿ ಮಳೆ, ಉಷ್ಣಾಂಶ, ಹವಾಮಾನ ಮಣ್ಣು ಸೇರಿದಂತೆ 120ಕ್ಕೂ ಹೆಚ್ಚಿನ ಪ್ರಕಾರದ ಕೃಷಿವಲಯಗಳಿವೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಿರಿಧಾನ್ಯ ಹೆಚ್ಚಿದೆ. ಅದರಂತೆ ಆಯಾ ರಾಜ್ಯಗಳು ಆಯಾ ರಾಜ್ಯದಲ್ಲಿರುವ ರೈತರಿಗೆ ಅನುಕೂಲವಾಗುವ ಬೆಳೆಗಳ ಹಾಗೂ ಆ ಬೆಳೆಗಳಿಂದ ರೈತರಿಗೆ ಸಿಗುವ ಲಾಭದ ಅನುಗುಣವಾಗಿ ಕನಿಷ್ಟ ಬೆಂಬಲ ಬೆಲೆಯನ್ನು ನೀಡುವಂತೆ ಕೃಷಿ ಬೆಲೆ ಆಯೋಗ ನೀಡುವ ಸಲಹೆಗಳನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ ಅನುಕೂಲವಾಗಲಿದೆ ಎಂದು ಹೇಳಿದರು.

ಈ ವೇಳೆ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷರಾದ ಹನುಮಗೌಡ ಬೆಳಗುರ್ಕಿ ಅವರು ಮಾತನಾಡಿ, ರಾಜ್ಯದಲ್ಲಿ ಕೃಷಿ ವಲಯಕ್ಕೆ ಇಳುವರಿ ಹಾಗೂ ಬೆಲೆ ಗಂಡಾಂತರದಿಂದ ಹೊರಬಂದರೆ ಮಾತ್ರ ಕೃಷಿ ವಲಯ ಸಮೃದ್ಧವಾಗಿರುತ್ತದೆ. ಕೃಷಿ ವಲಯ ಹಾಗೂ ರೈತರಹಿತಕ್ಕಾಗಿ ಹಮ್ಮಿಕೊಂಡಿರುವ ಇಂದಿನ ಕಾರ್ಯಕ್ರಮದಲ್ಲಿ, ಜ್ಞಾನ, ಅನುಭವ, ಸಾಧನೆ ಹಾಗೂ ಸವಾಲುಗಳಿವೆ. ಕೃಷಿ ಬೆಲೆ ಆಯೋಗ ಎಂದರೇ ಕೇವಲ ಬೆಲೆ ಸಂಬಂಧಿಸಿದ ಆಯೋಗವಲ್ಲ. ಇದರಲ್ಲಿ ಕೃಷಿಯ ವಲಯಗಳಿಗೆ ಸಂಬಂಧಿಸಿದಂತೆ ಯಾವ ವಲಯಗಳಲ್ಲಿ ಯಾವ ಯಾವ ಬೆಲೆ ಬೆಳೆಯಬೇಕೆಂಬುವುದನ್ನು ಕೂಡ ಒಳಗೊಂಡಿದೆ ಎಂದರು.

ಕೃಷಿ ವಲಯಕ್ಕಿರುವ ಗಂಡಾಂತರಗಳನ್ನು ಕಳೆಯಬೇಕಾದರೇ ಮೊದಲು ನಿರ್ವಹಣೆ ಸರಿಯಾಗಿರಬೇಕು. ಕೃಷಿ ವಲಯದಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಬೆಳೆಯ ಬಿತ್ತನೆಗೂ ಮೊದಲೇ ಬೆಳೆ ಯೋಜನೆಯನ್ನು ನಿರ್ಧರಿಸಬಹುದಾಗಿದ್ದು, ಕೃತಕ ಬುದ್ಧಿಮತ್ತೆ ಎಂಬುವುದು ಕೃಷಿ ವಲಯಕ್ಕೆ ಒಂದು ಮೈಲುಗಲ್ಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಐಎಸ್‌ಇಇ ದಕ್ಷಿಣ ವಲಯದ ಅಧ್ಯಕ್ಷ ಡಾ.ಜಿ.ಈಶ್ವರಪ್ಪ, ಕೃಷಿ ವಿವಿ ಬೆಂಗಳೂರಿನ ಮಾಜಿ ವಿಸ್ತರಣಾ ನಿರ್ದೇಶಕ ಡಾ.ವೀರಭದ್ರಯ್ಯ, ಕೃಷಿ ತಂತ್ರಜ್ಞರ ಸಂಸ್ಥೆ ಬೆಂಗಳೂರಿನ ಕಾರ್ಯದರ್ಶಿ ವೀರಣ್ಣ ಕಮತರ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಜಯಪ್ರಕಾಶ, ಕೃಷಿಕ ಸಮಾಜದ ಅಧ್ಯಕ್ಷರಾದ ಸಿದ್ದಾರೆಡ್ಡಿ, ಕೃಷಿ ತಂತ್ರಜ್ಞರ ಸಂಸ್ಥೆಯ ಜಿಲ್ಲಾಧ್ಯಕ್ಷ ಆರ್.ಎ.ಪಾಟೀಲ್ ಸೇರಿದಂತೆ ಇತರರಿದ್ದರು.

ಈ ವೇಳೆ ಮೆಣಸಿನಕಾಯಿ ಬೆಳೆಗೆ ಬೆಂಬಲ ಬೆಲೆ, ತೊಗರಿ ಬೆಳೆಯನ್ನು ಗೋಡನ್‌ಗಳಲ್ಲಿ ಸಂಗ್ರಹಿಸಲು ಕ್ರಮ, ಬೀತ್ತನೆ ಬೀಜಗಳ ಉತ್ಪದನೆ ಹೆಚ್ಚಳಕ್ಕೆ ಕ್ರಮ, ನರ್ಸರಿ ಹಾಗೂ ರೈತರಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ, ಭತ್ತಕ್ಕೆ ಉತ್ತಮ ಬೆಂಬಲ ಬೆಲೆ ನಿರ್ಧಾರ ಹಾಗೂ ಉತ್ತಮ ಮಾರುಕಟ್ಟೆಯ ವ್ಯವಸ್ಥೆ, ಕೆಳ ಭಾಗದ ರೈತರ ಹೊಲಗಳಿಗೆ ಸಮರ್ಪಕ ನೀರು ಒದಗಿಸಲು ಕ್ರಮದ ಕುರಿತು ವಿವಿಧ ರೈತರಿಂದ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ.ಅಶೋಕ ಎಂ.ದಳವಾಯಿ ಅವರಿಗೆ ಪ್ರಶ್ನೆಗಳನ್ನು ಕೇಳಿದರು. ನಂತರದ ಆಯೋಗದ ಅಧ್ಯಕ್ಷರು ರೈತರ ವಿವಿಧ ಪ್ರಶ್ನೆಗಳಿಗೆ ಉತ್ತರಿಸಿದರು.

## ಸಂಸಾರ ಸುಧಾರಣೆ ಬಿ.ಕೆ ಶಿವಾನಿ

ನಾವು ಇತರರೊಂದಿಗೆ ಅಸಭ್ಯವಾಗಿ ವರ್ತಿಸಿದರೆ ಪಶ್ಚಾತ್ತಾಪ ಪಟ್ಟಿಕೊಂಡು ಅವರಿಗೆ ಮನದಲ್ಲಿ ಕ್ಷಮೆ ಕೇಳಬೇಕು. ನಮ್ಮ ಕರ್ಮವು ನಮ್ಮ ಭಾಗ್ಯ ಬರೆಯುತ್ತದೆ. ನಾವು ಒಂದು ಕ್ಷಣ ಕಣ್ಮುಚ್ಚಿ ವಿಶ್ವವನ್ನು ಗಮನ ಹರಿಸಿದಾಗ ವಿಶ್ವದಲ್ಲಿ ನಡೆಯುತ್ತಿರುವ ನಕರಾತ್ಮಕ ಘಟನಾವಳಿಗಳು, ಪರಸ್ಪರ ಧರ್ಮ-ಧರ್ಮಗಳ ಹಾಗೂ ಜಾತಿ, ಜಾತಿಗಳ ಮಧ್ಯ ದ್ವೇಷ, ಅಸುಯೆ, ಯುದ್ದ, ನಡಯುವುದು ಕಂಡು ಬರುತ್ತದೆ.

ಇದನ್ನು ಧಿಕ್ಕರಿಸಿ ಆಲೋಚನೆ, ಮಾತು ಹಾಗೂ ವ್ಯವಹಾರ ಸದಾ ಪರಿಶುದ್ದವಾಗಿರಬೇಕು. ಒಳ್ಳೆ ಕಾರ್ಯ ಮಾಡಬೇಕು. ನಮ್ಮ ಜೀವನವೆಂಬ ಚೆಂಡು ನಾವು ಎಸೆಯುವ ಚೆಂಡು ಕಾರ್ಯವಾಗಿದೆ. ವಾಪಸ್ಸು ಬರುವುದು ನಮ್ಮ ಭಾಗ್ಯ ಮಾತ್ರ. ನಮ್ಮ ಜೀವನ ಸುಂದರವಾಗಲು ಬಿಳಿ ಚೆಂಡು ಎಸೆಯಬೇಕು, ಜೀವನದಲ್ಲಿ ನಕರಾತ್ಮಕ ಘಟನಾವಳಿ ಇದ್ದರೆ ಅಲ್ಲಿ ಕಪ್ಪು ಚೆಂಡು ಎಸೆಯಲಾಗಿರುತ್ತದೆ. ನಮ್ಮ ಭಾಗ್ಯ ಬರೆಯುವುದು ಭಗವಂತನಲ್ಲ, ನಾವು ನಿತ್ಯ ಉತ್ತಮ ಕ್ರಿಯೆ ಮಾಡಿದರೆ ನಮ್ಮ ಭಾಗ್ಯ ತನ್ನಿಂದ ತಾನೆ ಸುಂದರವಾಗಲಿದೆ. ಇಂದು ಉತ್ತಮ ಕರ್ಮ ಮಾಡಿದರೂ ಕೆಲವೊಮ್ಮೆ ನಕರಾತ್ಮಕವಾಗಿ ಆಲೋಚಿಸುತ್ತೇವೆ. ಅದು ಸಂಪುರ್ಣವಾಗಿ ತೆಗದು ಹಾಕಲು ಸದಾ ಬಿಳಿ ಚೆಂಡು ಎಸೆಯಬೇಕಾತ್ತದೆ.

ನಾವು ಸದಾ ಬೆಂಕಿಯನ್ನು ನಂದಿಸುವ ಪಕ್ಷಿಯಾಗಬೇಕೆ ಹೊರತು ಚಿತೆ ಪ್ರಜ್ವಲಿಸಬಾರದು, ಇತರರ ಮನದಲ್ಲಿ ಚಿಂತೆ ಹೆಚ್ಚಿಸುವುದನ್ನು ಶಾಶ್ವತವಾಗಿ ಬಿಡಬೇಕು. ಅದಕ್ಕಾಗಿ ಸದಾ ಬಿಳಿ ಚೆಂಡು ಎಸೆಯುವ ಆತ್ಮವಾಗಬೇಕು. ಆಲೋಚನೆ ಬದಲಾದರೆ ಮಾತು ಬದಲಾಗುತ್ತದೆ.

## ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆಯ ಸಂಶೋಧನೆ ನಡೆದಲ್ಲಿ ರೈತ ಕಲ್ಯಾಣ ಸಾಧ್ಯ: ಡಾ.ಅಶೋಕ ದಳವಾಯಿ

ಮಲ್ಲಮ ನುಡಿ ವಾರ್ತೆ

ರಾಯಚೂರು ಜ.10 : ಕೃಷಿ ಕ್ಷೇತ್ರದಲ್ಲಿ ಮುಂಬರುವ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಯಾವ ರೀತಿಯಲ್ಲಿ ಬಳಕೆಯಾಗಬೇಕು ಎನ್ನುವ ಕುರಿತು ವಿಶ್ವವಿದ್ಯಾಲಯಗಳು ಸಂಶೋಧನೆ ಕೈಗೊಂಡಾಗ ರೈತ ಕಲ್ಯಾಣ ಹಾಗೂ ಕೃಷಿ ಸಮೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ.ಅಶೋಕ ಎಂ.ದಳವಾಯಿ ಅವರು ಪ್ರತಿಪಾದಿಸಿದರು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ, ದಕ್ಷಿಣ ವಲಯ ಭಾರತೀಯ ವಿಸ್ತರಣಾ, ಶಿಕ್ಷಣ ಸಂಘ, ಬೆಂಗಳೂರು ಹಾಗೂ ಹೈದರಾಬಾದ ಮತ್ತು ಬೆಂಗಳೂರುಗಳಲ್ಲಿ ಸ್ಥಿತ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಕೃಷಿ ತಾಂತ್ರಿಕ ವರ್ಗಾವಣೆ ಸಂಸ್ಥೆಗಳ ಸಹಯೋಗದೊಂದಿಗೆ ಜನವರಿ 10ರ ಶುಕ್ರವಾರ ಏರ್ಪಡಿಸಿದ್ದ ಕೃಷಿ ಮತ್ತು ಕೃಷಿ ಅವಲಂಬಿತ ವಿಸ್ತರಣಾ ಚಟುವಟಿಕೆಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ-ಯ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಎಲ್ಲಾ ಕಲ್ಯಾಣ ಇಲಾಖೆಗಳಿವೆ. ಆದರೆ, ರೈತ ಕಲ್ಯಾಣಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಇದು ಅತ್ಯಂತ ಕಳವಳಕಾರಿ ಸಂಗತಿ. ದೇಶದಲ್ಲಿ 2015ರಿಂದ ಕೃಷಿ ಕ್ಷೇತ್ರದಲ್ಲಿ ಈ ಪ್ರಮುಖ ಸವಾಲುಗಳು ತಲೆ ಎತ್ತುವಂತೆ ಮಾಡಿದೆ. ಕೃಷಿ ಕ್ಷೇತ್ರದ ಮೇಲೆ ಅಪಾರ ಅವಲಂಬನೆ ಮತ್ತು ಪರಿಸರ ಸಂರಕ್ಷಣೆ ನಮ್ಮ ಮುಂದಿನ ಬಹುದೊಡ್ಡ ಸವಾಲುಗಳಾಗಿವೆ. ದೇಶದಲ್ಲಿ ಶೇ.45 ರಷ್ಟು ಕಾರ್ಮಿಕ ಬಲವಿದೆ. ಇವರಿಗೆ ಉದ್ಯೋಗ ಒದಗಿಸುವ ವ್ಯವಸ್ಥೆ ಹೇಗೆ ಅನ್ನುವ ಸವಾಲು ನಮ್ಮ ಮುಂದಿದೆ ಎಂದರು.

ಕೃಷಿಯ ತಾಂತ್ರಿಕತೆ ಮತ್ತು ಹೆಚ್ಚಿನ ಲಾಭದ ಒತ್ತಡದ ಪರಿಣಾಮ ಕೃಷಿ ಪರಿಸರ ಸಂರಕ್ಷಣೆಯು ಮುಖ್ಯವಾಗಿದೆ. ಕಳೆದ ಕೆಲವು ವರ್ಷಗಳಿಂದ ಕೃಷಿ ಜಿಡಿಪಿ ಕಡಿಮೆಯಾಗಿವುದು ನಾವು ಗಮನಿಸಬಹುದಾಗಿದೆ. ಜಾಗತಿಕ ಈ ಕುಸಿತ ದೇಶದ ಕೃಷಿಯ ಮೇಲು ಪರಿಣಾಮ ಬೀರಿರುವುದನ್ನು ಅಲ್ಲಗಳೆಯಲಾಗದು. ಕೃಷಿ ಮತ್ತು ಮಾರುಕಟ್ಟೆ ಆದ್ಯತೆ ಮಧ್ಯೆ ಇಂದು ದೇಶವು ರೈತರ ಕಲ್ಯಾಣ, ಉದ್ಯೋಗ ಸೃಷ್ಟಿ ಸೇರಿದಂತೆ ಪರಿಸರ ಆರೋಗ್ಯ ಸಂರಕ್ಷಣೆಯ ಸವಾಲು ಎದುರಿಸುವಂತೆಯಾಗಿದೆ ಎಂದರು.

1947ರಲ್ಲಿ ದೇಶದಲ್ಲಿ ಕಾಣಿಸಿದ ಕೃಷಿ ಉತ್ಪನ್ನ ಕೊರತೆಯು ಕೋಟ್ಯಾಂತರ ಜನರ ಹಸಿವು ಮತ್ತು ಸಾವಿಗೆ ಕಾರಣವಾಗಿರುವುದು ಇತಿಹಾಸ. ಈ ಸಂಕಷ್ಟದಿಂದ ಹೊರಬರಲು ಅಂದಿನ ಪ್ರಥಮ ಪ್ರಧಾನಿ ನೆಹರು ಅವರು ಕೃಷಿಗೆ ಪ್ರಥಮ ಆದ್ಯತೆ ನೀಡಿ ಆರ್ಥಿಕ ಸುಧಾರಣೆಗೆ ಮುಂದಾದರು. ಇದರ ಪರಿಣಾಮ 1947ರಿಂದ 1965ರ 15ವರ್ಷಗಳ ಅವಧಿಯಲ್ಲಿ ದೇಶದ ಕೃಷಿ ಉತ್ಪನ್ನ ಕಾರ್ಯಕ್ರಮದಲ್ಲಿ ವೃದ್ಧಿಯಾಯಿತು.

## ರಸ್ತೆ ಅಪಘಾತ: ಓರ್ವನ ಸಾವು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.10:ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರು ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಜಿಲ್ಲೆಯ ಮುಧೋಳ ತಾಲೂಕಿನ ಜೀರಗಾಳ ಗ್ರಾಮದ ಹೊರವಲಯದಲ್ಲಿ ಗುರುವಾರ ಮಧ್ಯರಾತ್ರಿ ಸಂಭವಿಸಿದೆ.

ಮೃತ ವ್ಯಕ್ತಿಯನ್ನು ಸುನೀಲ ಮಾಸರಡ್ಡಿ ಎಂದು ಗುರುತಿಸಲಾಗಿದೆ. ಕಾರು ಹಾಗೂ ಟ್ರ್ಯಾಕ್ಟರ್ ನಡುವಿನ ಡಿಕ್ಕಿಯಿಂದಾಗಿ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದ್ದು ಕಬ್ಬು ತುಂಬಿದ್ದ ಟ್ರ್ಯಾಕ್ಟರ್ ಟ್ರೇಲರ್ ಪಲ್ಟಿಯಾಗಿದೆ. ಮುಧೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅರಮನೆ ಮೈದಾನದಲ್ಲಿ ಜ.14, 15 ರಂದು ಸಿದ್ದರಾಮೇಶ್ವರರ ಜಯಂತಿ ಉದ್ಘಾಟನೆಗೆ ಯಡಿಯೂರಪ್ಪ, ಸಮಾರೋಪದಲ್ಲಿ ಸಿಎಂ ಸಿದ್ದರಾಮಯ್ಯ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:

852ನೇ ಶ್ರೀ ಗುರು ಸಿದ್ದರಾಮೇಶ್ವರ ಜಯಂತಿ ಈ ಬಾರಿ ಬೆಂಗಳೂರಿನಲ್ಲಿ ಅರಮನೆ ಆವರಣದಲ್ಲಿ ಜ.14 ಮತ್ತು 15ರಂದು ಎರಡು ದಿನಗಳ ಕಾಲ ಆಯೋಜನೆ ಮಾಡಲಾಗಿದೆ ಎಂದು ಜಯಂತಿ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಎಸ್.ಎನ್.ಸಿದ್ದರಾಮಪ್ಪ ಹೇಳಿದ್ದಾರೆ.

ಪ್ರೆಸ್ ಕ್ಲಬ್‌ನಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಜಯಂತಿಯ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿ, ಕರ್ಮಯೋಗಿ ಸಿದ್ಧರಾಮೇಶ್ವರರ ಜಯಂತಿಯನ್ನು ನೊಳಂಬ ಲಿಂಗಾಯಿತ ಸಂಘದಿಂದ ಪ್ರತಿ ವರ್ಷವೂ ಮಾಡಿಕೊಂಡು ಬರಲಾಗುತ್ತಿದೆ ಎಂದರು.

12ನೇ ಶತಮಾನದಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸುವ ಮೂಲಕ ತನ್ನದೇ ಆದ ಕಾಯಕ ಮಾಡುತ್ತಿದ್ದ ಸಿದ್ದರಾಮ, ಅಲ್ಲಮಪ್ರಭುಗಳಿಂದ ದೀಕ್ಷೆ ಪಡೆದು ಬಸವಾದಿ



ಶಿವಶರಣರ ಜತೆಯಲ್ಲಿ ಶರಣ ತತ್ವಗಳನ್ನು ಅನುಷ್ಠಾನ ಮಾಡುತ್ತಿದ್ದ. ಅಂದಿನಿಂದಲೂ ಸಿದ್ದರಾಮನ ಭಕ್ತರು ಮತ್ತು ಅನುಯಾಯಿಗಳು ನಾಡಿನ ಉದ್ದಗಲಕ್ಕೂ ನೆಲೆಸಿದ್ದಾರೆ ಎಂದರು.

ನೊಳಂಬರು ಎಂದರೆ ಶ್ರಮಜೀವಿಗಳು. ರಾಜ್ಯದಲ್ಲಿ 12ನೇ ಶತಮಾನದಿಂದ 18ನೇ ಶತಮಾನದ ತನಕ ಸುಧೀಘವಾಗಿ ಆಳಿದ ಸಾಮಂತ ಮನೆತನಗಳಲ್ಲಿ ನೊಳಂಬ ಅರಸು ಮನೆತನವೂ ಒಂದು. ಈ ಸಂದರ್ಭದಲ್ಲಿ ನೊಳಂಬ ಸ್ಮರಣ ಸಂಚಿಕೆಯನ್ನು ಹೊರತರಲಾಗುತ್ತಿದೆ. ನೊಳಂಬ ಇತಿಹಾಸ ಸಾಕ್ಷ್ಯ ಚಿತ್ರವನ್ನು ಬಿಡುಗಡೆ ಮಾಡಲಾಗುತ್ತಿದ್ದು, ನೊಳಂಬ ವೆಬ್ ಸೈಟ್ ಅನಾವರಣ ಮಾಡಲಾಗುವುದು ಎಂದರು.

14 ರಂದು ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೆರಗೋಡಿ ರಂಗಾಪುರದ ಪೀಠಾಧ್ಯಕ್ಷ ಶ್ರೀ ಗುರು ಪರದೇಶಿ ಕೇಂದ್ರ ಸ್ವಾಮೀಜಿ, ಪಂಡಿತಾರಾಧ್ಯ ಸ್ವಾಮೀಜಿ,ಗೋಡೆಕೆರೆ ಸ್ವಾಮೀಜಿ, ಕುಪ್ಪೂರು ತಮ್ಮಡಿಹಳ್ಳಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಉದ್ಘಾಟನೆ ಮಾಡಲಿದ್ದಾರೆ. ಮಾಜಿ ಎಂಪಿ ಜಿ.ಎಸ್.ಬಸವರಾಜು ಅಧ್ಯಕ್ಷತೆ ವಹಿಸಲಿದ್ದು, ಅರಣ್ಯ ಸಚಿವ ಈಶ್ವರ ಖಂಡ್ರೆ, ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

15ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಸುತ್ತೂರು ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ, ಶಿಡ್ಲೇಹಳ್ಳಿ ಮಠದ ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮೀಜಿ, ಬೆಟ್ಟದಳ್ಳಿಗವಿಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರೋ ಭಾಷಣ ಮಾಡಲದಿದಾರೆ. ಸಚಿವರಾದ ಎಂ.ಬಿ.ಪಾಟೀಲ್, ಭೈರತಿ ಸುರೇಶ್, ಶಾಸಕ ಶಾಮನೂರು ಶಿವಶಂಕರಪ್ಪ ಎವರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಸಾಹಿತ್ಯ ಗೋಷ್ಠಿ ಏರ್ಪಡಿಸಿದ್ದು, ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ. ಮಹಿಳಾ ಮತ್ತು ಕೃಷಿ ಗೋಷ್ಠಿಯನ್ನು ಏರ್ಪಡಿಸಲಾಗಿದೆ. ಎರಡೂ ದಿನಗಳು ಸಾಂಸ್ಕೃತಿಕ ಕಾರ್ಯಕ್ರಮ, ಇಷ್ಟಲಿಂಗಪೂಜೆ, ಲಿಂಗಧಾರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನೊಳಂಬ ಸಂಘದ ಮಾಜಿ ಅಧ್ಯಕ್ಷ ಕಾಮನಕೆರೆ ಶಶಿಧರ್, ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಬೆಟ್ಟದಹಳ್ಳಿ ರೇಣುಕಾರಾಧ್ಯ, ವೈ.ಎಸ್.ಸಿದ್ದರಾಮೇಗೌಡ, ಎಚ್.ಆರ್. ಮಲ್ಲಿಕಾರ್ಜುನಯ್ಯ, ನೊಳಂಬ ಸಂಘದ ಕಾಮನಕೆರೆ ಶಶಿಧರ್, ಪದಾಧಿಕಾರಿಗಳಾದ ಎಚ್.ರಾಮಲಿಂಗಪ್ಪ, ರುದ್ರಪ್ಪ, ಎಸ್.ಆರ್.ನಟರಾಜ್, ಕುಬೇರಪ್ಪ, ಜಿ.ಎಸ್.ಧನಂಜೇಯ ಮತ್ತಿತರರು ಹಾಜರಿದ್ದರು

## ಜ.14 ರಂದು ವಿ.ಸೋಮಣ್ಣ ಅವರಿಂದ ರೈಲ್ವೆ ಮೇಲ್ಸೇತುವೆ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಸಾರ್ವಜನಿಕರ ಅನುಕೂಲಕ್ಕೆನಿರ್ಮಾಣಗೊಂಡಿರುವ ರೈಲ್ವೆ ಗೇಟ್ ನಂಬರ 66 ರಲ್ಲಿ (ಕುಷ್ಟಗಿ) ಬಳಿ ನಿರ್ಮಿಸಿರುವ ರೈಲ್ವೆ ಮೇಲ್ಸೇತುವೆಯನ್ನು ಜನೇವರಿ 14 ರಂದು ಉದ್ಘಾಟನೆ ಮಾಡಲು ದಿನಾಂಕ ನಿಗಧಿಯಾಗಿದೆ.

ಕೊಪ್ಪಳದ ಬಿಜೆಪಿ ಪಕ್ಷದ ಕಾರ್ಯಕಾರಣಿ ಸದಸ್ಯ ಡಾ.ಬಸವರಾಜ ಎಸ್ ಕ್ಯಾವಟರ್ ಅವರು ರೈಲ್ವೆ ಮೇಲ್ಸೇತುವೆಯನ್ನು ಜನರ ಅನುಕೂಲಕ್ಕಾಗಿ ಹಾಗೂ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಜನರಿಗೆ ಉಪಯೋಗವಾಗಲು ಆದಷ್ಟು ಬೇಗನೆ ಉದ್ಘಾಟನೆ ಮಾಡಬೇಕು ಎಂದು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದರು.

ಮನವಿಗೆ ಸ್ಪಂದಿಸಿದ ಸಚಿವರು ಮೇಲ್ಸೇತುವೆಯನ್ನು ಉದ್ಘಾಟನೆ ಮಾಡಲು ಒಪ್ಪಿಗೆಯನ್ನು ಸೂಚಿಸಿದ್ದಾರೆ.

ಸಚಿವರು ತಿಳಿಸುವಂತೆ ಜನೇವರಿ 14 ರಂದು ಉದ್ಘಾಟನೆಯ ದಿನಾಂಕವನ್ನು ನಿಗಧಿ ಮಾಡಲಾಗಿದೆ. ಮೇಲ್ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರು ಕೂಡ ಭಾಗವಹಿಸಿ ಮೇಲ್ಸೇತುವೆಯನ್ನು ಉದ್ಘಾಟನೆ ಮಾಡಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಭೀಮಾತೀರದಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆ..!

ಮಲ್ಲಮ್ಮ ನುಡಿ ವಾರ್ತೆ

ಇಂಡಿ : ಅಪರಿಚಿತ ವ್ಯಕ್ತಿಯ ಶವವೊಂದು ಭೀಮಾನದಿಯಲ್ಲಿ ಪತ್ತೆಯಾಗಿರುವ ಘಟನೆ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಳೆ ಪಡನೂರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಅಪ್ಪಾಸಾಹೇಬ್ ಎಂಬುವರ ಜಮೀನ ಬಳಿಯ ಭೀಮಾನದಿಯಲ್ಲಿ ಸುಮಾರು 30–35 ವಯಸ್ಸಿನ ಪುರುಷನ ಶವ ಸಿಕ್ಕಿದೆ. ಇದು ಕೊಲೆಯೋ ಅಥವಾ ಆತ್ಮಹತ್ಯೆಯೋ ಎಂಬುದು ಪೊಲೀಸ ತನಿಖೆ ಬಳಿಕ ತಿಳಿದುಬರಬೇಕಿದೆ.

ಅಲ್ಲದೇ, ಶವ ಬಲಗೈ ಮೇಲೆ ಮಾರಾಠಿಯಲ್ಲಿ ಬಾಬಾ ಮಮತಾ ಅಕ್ಕಲಕೋಟ ಅಂತಾ ಟ್ಯಾಟೂ ಮತ್ತು ಬಲಗೈಯಲ್ಲಿ ಕೇಸರಿ ಬಣ್ಣದ ಕಾಸಿದಾರ್ ಮತ್ತು ಬಳಗಾಲಿನಲ್ಲಿ ಕಪ್ಪು ಬಣ್ಣದ ಕಾಸಿದಾರ ಕಟ್ಟಿದ್ದು, ಮೈಮೇಲೆ ಹಾಕಲೇಟ್ ಬಣ್ಣದ ಅಂಡರ್ ವಿಯರ್ ಮಾತ್ರ ಇದೆ. ಅದಕ್ಕಾಗಿ ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಇಂಡಿ ಗ್ರಾಮೀಣ ಪೊಲೀಸ್ ಠಾಣೆಗೆ ಸಂಪರ್ಕಿಸಲು ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ

## ಶಿಕ್ಷಣ ವಾಹನ ಚಾಲಕರ ಸಂಘ ವತಿಯಿಂದ ಕ್ಯಾಲೆಂಡರ್ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ. 09 :– ಹೊಸ ವರ್ಷದ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಹಾಗೂ ವೈದ್ಯಕೀಯ ಶಿಕ್ಷಣ ವಾಹನ ಚಾಲಕರು ಹೊರತಂದಿರುವ ಕ್ಯಾಲೆಂಡರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಭಾಂಗಣದಲ್ಲಿ ಉದ್ಘಾಟಕರಾದ ಡಾ॥ ಧ್ಯಾನೇಶ್ವರ ನಿರಗುಡೆ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ಅವರೊಂದಿಗೆ ಸಹಕರಿಸಿದರು.

ಇದೇ ಸಂದರ್ಭದಲ್ಲಿ ವಾಹನ ಚಾಲಕರಾದ ಗೌರಧ್ಯಕ್ಷರು ಶ್ರೀ ಸೂರ್ಯಕಾಂತ ಪಾಟೀಲ, ಮತ್ತು ಅಧ್ಯಕ್ಷರು ಶ್ರೀ ರವೀಂದ್ರ ಕೊಳಾರ, ಉಪಾಧ್ಯಕ್ಷರು ಪವನ ಪಾಟೀಲ, ಹಾಗು ಶರೀಫ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಲಾಲಯ್ಯ ಮರಕುಂದಾ, ಕಾರ್ಯಧ್ಯಕ್ಷರಾದ ಶ್ರೀ ಮಾರುತಿ ಎಂ ಬಾನೆ, ಖಜಾಂಜಿ ಶ್ರೀ ರಾಜಕುಮಾರ್ ಕೋಡಿಗೆ, ಸಮಸ್ತ ಪದಾಧಿಕಾರಿಗಳು ಹಾಜರಿದ್ದರು.

ಜಿ.ಪಂ. ಸಿ.ಇ.ಓ. ಅವರು ವಿವಿಧ ಗ್ರಾಮ ಪಂಚಾಯಿತಿಗಳಿಗೆ

## ಭೇಟಿ ನೀಡಿ ಘನತ್ಯಾಜ್ಯ ವಿಲೇವಾರಿ ಘಟಕ ಪರಿಶೀಲನೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.10–ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಬುಧವಾರ ಕಲಬುರ್ಗಿ ತಾಲೂಕಿನ ಭೀಮಳ್ಳಿ ಪಟ್ಟಣ, ಸಾವಳಗಿ(ಬಿ), ಮೇಳಕುಂದ(ಬಿ), ಕಡಣಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕೂಸಿನ ಮನೆ ನಿರ್ವಹಣೆ ಹಾಗೂ ಸ್ವಚ್ಛತಾ ವಾಹಿನಿ ಘನ ತ್ಯಾಜ್ಯ ವಿಲೇವಾರಿ ಘಟಕದ ಬಗ್ಗೆ ಪರಿಶೀಲಿಸಿದರು.

ಅವರು ಸ್ವಚ್ಛ ವಾಹಿನಿಯಲ್ಲಿ ಕುಳಿತು ಉಕಖಈ ಮಹಿಳಾ ವಾಹನ ಡ್ರೈವರ್‌ರವರ ವಾಹನ ಚಲಾವಣೆಯನ್ನು ಪರೀಕ್ಷಿಸಿ ಪ್ರೋತ್ಸಾಹಿಸಿದರು.

ಇದೇ ಸಂದರ್ಭದಲ್ಲಿ ಕಲಬುರಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಮ್.ಡಿ. ಸೈಯದ್ ಪಟೇಲ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಐ.ಇ.ಸಿ ನರೇಗಾದ ಮೋಸಿನ್ ಖಾನ್, ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಗ್ರಾಮದ ಜನರು ಉಪಸ್ಥಿತರಿದ್ದರು.

## ಜಲ ಮಂಡಳಿಯಿಂದ ನೀರಿನ ಅದಾಲತ್

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಜನವರಿ,10– ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಾದ ಉತ್ತರ–2–1, ದಕ್ಷಿಣ–1–1, ದಕ್ಷಿಣ–2–1, ನೈರುತ್ಯ –1, ನೈರುತ್ಯ – 4, ಪೂರ್ವ –1–2, ಪೂರ್ವ –2–2, ಆಗ್ನೇಯ – 2, ಆಗ್ನೇಯ – 5, ಪಶ್ಚಿಮ–1–2 ಮತ್ತು ಪಶ್ಚಿಮ–2–2, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಜನವರಿ 09 ರಂದು ಬೆಳಿಗ್ಗೆ 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ.

## ರೈಲು ಓಡಾಟ ಪ್ರಾರಂಭಿಸಿ ರೈಲ್ವೆ ಸಚಿವರಿಗೆ ಡಾ. ಬಸವರಾಜ್ ಕ್ಯಾವಟರ್ ಮನವಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಸುಮಾರು ವರ್ಷಗಳಿಂಧ ನಡೆಯುತ್ತಿರುವ ಗದಗ–ವಾಡಿ ಹೊಸ ರೈಲು ಮಾರ್ಗದ ಕಾಮಗಾರಿ ಕುಷ್ಟಗಿಯವರೆಗೆ ಮುಗಿದಿದ್ದು, ಕುಷ್ಟಗಿವರೆಗೆ ರೈಲು ಓಡಿಸಲು ಒತ್ತಾಯಿಸಿ, ಬಿಜೆಪಿ ಕಾರ್ಯಕಾರಣಿ ಸದಸ್ಯ ಡಾ. ಬಸವರಾಜ ಎಸ್ ಕ್ಯಾವಟರ್ ಹಾಗೂ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಅವರು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರಿಗೆ ಗುರುವಾರ ಬೆಂಗಳೂರಿನಲ್ಲಿ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿರುವ ಅವರು, ಗದಗ ವಾಡಿ ರೈಲ್ವೆ ಕಾಮಗಾರಿಯು ಕುಷ್ಟಗಿಯವರೆಗೆ ಪೂಣ9ಗೊಂಡಿದೆ. ಅಲ್ಲಿಯವರೆಗೆ ರೈಲು ಓಡಿಸಲು ಮುಂದಾಗಬೇಕು. ಕುಷ್ಟಗಿ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗಿದೆ. ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ, ಎಪಿಎಂಸಿ ಮಾರುಕಟ್ಟೆಗೆ, ವ್ಯಾಪಾರಕ್ಕೆಂದು ಕುಷ್ಟಗಿ ಭಾಗದ ರೈತರು, ವ್ಯಾಪಾರಿಗಳು, ಸಾರ್ವಜನಿಕರು ಹುಬ್ಬಳ್ಳಿ, ಗದಗ ಜಿಲ್ಲೆಗಳಿಗೆ ದುಬಾರಿ ವೆಚ್ಚವನ್ನು ಮಾಡಿ ಹೋಗಬೇಕಾಗಿದೆ. ರೈಲು ಓಡಿಸುವುದರಿಂದ ಅಲ್ಲಿನ ವ್ಯಾಪಾರಿಗಳಿಗೆ, ರೈತರಿಗೆ, ಸಾವ9ಜನಿಕರಿಗೆ ಸಾಕಷ್ಟು ಅನುಕೂಲವಾಗಲಿದೆ.

ಕಾಮಾಗಾರಿ ಪೂರ್ಣಗೊಂಡಿರುವ ಕಾರಣಕ್ಕೆ ರೈಲು ಓಡಿಸಿದರೆ ಜನರಿಗೆ ಇದರಿಂದ ಪ್ರಯೋಜನವಾಗಲಿದೆ. ಇನ್ನೂ 2025–26ನೇ ಸಾಲಿನ ಬಜೆಟ್ ನಲ್ಲಿ ಜಿಲ್ಲೆಯ ಹೊಸ ರೈಲು ಮಾರ್ಗಗಳಾಗಿರುವ ಭಾಗಲಕೋಟೆ, ಗಂಗಾವತಿ, ದರೋಜಿ ಗಂಗಾವತಿ, ಆಲಮಟ್ಟಿ ಚಿತ್ರದುರ್ಗ ಈ ರೈಲು ಮಾರ್ಗಗಳಿಗೆ ಬಜೆಟ್ ನಲ್ಲಿ ಅನುದಾನವನ್ನು ಒದಗಿಸಬೇಕು.

ಇದರ ಜತೆಗೆ ಕೊಪ್ಪಳ, ಹುಲಗಿ, ಮುನಿರಬಾದ್ ರೈಲು ನಿಲ್ದಾಣಗಳ ಕಾಮಗಾರಿಯನ್ನು ಆದಷ್ಟು ಬೇಗನೇ ಪೂರ್ಣಗೊಳಿಸಬೇಕು. ಇನ್ನೂ ರದ್ದಾಗಿರುವ ಬೆಳಗಾವಿ ಹೈದರಾಬಾದ್ ರೈಲನ್ನು ಪುನರಾಂಭ ಮಾಡಬೇಕು. ತಿರುಪತಿ ಕೊಲ್ಲಾಪೂರ ಮದ್ಯೆ ಗುಂತಕಲ್, ಹೊಸಪೇಟೆ, ಹುಬ್ಬಳ್ಳಿ ಮಾರ್ಗವಾಗಿ ವಂದೇ ಭಾರತ್ ರೈಲು ಪ್ರಾರಂಭಿಸಬೇಕು.

ಸಾಮಾಜಿಕವಾಗಿ , ಆಥಿ9ಕ. ಪ್ರಗತಿಗಾಗಿ ಕುಷ್ಟಗಿ ಗೋಕಾಕ, ರಾಯಚೂರ ಬೆಳಗಾವಿ ಹೊಸ ರೈಲು ಮಾರ್ಗಗಳನ್ನು ಸರ್ವೇ ಕಾರ್ಯ ಪ್ರಾರಂಭಿಸಬೇಕು ಎಂದು ಮನವಿ ಸಲ್ಲಿಸಿದರು.

## ಎಸ್.ಸಿ.ಪಿ –ಟಿ.ಎಸ್.ಪಿ ಯೋಜನೆ ಪ್ರಗತಿ ಪರಿಶೀಲನಾ ಸಭೆ: ಮಾರ್ಚ್ ವರೆಗೆ ಕಾಯದೆ ಶೇ.100ರಷ್ಟು ಪ್ರಗತಿ ಸಾಧಿಸಬೇಕು –ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ.



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ,ಜ.10– ಪ್ರಸಕ್ತ ಆರ್ಥಿಕ ಸಾಲಿಗೆ ಆಯಾ ಇಲಾಖೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಅಭಿವೃದ್ಧಿಗೆ ಎಸ್.ಸಿ.ಪಿ.,ಟಿ.ಎಸ್.ಪಿ. ಯೋಜನೆಯಡಿ ನೀಡಲಾದ ಅನುದಾನವನ್ನು ಮಾರ್ಚ್ ಅಂತ್ಯದವರೆಗೆ ಕಾಯದೆ ಕಾಲಮಿತಿಯಲ್ಲಿ ಖರ್ಚು ಮಾಡಿ, ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ. ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ಎಸ್.ಸಿ.ಎಸ್.ಪಿ.,ಟಿ.ಎಸ್.ಪಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೊನೆಗಳಿಗೆಯಲ್ಲಿ ತರಾತುರಿಯಲ್ಲಿ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧಿಸುವ ಬದಲು, ಅಯಾ ಮಾಹೆಗೆ ಅನುಗುಣವಾಗಿ ಕಾಲಮಿತಿಯಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದರು.

ಎಸ್.ಸಿ.ಪಿ.,ಟಿ.ಎಸ್.ಪಿ ಅನುದಾನ ಯಾವುದೇ ಕಾರಣಕ್ಕೂ ಬಾಕಿ ಉಳಿಸಿಕೊಳ್ಳಬಾರದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಅವರು, ಪರಿಶಿಷ್ಟರ ಶ್ರೇಯೋಭಿವೃದ್ಧಿಗೆ ನೀಡಲಾದ ಅನುದಾನ ಆ ಸಮುದಾಯ ಜನ ಕಲ್ಯಾಣಕ್ಕೆಯೇ ಬಳಸಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ನಿಗಮದಿಂದ ಭೂ ಒಡೆತನ ಯೋಜನೆಯಡಿ ಅರ್ಹರಿಗೆ ಜಮೀನು ಹಂಚಿಕೆ ಮಾಡಬೇಕು. ಸಾಲ ಮಂಜೂರಾತಿಗೆ ನಿಗಮಗಳು ಅನಗತ್ಯ ದಾಖಲೆ ಕೇಳಿ ಫಲಾನುಭವಿಗಳನ್ನು ಕಚೇರಿಗೆ ಅಲೆದಾಡಿಸಬಾರದು. ಗ್ರಾಮೀಣ ಭಾಗದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಿಸಲು ಈಗಾಗಲೆ ಟೆಂಡರ್ ಕರೆದಿದ್ದರಿಂದ, ಅರ್ಹ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಿ ಹೊಲಿಗೆ ಯಂತ್ರ ವಿತರಿಸಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎಸ್.ಎಸ್. ಚೆನ್ನಬಸಪ್ಪ ಅವರು ಮಾತನಾಡಿ, ಪ್ರಸಕ್ತ 2024–25ನೇ ಸಾಲಿಗೆ ಜಿಲ್ಲೆಗೆ ವಿಶೇಷ ಘಟಕ ಯೋಜನೆ ಮೂರನೇ ತ್ರೈಮಾಸಿಕ ಅಂತ್ಯದ ವರೆಗೆ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ–ಗಿರಿಜನ ಉಪ ಯೋಜನೆಯಡಿ ಇಲಾಖಾವಾರು ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿಯ ವಿವರ ನೀಡಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವೀರನಗೌಡ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯ ಉಪನಿರ್ದೇಶಕ ರಾಜು ದೇಖಮುಖ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕನಿರ್ದೇಶಕಿ ಉತ್ತರಾದೇವಿ ಮಠಪತಿ ಸೇರಿದಂತೆ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಕಲಚೇತನರು ಸರ್ಕಾರದ ಯೋಜನೆಗಳ ಸದುಪಯೋಗಪಡಿಸಿಕೊಳ್ಳಿ : ವೀರೇಶ ಹಾಲಗುಂಡಿ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ತಾಲೂಕಿನಹೀರೆಸಿಂದೋಗಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರ ಜಿಲ್ಲಾಡಳಿತ ಜಿಲ್ಲಾ ಪಂಚಾಯಿತಿ ವಿಕಲಚೇತನ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಗ್ರಾಮ ಪಂಚಾಯತಿ ಕಾರ್ಯಾಲಯ ಹಿರೇಸಿಂದೋಗಿ ಸಯೋಗದಲ್ಲಿ ವಿಕಲಚೇತನರ ಸಮನ್ವಯ ಗ್ರಾಮ ಸಭೆ ಹಮ್ಮಿಕೊಳ್ಳಲಾಗಿತ್ತು.

ಸಭೆ ಉದ್ದೇಶ ಕರ್ನಾಟಕ ರಾಜ್ಯ ವಿಕಲಚೇತನರ ಆರ್ ಪಿ ಡಿ ಟಾಸ್ಕ್ ಫೋರ್ಸ್ ಪ್ರಧಾನ ಕಾರ್ಯದರ್ಶಿ ವೀರೆಶ ಹಾಲಗುಂಡಿ ಮಾತನಾಡಿ ವಿಕಲಚೇತನರಿಗೆ ಸರಕಾರದಿಂದ ಹಲವಾರು ಕಾರ್ಯಕ್ರಮಗಳನ್ನ ಹಾಗೂ ಯೋಜನೆಗಳನ್ನು ಜಾರಿಗೆ ತಂದಿದೆ ಅವುಗಳ ಉಪಯೋಗ ಪಡೆಯಬಹುದು ವಿಕಲಚೇತನರ ಕೀಳಹಿರಿಮೆಯಿಂದ ಹೊರ ಬಂದು ಸಾವಲಂಬಿ ಜೀವನವನ್ನು ಸಾಗಿಸಬೇಕು ವಿಕಲಚೇತನರ ಶ್ರಯೋಭಿವೃದ್ಧಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ 5 ರಷ್ಟು ಮೀಸಲಾತಿ ಅನುದಾನದಲ್ಲಿ ಹಲವಾರು ಯೋಜನೆಗಳನ್ನು ಸೇವಾ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾದ ಜೀವನವನ್ನು ನಡೆಸಬೇಕು ಇಲಾಖೆ ಮೂಲಕ ವಾಹನ ವಿತರಣೆ ಸಾಧನ ಸಲಕರಣೆ ವಿತರಣೆ ಶ್ರವಣ ದೋಷ ಉಳ್ಳವರಿಗೆ ಹೊಲಿಗೆ ಯಂತ್ರ ದೃಷ್ಟಿದೋಷವುಳ್ಳವರಿಗೆ ಬ್ರೈಲ್ ಕಿಟ್ ಮಾತನಾಡುವ ಲ್ಯಾಪ್ಟಾಪ್ ಶಿಶು ಪಾಲನ ಭತ್ಯೆ ಶುಲ್ಕ ಮರುಪಾವತಿ, ಪ್ರೋತ್ಸಾಹ ಧನ, ಶಿಷ್ಯವೇತನ, ವಿವಾಹ ಪ್ರೋತ್ಸಾಹ ಧನ, ಸಾಧನ ಯೋಜನೆ ಆದರ್ ಯೋಜನೆ, ಪ್ರತಿಭಾ ಯೋಜನೆ ಇನ್ನೂ ಹತ್ತಲುವಾರು ಯೋಜನೆಗಳನ್ನ ಇಲಾಖೆ ಮುಖಾಂತರ ಅನುಷ್ಠಾನಗೊಳಿಸುತ್ತದೆ ಇವುಗಳ ಉಪಯೋಗವನ್ನು ವಿಕಲಚೇತನರು ಇದರ ಸದುಪಯೋಗ ಪಡೆಯಬೇಕು ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ವೃತ್ತಿ ಆಧಾರಿತ ಕೌಶಲ್ಯ ತರಬೇತಿ ನೀಡಿ ಸ್ವಯಂ ಉದ್ಯೋಗಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ತಿಳಿಸಿದರು.

ನಂತರದಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ಸಿದ್ದಲಿಂಗಯ್ಯ ಗೊರ್ಲೆಕೊಪ್ಪ ಅವರು ತಮ್ಮ ಕೆಲಸದ ವಾರ್ಷಿಕ ವರದಿಯನ್ನು ಕೆಲವು ಕಾರ್ಯಕ್ರಮಗಳ ಮಾಹಿತಿಯನ್ನು ಹಂಚಿಕೊಂಡರು ಸ್ವಸಹಾಯ ಸಂಘ ರಚನೆ ಆರೈ–ಕೆದಾರರ ಸಂಘ ರಚನೆ ಮಾಹಿತಿ ಹಂಚಿಕೊಂಡರು ತದನಂತರದಲ್ಲಿ ಪಂಚಾಯಿತಿ ಕಾರ್ಯದರ್ಶಿಗಳಾದ ಮಹೇಶ್ವರಯ್ಯ ಹಿರೇಮಠ ಅವರು ಗ್ರಾಮ ಪಂಚಾಯತಿಯ ರಾಷ್ಟ್ರೀಯ ಉದ್ಯೋಗ್ ಖಾತ್ರಿ ಯೋಜನೆ, ಆಶ್ರಯ ಯೋಜನೆ ವಿವಿಧ ಸೌಲಭ್ಯಗಳ ಕುರಿತು ಮಾಹಿತಿಯನ್ನು ತಿಳಿಸಿದರು ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ರೇಣುಕಮ

ಸ್ಪಂದನ ಸಂಸ್ಥೆಯ ಗವಿ ಸಿದ್ದಪ್ಪ ಹಲಿಗಿ ಕರ್ನಾಟಕ ರಾಜ್ಯ ವಿಕಲಚೇತನ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ್ ವೈಜಾರ್ ಆರ್ ಪಿ ಡಿ ಟಾಸ್ಕ್ ಫೋರ್ಸ್ ಪ್ರಧಾನ ಕಾರ್ಯದರ್ಶಿ ವೀರೇಶ ಹಾಲಗುಂಡಿ ಕಂಪ್ಯೂಟರ್ ಆಪರೇಟರ್ ಪ್ರಶಾಂತ್ ಪಾಟೀಲ್, ಪಂಚಾಯಿತಿ ಸಿಬ್ಬಂದಿ ಮಲ್ಲಿಕಾರ್ಜುನ್, ಹನುಮಂತ ಗ್ರಾಮೀಣ ವಸತಿ ಕಾರ್ಯಕರ್ತರಾದ ಶ ಸಿದ್ದಲಿಂಗಯ್ಯ, ಅನಸೂಯಾ ಕಾತರಕಿ, ಲಕ್ಷ್ಮಿ ಬಿಸರಳ್ಳಿ, ಭರಮಪ್ಪ ಹುರಿಜೋಳ, ವಿಕಲಚೇತನರ ಭಾಗವಹಿಸಿ ಯಶಸ್ವಿಗೊಳಿಸಿದರು.

## ಶಾಲಾ ಮಕ್ಕಳನ್ನು ಕೆಲಸಕ್ಕೆ ಕರೆದೊಯ್ಯುವ ಸರಕು ಸಾಗಣೆ ವಾಹನಗಳ ಮೇಲೆ ಮುಂದುವರೆದ ದಾಳಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.10 : ರಾಯಚೂರು ಸಹಾಯಕ ಆಯುಕ್ತರ ಆದೇಶದಂತೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ದೇವದುರ್ಗ ತಾಲೂಕು ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ ಹಾಗೂ ದೇವದುರ್ಗ ಟ್ರಾಫಿಕ್ ಪೊಲೀಸ್ ಠಾಣೆ ಪಿ.ಎಸ್.ಐ ನಾರಾಯಣ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತಿಕ್ಕಯ್ಯ, ಹುಸೇನ್ ನಾಯ್ಕ ಮತ್ತು ತಂಡದವರು ಜನವರ್ರಿರಂದು ದೇವದುರ್ಗ ತಾಲೂಕಿನಲ್ಲಿ ಸರಕು ಸಾಗಣೆ ವಾಹನಗಳ ಮೇಲೆ ದಾಳಿ ನಡೆಸಿ ಮತ್ತೆ 15 ಮಕ್ಕಳನ್ನು ರಕ್ಷಿಸಿದ್ದಾರೆ.

ಸಾರಿಗೆ ನಿರೀಕ್ಷಕರಾದ ರಾಕೇಶ್ ಎಮ್., ಇ.ಸಿ.ಓಗಳಾದ ರಾಜನಗೌಡ, ವೆಂಕಟೇಶ, ಬಿ.ಆರ್.ಪಿಗಳಾದ ಶಿವಕುಮಾರ ನಾಡಗೌಡ, ವೆಂಕಟಾಚಲಪತಿ, ಸಿ.ಆರ್.ಪಿಗಳಾದ ಸೋಮಶೇಖರ ದೊರೆ, ಟ್ರಾಫಿಕ್ ಪೊಲೀಸ್ ಠಾಣೆ ಸಿಬ್ಬಂದಿ ಸಂಗಪ್ಪ, ಮೋಹನ್, ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆಯ ಬಸವಲಿಂಗ ಮೇತ್ರಿ, ಮತ್ತು ನಾಗರಾಜ ಮತ್ತು ತಂಡದವರು ಜನವರಿ 9ರಂದು ದೇವದುರ್ಗ ತಾಲೂಕಿನಲ್ಲಿ ಕಾರ್ಯಾಚರಣೆ ಕೈಗೊಂಡು ಮಕ್ಕಳನ್ನು ರಕ್ಷಿಸಿದ್ದಾರೆ.

ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಚಟುವಟಿಕೆಗಳಿಗಾಗಿ ಸರಕು ಸಾಗಣೆ ವಾಹನಗಳಲ್ಲಿ ಕರೆದುಕೊಂಡು ಹೋಗಿ ಬಾಲಕಾರ್ಮಿಕತೆಯಲ್ಲಿ ತೊಡಗಿಸುತ್ತಿದ್ದ 05 ವಾಹನಗಳನ್ನು ಜಪ್ತಿ ಮಾಡಿ ವಾಹನ ಮಾಲೀಕರು ಹಾಗೂ ಚಾಲಕರ ವಿರುದ್ಧ ಪೊಲೀಸ್ ಹಾಗೂ ಸಾರಿಗೆ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಿದ್ದಾರೆ.

ವಾಹನಗಳಲ್ಲಿ ಒಟ್ಟು 15 ಮಕ್ಕಳು ಕಂಡುಬಂದಿದ್ದು, ಆ ಎಲ್ಲಾ ಮಕ್ಕಳನ್ನು ಕೆಲಸಕ್ಕೆ ಹೋಗುವುದನ್ನು ತಡೆದು ಸಂಬಂಧಪಟ್ಟ ಶಾಲೆಗಳಲ್ಲಿ ಪುನಃ ದಾಖಾಲಿಸಲಾಯಿತು.

ಜಿಪಂ ಸಿಇಓ ಅವರಿಂದ ಜಲಜೀವನ್ ಮಿಷನ್ ಯೋಜನೆಯ

## ಬಹುಗ್ರಾಮ ಕುಡಿವ ನೀರಿನ ಕಾಮಗಾರಿಗಳ ಕ್ಷೇತ್ರ ಭೇಟಿ; ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.10–ಜಿಲ್ಲೆಯ ಲಿಂಗಸುಗೂರು ತಾಲೂಕಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಡಿಬಿಟಿಎಮ್‌ವಿಎಸ್ ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗಳ ಭೌತಿಕ ಪ್ರಗತಿಯನ್ನು ರಾಯಚೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಮ ಪಾಂಡ್ವೆ ಅವರು ಜನವರಿ 8ರಂದು ನಾರಾಯಣಪುರ ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ನಾರಾಯಣಪುರ ಜಲಾಶಯದ ಹಿನ್ನೀರಿನ ಭಾಗದಲ್ಲಿ ಇನ್‌ಟೇಕ್ ಕಂ ಜಾಕ್‌ವೆಲ್ ಹೆಡ್‌ವರ್ಕ್ ಸಂಪರ್ಕ ಸೇತುವೆಯನ್ನು ವೀಕ್ಷಿಸಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಗುಣಮಟ್ಟದೊಂದೊಗೆ ಪೂರ್ಣಗೊಳಿಸಲು ಸೂಚಿಸಿದರು.

ಚಿತ್ತಾಪೂರಗ್ರಾಮದನಾರಾಯಣಪೂರ ಜಲಾಶಯದ ವ್ಯಾಪ್ತಿಯಲ್ಲಿ ಕೈಗೊಂಡಿರುವ 160 ಎಂಎಲ್ಡಿ ನೀರು ಸಂಸ್ಕರಣಾ ಘಟಕನ ಏರೇಟರ್, ಕ್ಲಾರಿಫ್ಲೋಕ್ಯುಲೇಟರ್, ಶೋಧನೆ, ಕ್ಲೋರಿನೇಷನ್ 16 ಶೋಧನೆ ಹಾಸಿಗೆ ಪೂರ್ಣಗೊಳಿಸಿರುವುದನ್ನು ಹಾಗೂ ನಿರ್ಮಾಣದ ವಿವಿಧ ಹಂತಗಳಲ್ಲಿರುವ ವಿವಿಧ ಘಟಕಗಳ ಕಾಮಗಾರಿಗಳನ್ನು ಪರಿಶೀಲಿಸಿದರು.

ನಂತರ ನಾಗರಾಳ ಹಾಗೂ ನರಕಲದಿನ್ನಿ ಮಾರ್ಗದಲ್ಲಿ ಕೈಗೊಂಡ ಎಂಎಸ್ ಪೈಪ್ಲೈನ್ ಅಳವಡಿಕೆ ಕಾಮಗಾರಿ ಹಾಗೂ ಸದರಿ ಯೋಜನೆಯಡಿ ಕಾನಾಪುರ ಹಟ್ಟಿ ಗ್ರಾಮದಲ್ಲಿ ನಿರ್ಮಾಣ ಮಾಡಲಾದ ಪ್ರಿಕಾಸ್ಟ್ ಓಎಚ್ಟಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಮುಂದುವರೆದು ಮುದಗಲ್ ಗ್ರಾಮದ ಹತ್ತಿರ ಗುತ್ತಿಗೆದಾರರ ಕ್ಯಾಂಪಗೆ ಭೇಟಿ ನೀಡಿ ಈ ಕ್ಯಾಂಪ್ ನಲ್ಲಿ ಯೋಜನೆಗೆ ಅವಶ್ಯಕವಿರುವ ಪ್ರಿಕಾಸ್ಟ್ ಟ್ಯಾಂಕ್ ಕಾಸ್ಟಿಂಗ್ ಕಾಮಗಾರಿಯನ್ನು ಪರಿಶೀಲಿಸಿದರು.

ನಂತರ ಮುದಗಲ್ ಕ್ಯಾಂಪಿನಲ್ಲಿ ಎಸ್ ಎನ್ಸಿ – ವಿ ಇ ಐ ಪಿ ಎಲ್ – ಎಸ್ಪಿಎಂಎಲ್–ಜೆವಿ ಪ್ರಾಜೆಕ್ಟ್ ತಾಂತ್ರಿಕ ಅಧಿಕಾರಿಗಳೊಂದಿಗೆ ಯೋಜನೆಯ ಭೌತಿಕ ಪ್ರಗತಿ ಹಾಗೂ ಅನುಷ್ಠಾನದ ಬಗ್ಗೆ ಪ್ರಾತ್ಯಕ್ಷಿತೆ ಮೂಲಕ ಮಾಹಿತಿ ಪಡೆಯಲಾಯಿತು. ತಾಂತ್ರಿಕ ಬೆಂಬಲ ಹಾಗೂ ಗುಣಮಟ್ಟ ನಿಯಂತ್ರಣ ಏಜೆನ್ಸಿ ಪಿ.ಎಮ್.ಸಿ., ಇ.ಜಿ.ಐ.ಎಸ್. ಇಂಡಿಯಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಪ್ರೈವೆಟ್ ಲಿಮಿಟೆಡ್ ರಿಂದ ಮಾಹಿತಿ ಪಡೆಯಲಾಯಿತು. ಪಿಎಂಸಿ, ಇಜಿಐಎಸ್ ಇಂಡಿಂ–ಯಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್ ಹೆಡ್ವರ್ಕ್ ನಲ್ಲಿ ಜ್ಯಾಕ್ವೆಲ್ ಕಮ್ ಪಂಪ್ಹೌಸ್ ಎಲ್ಲ 22 ಪೈಲಿಂಗ್ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದನ್ನು ಪರಿವೀಕ್ಷಿಸಲಾಯಿತು.

ಸಂಪರ್ಕ ಸೇತುವೆ ಪ್ರಗತಿ, ಡಬ್ಲೂಟಿಪಿ ಅಡಿ ವಿವಿಧ ರಚನಾತ್ಮಕ ಘಟಕಗಳ ನಿರ್ಮಾಣದ ವಿವಿಧ ಹಂತಗಳ ಪ್ರಗತಿ, ಪೈಪ್‌ಲೈನ್ ಸೇರಿದಂತೆ ನಾನಾ ಕಾಮಗಾರಿಗಳ ಪ್ರಗತಿ ಪರಿಶೀಲಿಸಿದರು. ಪ್ರಗತಿ ಹಂತದಲ್ಲಿರುವ ಬಾಕಿ ವಿವಿಧ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಶೀಘ್ರವಾಗಿ ಪೂಣಗೊಳಿಸಲು ಇದೆ ವೇಖೆ ಸಿಇಓ ಅವರು ಸೂಚನೆ ನೀಡಿದರು.

## ಅರ್ಥಪೂರ್ಣವಾಗಿ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಆಚರಣೆಗೆ ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 10–ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಇದೇ ಜನೇವರಿ 20ರಂದು ಜಿಲ್ಲಾಡಳಿತದವತಿಯಿಂದ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಅಪರ ಜಿಲ್ಲಾಧಿಕಾರಿಶ್ರೀಶರಣಬಸಪ್ಪಕೋಟೆಪ್ಪಗೊಳ ಅವರಅಧ್ಯಕ್ಷತೆಯಲ್ಲಿಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಾಯ ಕೈಗೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೊಳ ಅವರು, ಅಂದು ಮಧ್ಯಾಹ್ನ 12.30ಕ್ಕೆ ನಗರದ ಸರಕಾರಿ ಪದವಿ ಮಹಾವಿದ್ಯಾಲಯ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಶಿಷ್ಠಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಅದರಂತೆ ಜಿಲ್ಲೆಯ ಎಲ್ಲ ಶಾಲಾ, ಕಾಲೇಜುಗಳಲ್ಲಿ, ಕಚೇರಿಗಳಲ್ಲಿ ಈ ಜಯಂತಿ ಆಚರಿಸಲು ಹಾಗೂ ತಾಲೂಕು ಮಟ್ಟದಲ್ಲಿ, ಈ ಜಯಂತಿಯನ್ನು ದಿನಾಂಕ 14/1/2025 ರಂದು ಆಚರಣೆಗೆ ಸಕಲ ಕ್ರಮಗಳನ್ನು ಕೈಗೊಳ್ಳಬೇಕು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ ಮಾಡಲು ಹಾಗೂ ನುರಿತ ಉಪನ್ಯಾಸಕರನ್ನು ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು, ಜಿಲ್ಲೆಯ ಅಧಿಕಾರಿಗಳು, ಸಿಬ್ಬಂದಿಗಳು, ಆಯಾ ಸಮಾಜದ ಮುಖಂಡರು, ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಸಲಹೆ ನೀಡಿದರು.

ಈ ಸಭೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರದೇವಿ ಮಠಪತಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮುಧೋಳ, ಜಿಲ್ಲಾ ಭೋವಿ ಸಮಾಜದ ಜಿಲ್ಲಾಧ್ಯಕ್ಷ ನಾಗಪ್ಪ ಬೆನಕಲ್, ಸಮಾಜದ ಮುಖಂಡ ತಿಪ್ಪಣ್ಣ ಒಡೆಯರ್, ಸಿದ್ರಾಮಪ್ಪ ನಾಯ್ಕಲ್, ಮಿಲಿಂದ್ ಕುಮಾರ್. ಎಸ್.ಎಸ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜನಪದ ಕಲೆ ಉಳಿಸಿ ಬೆಳೆಸಲು ಮುಧೋಳ ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,10:ನಶಿಸಿ ಹೋಗುತ್ತಿರುವ ಜಾನಪದ ಕಲೆಗಳನ್ನು ಉಳಿಸಿ, ಬೆಳೆಸಬೇಕಾದ ಗುರುತರ ಜವಾಬ್ದಾರಿ ಪ್ರತಿಯೊಬ್ಬರ ಮೇಲೂ ಇದೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಸಂಗಣ್ಣ ಮುಧೋಳ ಕರೆ ನೀಡಿದರು.ತಾಲೂಕಿನ ಕಲಾದಗಿ ಗ್ರಾಮದಲ್ಲಿ ಡಾ.ಬಾಬು ಜಗಜೀವನರಾಮ ಜಾನಪದ ಮತ್ತು ಸಾಂಸ್ಕೃತಿಕ ಕಲಾಸಂಘ ಹಮ್ಮಿಕೊಂಡಿದ್ದ ಜಾನಪದ ವೈಭವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರಕಾರ ಹಿರಿಯ ಕಲಾವಿದರಿಗೆ ಮಾಸಾಶನ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡುತ್ತಿದೆ ಅದನ್ನು ಸದುಪಯೋಗಪಡಿಸಿ ಕೊಳ್ಳಬೇಕೆಂದರು. ವೆಂಕಟೇಶ ರಂಗಣ್ಣವರ, ಎಪಿಎಂಸಿ ಮಾಜಿ ಅಧ್ಯಕ್ಷ ನಿಂಗಪ್ಪ ಅರಕೇರಿ, ಖಜ್ಜಿಡೋಣಿ ಗ್ರಾಮ ಪಂಚಾಯತಿ ಸದಸ್ಯ ಪ್ರವೀಣ ಅರಕೇರಿ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಫಕೀರಪ್ಪ ಮಾದರ (ಹಿರೇಶಲ್ಲಿಕೇರಿ), ಪಿಕೆಪಿಎಸ್ ಮಾಜಿ ಅಧ್ಯಕ್ಷ ಲಕ್ಷ್ಮಣ ಬಿಲಕೇರಿ, ಮಹಾದೇವಯ್ಯ ಬೀಳಗಿಮಠ, ಸುರೇಶ ಕರಡಿಗುಡ್ಡ ಇದ್ದರು.

# ಅಸ್ಪೃಶ್ಯತೆ ನಿವಾರಣೆ, ಕೋಮು ಸೌಹಾರ್ದತೆ ವಿಚಾರ ಗೋಷ್ಠಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.10:ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ವಿಶ್ವಶಾಂತಿ ಫೌಂಡೇಶನ್ ಕಲ್ಚರಲ್ ವೆಲ್‌ಫೇರ್ ಡೆವಲಪ್ ಮೆಂಟ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಅಸ್ಪೃಶ್ಯತೆ ನಿವಾರಣೆ, ಕೋಮು ಸೌಹಾರ್ದತೆ ವಿಚಾರ ಗೋಷ್ಠಿ ನಡೆಯಿತು.ಪ್ರಮುಖರಾದ ಅಶೋಕ ಗಾಯಕವಾಡ ಮಾತನಾಡಿ, ಜನರು ಮನಸ್ಸನು ಬದಲಾವಣೆ ಮಾಡಿಕೊಳ್ಳುವ ಮೂಲಕ ಅನಿಷ್ಟ ಪದ್ಧತಿ ನಿರ್ಮೂಲನೆಗೆ ಮುಂದಾಗಬೇಕು ಎಂದು ತಿಳಿಸಿದರು.ಸಮಾಜ ಕಲ್ಯಾಣ ಇಲಾಖೆಯ ರಾಹುಲ್ ಅಡಕೆ, ವಿಶ್ವಶಾಂತಿ ಫೌಂಡೇಶನ್ ಕಲ್ಚರಲ್ ವೆಲ್‌ಫೇರ್ ಡೆವಲಪ್ ಮೆಂಟ್ ಸೊಸೈಟಿ ಅಧ್ಯಕ್ಷ ಜೈಪಾಲ್ ಬೋರಾಳೆ ಮಾತನಾಡಿದರು.

ವಕೀಲ ಶಿವಕುಮಾರ ಕೆ.ಕೆ. ವಿಶೇಷ ಉಪನ್ಯಾಸ ನೀಡಿದರು. ನೌಪಾಲ್ ಭಂತೇಜಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಂತೇಶ ಪಾಟೀಲ, ಉಪಾಧ್ಯಕ್ಷೆ ಗೋದಾವರಿ ಬಿರಗೆ, ಪಿಡಿಒ ಭೀಮರಾವ್ ಪವಾರ್ ಪ್ರಮುಖರಾದ ರಾಜಕುಮಾರ ವಿಚಾರೆ, ಶೀಲವಂತ ಭಂಡಾರೆ, ಸವಿತಾ ಮೋರೆ, ವಿಶ್ವ ಹೂಗಾರ, ಶಿವು ಕಾಪಸೆ, ವಿನೋದ ಮೋರೆ, ಸುರೇಶ ಸುತಾರ ಸೇರಿದಂತೆ ಇತರರು ಇದ್ದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

ಕಲಬುರಗಿ: ಜ.10:ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ ಆರ್. ಪಾಟೀಲ ಅವರು ಹೈದ್ರಾಬಾದ್‌ದಿಂದ ರಸ್ತೆ ಮೂಲಕ ಜನವರಿ 11 ರಂದು ಶನಿವಾರ ಮಧ್ಯಾಹ್ನ 3 ಗಂಟೆಗೆ ಕಲಬುರಗಿಗೆ ಆಗಮಿಸುವರು.

ನಂತರ ಅಂದು ಸಂಜೆ 5 ಗಂಟೆಗೆ ಕಲಬುರಗಿಯ ಗೀತಾ ನಗರದಲ್ಲಿರುವ ಅಮೃತ ಸರೋವರ ಬ್ರಹ್ಮಕುಮಾರಿಸ್ ವಿಶ್ರಾಂತಿ ಗೃಹದಲ್ಲಿ ಪ್ರಜಾಪಿತಾ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ À(Sis-terShivanj') ಸಹೋದರಿ ಶಿವಾನಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಸಂಜೆ 7.30 ಗಂಟೆಗೆ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು. ಜನವರಿ 12 ರಂದು ಭಾನುವಾರ ಮಧ್ಯಾಹ್ನ 12.15 ಗಂಟೆಗೆ ಸೇಡಂ ತಾಲೂಕಿನ ಯಡಗಾ

ಗ್ರಾಮ ಪಂಚಾಯಿತಿಗೆ ಭೇಟಿ ಹಾಗೂ ಯಡಗಾ ಪ್ರೌಢಶಾಲೆಯಲ್ಲಿ ಸಾರ್ವಜನಿಕ ಕುಂದುಕೊರತೆ ವಿಚಾರಣೆ ನಡೆಸುವರು.

ನಂತರ ರಾತ್ರಿ 9.20 ಗಂಟೆಗೆ ಕಲಬುರಗಿಯಿಂದ ವಿಮಾನ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ವೈದ್ಯಕೀಯ ಶಿಕ್ಷಣ ವಾಹನ ಚಾಲಕರ ಸಂಘದ ಕ್ಯಾಲೆಂಡರ್ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಜ.10:ಹೊಸವರ್ಷದ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಹಾಗೂ ವೈದ್ಯಕೀಯ ಶಿಕ್ಷಣ ವಾಹನ ಚಾಲಕರು ಹೊರತಂದಿರುವ ಕ್ಯಾಲೆಂಡರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಭಾಂಗಣದಲ್ಲಿ ಉದ್ಘಾಟಕರಾದ ಡಾ॥ ಧ್ಯಾನೇಶ್ವರ ನಿರಗುಡೆ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ಅವರೊಂದಿಗೆ ಸಹಕರಿಸಿದರು.ಇದೇ ಸಂದರ್ಭದಲ್ಲಿ ವಾಹನ ಚಾಲಕರಾದ ಗೌರಧ್ಯಕ್ಷರು ಶ್ರೀ ಸೂರ್ಯಕಾಂತ ಪಾಟೀಲ, ಮತ್ತು ಅಧ್ಯಕ್ಷರು ಶ್ರೀ ರವೀಂದ್ರ ಕೊಳಾರ, ಉಪಾಧ್ಯಕ್ಷರು ಪವನ ಪಾಟೀಲ, ಹಾಗು ಶರೀಫ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಲಾಲಯ್ಯ ಮರಕುಂದಾ, ಕಾರ್ಯಧ್ಯಕ್ಷರಾದ ಶ್ರೀ ಮಾರುತಿ ಎಂ ಬಾನೆ, ಖಜಾಂಜಿ ಶ್ರೀ ರಾಜಕುಮಾರ್ ಕೋಡಿಗೆ, ಸಮಸ್ತ ಪದಾಧಿಕಾರಿಗಳು ಹಾಜರಿದ್ದರು.

# ಬ್ಯಾಲಹಳ್ಳಿ ಪಿಕೆಪಿಎಸ್ ಅಧ್ಯಕ್ಷರಾಗಿ ರಾಜಕುಮಾರ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 10 : ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರಾಜಕುಮಾರ ಕಾಶಿನಾಥ ತೂಗಾಂವೆ ಹಾಲಹಳ್ಳಿ ಹಾಗೂ ಉಪಾಧ್ಯಕ್ಷರಾಗಿ ಓಂಕಾರ ಕಾಶಿನಾಥ ರುದ್ರಾ ಹಾಲಹಳ್ಳಿ(ಕೆ) ಶುಕ್ರವಾರ ಆಯ್ಕೆಯಾದರು.

ಚುನಾವಣಾಧಿಕಾರಿ ಆಯ್ಕೆಯನ್ನು ಪ್ರಕಟಿಸುತ್ತಲೇ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಬೆಂಬಲಿಗರು ಪಟಾಕಿ ಸಿಡಿಸಿ, ಸಂಭ್ರಮಿಸಿದರು. ಶಾಲು ಹೊದಿಸಿ ಸತ್ಕರಿಸಿದರು.

ಭಾಲ್ಕಿ ಪಿಎ???ಡಿ ಬ್ಯಾಂಕ್ ಅಧ್ಯಕ್ಷ ಮಡಿವಾಳಪ್ಪ ಮಂಗಲಗಿ, ಸಂಘದ ನಿರ್ದೇಶಕರಾದ ಓಂಕಾರ ಮಲ್ಲಪ್ಪ ಕೇರಿ, ಗಜೇಂದ್ರ ದಿಗಂಬರ್ ಸದಾಶಿವ, ಸುರೇಶ ವಸುರಾಮ ಹಾಲಹಳ್ಳಿ ತಾಂಡಾ, ಸುಶೀಲಾಬಾಯಿ ಕಾಶೀನಾಥ ತೂಗಾಂವೆ ಹಾಲಹಳ್ಳಿ, ಅಫ್ಸರ್ ಅಲಿ ತಂದೆ ಚುನ್ನುಮಿಯಾ ಬೇಪಾರಿ ಮತ್ತಿತರರು ಇದ್ದರು.

# ಆರ್ಥಿಕ ಪ್ರಗತಿಯಲ್ಲಿ ಬ್ಯಾಂಕ್‌ಗಳ ಪಾತ್ರ ಹಿರಿದು: ಬಸವಲಿಂಗ ಪಟ್ಟದ್ದೇವರು



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.10: ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕ್ ಗಳ ಪಾತ್ರ ಹಿರಿದು ಎಂದು ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು.

ಇಲ್ಲಿಯ ಹಿರೇಮಠ ಸಂಸ್ಥಾನದಲ್ಲಿ ಗುರುವಾರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರನ್ನು ಹಿರೇಮಠದ ವತಿಯಿಂದ ಸನ್ಮಾನಿಸಿ ಅವರು ಮಾತನಾಡಿದರು.

ವ್ಯಾಪಾರಿಗಳ, ಅನ್ನದಾತರ ಸೇರಿದಂತೆ ಜನ ಸಾಮಾನ್ಯರ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ಸಂಘಗಳು, ಬ್ಯಾಂಕ್‌ಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.ನೂತನ ನಿರ್ದೇಶಕರು ಬ್ಯಾಂಕ್ ಮತ್ತು ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಉತ್ತಮ ಕಾರ್ಯ ಮಾಡಬೇಕು ಎಂದು ಹೇಳಿದರು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿದರು. ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಶಿವಕುಮಾರ ಕಲ್ಯಾಣೆ, ನಿರ್ದೇಶಕರಾದ ಸಂಜು ಕುಮಾರ ಗುಂಜರಗೆ, ಜೀವನ ಪೆದ್ದೆ, ವಿಲಾಸ ಬಕ್ಕಾ, ನಿರಂಜನ ಅಷ್ಟೂರೆ, ಬಸವರಾಜ ಬೋರಡೆ, ಸೂರ್ಯಮತಿ ಮಡ್ಡೆ, ಮನೀಷಾ ವಾಲೆ, ಶೃತಿ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಹಿರಿಯ ವಕೀಲ ರಾಜಶೇಖರ ಅಷ್ಟೂರೆ, ಸವಿತಾ ಭೂರೆ ಇದ್ದರು.

# ಸ್ವಾಮಿ ವಿವೇಕಾನಂದ ಚೆಸ್ ಅಕಾಡೆಮಿ ನಾಳೆ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 10 : ಇಲ್ಲಿಯ ಶಿವನಗರದಲ್ಲಿ ಇರುವ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಜ. 12 ರಂದು ಬೆಳಿಗ್ಗೆ 10.30ಕ್ಕೆ ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ಹಾಗೂ ಸ್ವಾಮಿ ವಿವೇಕಾನಂದ ಚೆಸ್ ಅಕಾಡೆಮಿ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಆಶ್ರಮದ ಅಧ್ಯಕ್ಷ ಜ್ಯೋತಿರ್ಮಯಾನಂದ ಸ್ವಾಮೀಜಿ ಸಾನಿಧ್ಯ ವಹಿಸುವರು. ಹಿರಿಯ ಪತ್ರಕರ್ತ ಸದಾನಂದ ಜೋಶಿ, ಡಾ. ರಘು ಕೃಷ್ಣಮೂರ್ತಿ, ಧರ್ಮಸ್ಥಳ ಜನಜಾಗೃತಿ ವೇದಿಕೆಯ ಅಧ್ಯಕ್ಷ ವಿರೂಪಾಕ್ಷ ಗಾದಗಿ, ಬಗದಲ್ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಚನ್ನಬಸವ ಹೇಡೆ, ನೇತ್ರತಜ್ಞ ಡಾ. ಮಲ್ಲಿಕಾರ್ಜುನ ಚಟ್ನಳ್ಳಿ, ಬೀದರ್ ಚೆಸ್ ಅಸೋಸಿಯೇಷನ್ ಅಧ್ಯಕ್ಷ ನಿತಿನ್ ಕರ್ಪೂರ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಬೀದರ್ ಚೆಸ್ ಅಸೋಸಿಯೇಷನ್ ಪ್ರಕಟಣೆ ತಿಳಿಸಿದೆ.

# ಅಖಿಲ ಭಾರತೀಯ ಸಾಹಿತ್ಯ ಪರಿಷತಗೆ ಸ್ವಾಮಿ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 10 : ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಬೀದರ್ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ನಾಗೇಶ ಸ್ವಾಮಿ ಮಸ್ಕಲ್ ಅವರನ್ನು ನೇಮಕ ಮಾಡಲಾಗಿದೆ.

ಪರಿಷತ್ ರಾಜ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್ ತಿಳಿಸಿದ್ದಾರೆ.

ಔರಾದ್ ತಾಲ್ಲೂಕಿನ ಮಸ್ಕಲ್ ಗ್ರಾಮದ ನಾಗೇಶ ಸ್ವಾಮಿ ಯುವ ಬರಹಗಾರ, ವಿಮರ್ಷಕ, ಸಂಶೋಧಕರಾಗಿದ್ದಾರೆ. ತಮ್ಮ ಅಧ್ಯಕ್ಷತೆಯ ಸ್ಪರ್ಧಾ ಸಂಕಲ್ಪ ಅಕಾಡೆಮಿ ಮೂಲಕ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲಿರುವ ಜಿಲ್ಲೆಯ ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

# ಸಿದ್ಧರಾಮೇಶ್ವರ ಜಾತ್ರೆ ಸಮಾರೋಪ ಇಂದು



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 10 : ಹನ್ನೊಂದು ದಿನಗಳ ಸಿದ್ಧರಾಮೇಶ್ವರ ನಮ್ಮೂರ 12ನೇ ಜಾತ್ರಾ ಮಹೋತ್ಸವ ಹಾಗೂ ಹಾವಗಿಲಿಂಗೇಶ್ವರ ಶಿವಾಚಾರ್ಯರ ದ್ವಾದಶ ಪಟ್ಟಾಧಿಕಾರ ಮಹೋತ್ಸವ ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಗ್ರಾಮದ ರಾಚೋಟೇಶ್ವರ ಸಂಸ್ಥಾನ ಮಠದಲ್ಲಿ ಶನಿವಾರ(ಜ.11) ಸಮಾರೋಪಗೊಳ್ಳಲಿದೆ.

ಬೆಳಿಗ್ಗೆ 10ಕ್ಕೆ ಗ್ರಾಮದ ಬೀದರ್-ಭಾಲ್ಕಿ ಮುಖ್ಯರಸ್ತೆಯ ಜ್ಯಾಂತಿ ಪೆಟ್ರೋಲ್ ಬಂಕ್ ಸಮೀಪದಿಂದ ಪ್ರಮುಖ ಬೀದಿಗಳ ಮೂಲಕ ಮಠದವರೆಗೆ ಎರಡು ಸಾರೋಟಿನಲ್ಲಿ ನಾಡಿನ 12 ಮಠಾಧೀಶರು ಹಾಗೂ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶ್ರೀಗಳ ಭವ್ಯ ಮೆರವಣಿಗೆ ಜರುಗಲಿದೆ.ಸಾರೋಟಿನ ಮೇಲೆ ಸಿದ್ಧರಾಮೇಶ್ವರ ಬೃಹತ್ ಭಾವಚಿತ್ರ ಇರಲಿದೆ. ಬ್ಯಾಂಡ್ ಬಾಜಾ, ಸುಮಂಗಲೆಯರು ಕುಂಭ ಕಳಸ ಹೊತ್ತು ಮೆರವಣಿಗೆಗೆ ಮೆರುಗು ನೀಡಲಿದ್ದಾರೆ.

ಮಠದಲ್ಲಿ ಮಠಾಧೀಶರ ಪಾದಪೂಜೆ, ಅನ್ನದಾಸೋಹ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಜರುಗುವ ಧರ್ಮಸಭೆ ಹಾಗೂ ಜಾತ್ರೆಯ ಸಮಾರೋಪ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದಾರೆ.

ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಜಾತ್ರೆ ಯಶಸ್ವಿಯಾಗಿ ನಡೆದಿದೆ. ಸಮಾರೋಪ ಸಮಾರಂಭದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರು ಕೋರಿದ್ದಾರೆ.

# ಗುಲ್ಬರ್ಗ ವಿ.ವಿಯಲ್ಲಿ ನಾರಾಯಣ ಗುರು ಅಧ್ಯಯನ ಪೀಠ ಆರಂಭಕ್ಕೆ ಪ್ರಯತ್ನ: ಜಗದೇವ ಗುತ್ತೇದಾರ್



ಕಲಬುರಗಿ:ಜ.10: ರಾಜ್ಯ ಸರಕಾರದ ಈ ವರ್ಷದ ಮುಂಗಡ ಪತ್ರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠವನ್ನು ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಆರಂಭಿಸಬೇಕೆಂದು ಮುಖ್ಯಮಂತ್ರಿಗಳಿಗೆ ಒತ್ತಾಯಿಸಲಾಗುವುದು ಎಂದು ವಿಧಾನಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ ತಿಳಿಸಿದರು.

ಕಲಬುರ್ಗಿಯಲ್ಲಿ ಜ.10 ರಂದು ಕಲ್ಯಾಣ ಕರ್ನಾಟಕ ಈಡಿಗ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕಡೇಚೂರ್ ಮತ್ತು ಸಮಾಜದ ಯುವ ಮುಖಂಡರಾದ ಹರ್ಷಾನಂದ ಗುತ್ತೇದಾರ್ ನೇತೃತ್ವದ ನಿಯೋಗದ ಮನವಿಯನ್ನು ಸ್ವೀಕರಿಸಿ ಈಗಾಗಲೇ ಗುಲ್ಬರ್ಗ ವಿಶ್ವವಿದ್ಯಾಲಯ ರಾಜ್ಯ ಸರಕಾರಕ್ಕೆ ಮಂಡಿಸಿದ ಪ್ರಸ್ತಾವನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗುವುದು ಎಂದು ಜಗದೇವ ಗುತ್ತೇದಾರ್ ತಿಳಿಸಿದರು. ವಿಶ್ವವಿದ್ಯಾಲಯದಿಂದ 2018ರಲ್ಲಿ ಪೀಠದ ಪ್ರಸ್ತಾವನೆ ಆರಂಭಗೊಂಡಿದ್ದು 2019ರಲ್ಲಿ ಕುಲಸಚಿವರು ರಾಜ್ಯ ಹಣಕಾಸು ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಕೆ ಮಾಡಿ 5 ವರ್ಷ ಕಳೆದರೂ ಯಾವುದೇ ಪ್ರಗತಿ ಹೊಂದಿರದಿರುವುದರಿಂದ ಈ ಬಾರಿಯ ಮುಂಗಡ ಪತ್ರದಲ್ಲಿ ಅಧ್ಯಯನ ಪೀಠ ಆರಂಭಿಸಲು ಘೋಷಣೆ ಮಾಡಬೇಕು ಹಾಗೂ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸಲ್ಲಿಸಿದ ಮನವಿಗೆ ಸ್ಪಂದಿಸಿ ಕೂಡಲೇ ಉಸ್ತುವಾರಿ ಸಚಿವರಾದ ಪ್ರಿಯಾಂಕ ಖರ್ಗೆ ಹಾಗೂ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಪ್ರಸ್ತಾವನೆಯ ವಿಷಯವನ್ನು ಗಮನಕ್ಕೆ ತರಲಾಗುವುದು ಮತ್ತು ಬೇಡಿಕೆ ಈಡೇರಿ-ಕೆಗೆ ಪ್ರಯತ್ನಿಸಲಾಗುವುದು. ನಾರಾಯಣ ಗುರುಗಳು ಒಂದೇ ಜಾತಿ, ಒಂದೇ ಮತ ಒಬ್ಬನೇ ದೇವರು ಎಂಬ ವಿಶ್ವಸಂದೇಶ ಸಾರಿದ ಮಹಾತ್ಮನಾಗಿದ್ದು ಶರಣರ ಭೂಮಿಯಲ್ಲಿ ಅವರ ಹೆಸರಿನ ಪೀಠ ಆರಂಭಿಸುವ ಪ್ರಸ್ತಾಪ ಅತ್ಯಂತ ಅಗತ್ಯವಾಗಿದ್ದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ನಾರಾಯಣ ಗುರುಗಳ ತತ್ವಾದರ್ಶ ಮೆಚ್ಚಿಕೊಂಡು ಅಳವಡಿಸಿಕೊಂಡವರು. ಇದನ್ನು ಅವರ ಗಮನಕ್ಕೂ ತರಲಾಗುವುದು ಎಂದು ಗುತ್ತೇದಾರ್ ಹೇಳಿದರು.

10 ಲಕ್ಷ ರೂ. ಘೋಷಣೆ :ಈಡಿಗ ಸಮಾಜದವರು ಕುಲ ಕಸುಬು ಕಳೆದುಕೊಂಡ ಬಗ್ಗೆ ಸರಕಾರ ಕೂಡ ಗಂಭೀರವಾಗಿ ಪರಿಗಣಿಸಿದ್ದು ಈಗಾಗಲೇ ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆದಿದೆ. ಸಚಿವರಾದ ಶರಣಪ್ರಕಾಶ್ ಪಾಟೀಲ್ ಪುನರ್ ವಸತಿ ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿಗಳಿಗೆ ಪ್ರಸ್ತಾಪವನ್ನು ಸೂಚಿಸಿದ್ದು ಮುಖ್ಯಮಂತ್ರಿಗಳು ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ. ಜೊತೆಗೆ ಇನ್ನಿತರ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಕಲ್ಯಾಣ ಕರ್ನಾಟಕ ಭಾಗದ ಈಡಿಗ ಸಮುದಾಯದ ನಾಯಕರ ನಿಯೋಗವನ್ನು ಮುಖ್ಯಮಂತ್ರಿಗಳ ಬಳಿಗೆ ಕರೆದೊಯ್ಯಲು ತೀರ್ಮಾನಿಸಲಾಗಿದೆ ಎಂದರು. ಈಡಿಗ ಸಮುದಾಯದ ನಿವೇಶನ ಸ್ಥಳ ಕಲ್ಬುರ್ಗಿಯ ಆರ್ ಟಿ ಓ ಕಚೇರಿಯ ಹಿಂಭಾಗದಲ್ಲಿದ್ದು ಆವರಣಗೋಡೆ ನಿರ್ಮಾಣಕ್ಕಾಗಿ ನಗರಾಭಿವೃದ್ಧಿ ಖಾತೆ ಸಚಿವರಾದ ಬೈರತಿ ಸುರೇಶ್ ಅವರಿಗೆ ಮನವಿ ಮಾಡಿ ಮಂಜೂರಾತಿ ಸಿಕ್ಕಿದೆ ಚಿತಾಗಾರ ನಿರ್ಮಾಣಕ್ಕಾಗಿ ಶಾಸಕರ ನಿಧಿಯಿಂದ 10 ಲಕ್ಷ ರೂಪಾಯಿ ನೀಡುವುದಾಗಿ ಭರವಸೆ ನೀಡಿದರು. ಹಿಂದುಳಿದ ಈಡಿಗ ಸಮುದಾಯದವರ ಅಭಿವೃದ್ಧಿಗೆ ಸರಕಾರದ ಎಲ್ಲಾ ನೆರವುಗಳನ್ನು ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಜಗದೇವ ಗುತ್ತೇದಾರ್ ತಿಳಿಸಿದರು.

ನಿಯೋಗದಲ್ಲಿ ವೆಂಕಟೇಶ್ ಕಡೇಚೂರ್, ಹರ್ಷಾನಂದ ಗುತ್ತೇದಾರ್, ಡಾ. ಸದಾನಂದ ಪೆರ್ಲ, ಅಂಬಯ್ಯ ಗುತ್ತೇದಾರ್ ಇಬ್ರಾಹಿಂಪುರ್, ತಿಮ್ಮಪ್ಪ ಗಂಗಾವತಿ, ಅಂಬಯ್ಯ ಗುತ್ತೇದಾರ್ ಶಾಬಾದಿ, ಹನುಮಯ್ಯ ಆಲೂರು, ಚಂದ್ರಕಾಂತ್ ಗುತ್ತೇದಾರ್ ಮುಧೋಳ್, ರುಕ್ಮಯ್ಯ ಗುತ್ತೇದಾರ್ ಗೊಬ್ಬುರುವಾಡಗಿ, ಮಲ್ಲಯ್ಯ ಕುಕ್ಕುಂದಿ, ಬಾಬು ಶೇಟ್ ಚಿತ್ತಾಪುರ ಇದ್ದರು.

# ಒತ್ತುವರಿ ತೆರವಿಗೆ ಪಂಚಾಯಿತಿ ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 10 : ತಾಲ್ಲೂಕಿನ ಮರಕಲ್ ಗ್ರಾಮ ಪಂಚಾಯಿತಿಯು ಮರಕಲ್, ಬೆನಕನಳ್ಳಿ ಹಾಗೂ ಚಿಕ್ಕಪೇಟೆ ಗ್ರಾಮಗಳಲ್ಲಿ ಚರಂಡಿ ಒತ್ತುವರಿ ತೆರವುಗೊಳಿಸಲು ಸಾರ್ವಜನಿಕರಿಗೆ ಸೂಚನೆ ನೀಡಿದೆ. ಗ್ರಾಮಗಳಲ್ಲಿ ಬಹಳಷ್ಟು ಮನೆಗಳ ಮುಂಭಾಗದ ಚರಂಡಿಗಳನ್ನು ಒತ್ತುವರಿ ಮಾಡಲಾಗಿದ್ದು, ರಸ್ತೆಗಳು ಇಕ್ಕಟ್ಟಾಗಿವೆ. ಇದರಿಂದಾಗಿ ವಾಹನ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಅಪಘಾತಗಳಿಗೆ ಕಾರಣವಾಗುತ್ತಿದೆ. ಕಾರಣ, ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಒತ್ತುವರಿ ತೆರವುಗೊಳಿಸಲು ನಿರ್ಣಯಿಸಲಾಗಿದೆ ಎಂದು ಪಿಡಿಒ ಉಮೇಶ ಜಾಬಾ ತಿಳಿಸಿದ್ದಾರೆ. ಸಾರ್ವಜನಿಕರು 15 ದಿನಗಳ ಒಳಗೆ ತಮ್ಮ ಮನೆಗಳ ಮುಂಭಾಗದ ಚರಂಡಿ ಒತ್ತುವರಿ ತೆರವುಗೊಳಿಸಬೇಕು. ಇಲ್ಲವಾದಲ್ಲಿ ಜೆಸಿಬಿ ಬಳಸಿ ಒತ್ತುವರಿ ತೆರವುಗೊಳಿಸಲಾಗುವುದು. ಈ ವೇಳೆ ಕಟ್ಟಡಕ್ಕೆ ಯಾವುದೇ ರೀತಿಯ ಹಾನಿಯಾದರೆ ಪಂಚಾಯತಿ ಜವಾಬ್ದಾರ ಆಗಿರುವುದಿಲ್ಲ. ಜೆಸಿಬಿಗೆ ತಗಲುವ ವೆಚ್ಚ ಸಹ ಒತ್ತುವರಿದಾರರಿಂದಲೇ ವಸೂಲಿ ಮಾಡಲಾಗುವುದು ಎಂದು ಹೇಳಿದ್ದಾರೆ.

## ಕವಿತೆಗಳು ಮನು ಕುಲದ ನೋವಿಗೆ ಮದ್ದಾಗಲಿ – ಡಾ. ವಿಜಯಶ್ರೀ ಸಬರದ



ಮಲ್ಲಮ್ಮ ನುಡಿ ವಾರ್ತೆ

ಬೀದರ್ ಜ. 10: ಶ್ರೀಮತಿ ವಿಜಯಶ್ರೀ ಸಬರದ ಅವರು ಕವಿತೆಗಳು ಮನು ಕುಲದ ನೋವಿಗೆ ಮದ್ದಾಗಬೇಕು. ಜನಸಾಮಾನ್ಯರ ದನಿಯಾಗಬೇಕು, ನೊಂದವರ ಬಾಳಿಗೆ ಬೆಳಕಾಬೇಕು, ಅಂದಾಗ ಮಾತ್ರ ಕವಿತೆಗಳಿಗೆ ಹಾಗೂ ಬರೆದ ಕವಿಗಳಿಗೆ ನೆಲೆ, ಬೆಲೆ ಸಿಗಲು ಸಾಧ್ಯವಿದೆ. ಕವಿಗಳಿಗೆ ಕಾವ್ಯ ರಚಿಸಿದ ತಕ್ಷಣವೇ ಪ್ರಕಟಿಸುವ ಧಾವಂತ ಬೇಡ ಕಾವ್ಯ ಪರಂಪರೆಯನ್ನು ಹಾಗೂ ಸಮಾಕಾಲಿನ ಕವಿಗಳ ಕಾವ್ಯವನ್ನು ಓದಿ ಅಧ್ಯಯನ ಮಾಡಿ ತಾವು ಕಾವ್ಯ ರಚಿಸಲು ತೊಡಗಿಕೊಳ್ಳಬೇಕು ಕಾವ್ಯ ವಿಮರ್ಶೆಗೆ ಒಳಪಟ್ಟಾಗ ಮಾತ್ರ ಗಟ್ಟಿತನದಿಂದ ಕೂಡಿರಲು ಸಾಧ್ಯ ಎಂದು ಕಾವ್ಯ ಸಂಸ್ಕೃತಿ ಯಾನ ಕಾರ್ಯಕ್ರಮದ ಸರ್ವಾಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಡಾ. ವಿಜಯಶ್ರೀ ಸಬರದ ಅವರು ಹೇಳಿದ್ದಾರೆ.

ಅವರು ಇತ್ತಿಚೆಗೆ ನಗರದ ಕೃಷ್ಣ ರೇಜೆನ್ಸಿ ಹೋಟೆಲ್ ಸಭಾಂಗಣದಲ್ಲಿ ರಂಗಮಂಡಲ ಬೆಂಗಳೂರು, ಅತಿವಾಳೆ ಸಾಂಸ್ಕೃತಿಕ ಪ್ರತಿಷ್ಠಾನ ಬೀದರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಹಾಗೂ ಪ್ರತಿ ಜಿಲ್ಲೆ ಮತ್ತು ಕನ್ನಡ ಪ್ರದೇಶದಲ್ಲಿ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದೊಂದಿಗೆ "ಕಾವ್ಯ ಸಂಸ್ಕೃತಿ ಯಾನ" ಬೀದರ, ರಾಷ್ಟ್ರ ಕವಿ ಕುವೆಂಪು ಅವರ ಜನ್ಮದಿನೋತ್ಸವ ಪ್ರಯುಕ್ತ "ಶರಣರ ನಾಡಿನಲ್ಲಿ ಜನರೆಡೆಗೆ ಕಾವ್ಯ" ಎನ್ನುವ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಮುಖ್ಯ ಅತಿಥಿಗಯಾಗಿ ಹಿರಿಯ ಸಾಹಿತಿ ಶಿವಕುಮಾರ ಕಟ್ಟೆ ಅವರು ಸಮಾರೋಪದ ನುಡಿ ಮಾತನಾಡಿ, ಅವರು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಕವನಗಳ ರಚನೆ ಮಾಡುವ ನಿಟ್ಟಿನಲ್ಲಿ ಕವಿಗಳು ಆಲೋಚನೆ ಮಾಡಬೇಕು. ಕವಿಯಾದವನು ಸಮಾಜಕ್ಕೆ ಮಾರ್ಗದರ್ಶನ ಮಾಡಲು ಸಿದ್ಧನಾಗಿ ಅಧ್ಯಯನ ಪೂರ್ಣ ಕವನ ರಚಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರಾದ ಶಂಭುಲಿಂಗ ವಾಲ್ದೊಡ್ಡಿ. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ಹಿರಿಯ ಸಾಹಿತಿ ಗುರುನಾಥ ಅಕ್ಕಣ್ಣ, ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷೆ ಶ್ರೀಮತಿ ಸುನೀತಾ ದಾಡಗೆ, ಕರ್ನಾಟಕ

## ಹಾಲಹಳ್ಳಿ (ಕೆ):– ಕೊಳ್ಳದ ಶ್ರೀ ಸಂಗಮೇಶ್ವರ ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬೀದರ ಜಿಲ್ಲೆಯ ಪವಿತ್ರ ಪುಣ್ಯಕ್ಷೇತ್ರವಾದ ಹಾಲಹಳ್ಳಿ (ಕೆ) ಯ ಕೊಳ್ಳದ ಶ್ರೀ ಸಂಗಮೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ನಾಳೆ ಜನವರಿ 13,14 ರ ಸಂಕ್ರಾಂತಿಯಂದು ಜರುಗಲಿದೆ. ತನ್ನಿಮಿತ್ತ ಪೂಜ್ಯ ಶ್ರೀ ಷ.ಬ್ರ. ಡಾ॥ ರಾಜಶೇಖರ ಶಿವಾಚಾರ್ಯ ಸ್ವಾಮಿಗಳ ದಿವ್ಯ ಸಾನಿಧ್ಯ ಮತ್ತು ಮಾರ್ಗದರ್ಶನದಲ್ಲಿ ಅನೇಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ದಿ:12 ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಸಂಗಮೇಶ್ವರಿಗೆ ರುದ್ರಾಭಿಷೇಕ, ಸಾಮೂಹಿಕ ಲಕ್ಷ ಬಿಲ್ವಾರ್ಚನೆ ಕಾರ್ಯಕ್ರಮ ನಡೆಯುವುದು. ದಿ: 13 ರಂದು ಬೆಳಗ್ಗೆ 11 ಕ್ಕೆ ಶ್ರೀ ಸಂಗಮೇಶ್ವರನೂತನ ಮಹಾದ್ವಾರದ ಉದ್ಘಾಟನೆ, ಮಧ್ಯಾಹ್ನ 12.30 ಕ್ಕೆ ಧರ್ಮ ಸಮಾರಂಭ ಮತ್ತು ಸಾಯಂಕಾಲ 4 ಕ್ಕೆ ಪಲ್ಲಕ್ಕಿ ಮೆರವಣಿಗೆ ನಡೆಯುವುದು. 14 ರಂದು ಬೆಳಗ್ಗೆ ಶ್ರೀ ರುದ್ರಾಭಿಷೇಕ ಮಧ್ಯಾಹ್ನ ಧುನಿ ಪೂಜೆಯ ಮಂಗಲ, ಧರ್ಮಸಭಾ ಮತ್ತು ಸಾಯಂಕಾಲ 4 ಗಂಟೆಗೆ ಮಹಾರಥೋತ್ಸವ ನಡೆಯುವುದು.



ಬೀದರ ಲೋಕಸಭಾ ಸದಸ್ಯರಾದ ಮಾನ್ಯಶ್ರೀ ಸಾಗರ ಖಂಡ್ರೆರವರು ಧರ್ಮ ಸಮಾರಂಭವನ್ನು ಉದ್ಘಾಟಿಸಿ ಮಹಾರಥೋತ್ಸವಕ್ಕೆ ಚಾಲನೆಯನ್ನು ನೀಡುವರು. ಶ್ರೀ ಬಾಬುರಾವ ಮಹಾರಾಜರ ನೇತೃತ್ವದಲ್ಲಿ ಧುನಿ ಪೂಜೆ ನಡೆಯುವುದು. ಪ್ರಯುಕ್ತ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಜಾತ್ರೆಯಲ್ಲಿ ಭಾಗವಹಿಸಿ ಶ್ರೀ ಸಂಗಮೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕೆಂದು ಜಾತ್ರಾ ಮಹೋತ್ಸವ ಸೇವಾ ಸಮಿತಿಯ ಮುಖ್ಯಸ್ಥರಾದ ಬಸವರಾಜ ಪಾಟೀಲ್, ಬಸವರಾಜ ಹಾಲಹಳ್ಳಿ, ಶಿವು ಪೂಜಾರಿ ಮುಂತಾದವರು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮಹಿಳೆಯರಿಗೆ ಸಾಲ ಸಂಪರ್ಕ ಒದಗಿಸಿ ಆರ್ಥಿಕವಾಗಿ ಸಬಲರನ್ನಾಗಿಸಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.10–ಗ್ರಾಮೀಣ ಪ್ರದೇಶದ ಸ್ವ–ಸಹಾಯ ಸಂಘಗಳಿಗೆ ಸಾಲ ಸಂಪರ್ಕ ಒದಗಿಸುವ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸಬಲರಾಗಲು ಬ್ಯಾಂಕ್‌ಗಳು ಮುಂದಾಗಬೇಕೆಂದು ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ ಅವರು ಹೇಳಿದರು.

ಜ.09ರ ಗುರುವಾರ ದಂದು ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್, ಜಿಲ್ಲಾ ಅಭಿಯಾನ ನಿರ್ವಾಹಣಾ ಘಟಕ ಹಾಗೂ ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಕಾರ್ಯಾಗಾರಕ್ಕೆ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಬರುವಂತಹ ಕಾರ್ಯಕ್ರಮಗಳು ಹಾಗೂ ಮುಖ್ಯವಾಗಿ ಸ್ವ–ಸಹಾಯ ಗುಂಪುಗಳಿಗೆ ಸಾಲ ಸಂಪರ್ಕ ಮತ್ತು ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ವೈಯಕ್ತಿಕ ಉದ್ಯಮ ಪ್ರಾರಂಭಿಸಲು ಹಣಕಾಸಿನ ಬಗ್ಗೆ ಹಾಗೂ ಇತರೆ ಹಣಕಾಸು ಸೇರ್ಪಡೆಗೆ ಸಂಬಂಧಪಟ್ಟ ಯೋಜನೆಗಳ ಮಾಹಿತಿಯು ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ತಲುಪಬೇಕು ಎಂದರು.

ಗುಂಪುಗಳನ್ನು ಬ್ಯಾಂಕನೊಂದಿಗೆ ಲಿಂಕ್ ಮಾಡುವುದು ಹಣಕಾಸಿನ ಸೇರ್ಪಡೆಯನ್ನು ಉತ್ತೇಜಿಸಲು ಅತ್ಯಗತ್ಯ ಪೂರ್ವಾಪೇಕ್ಷಿತವಾಗಿದೆ. ಬ್ಯಾಂಕ್ ಲಿಂಕೇಜ್ ನಿಧಿಯ ರವಾನೆ, ವಿಮೆ ಮುಂತಾದ ಇತರೆ ಸೇವೆಗಳನ್ನು ಬಳಸಿಕೊಳ್ಳಲು ಗುಂಪುಗಳನ್ನು ಶಕ್ತಗೊಳಿಸುತ್ತದೆ. ಸ್ವ–ಸಹಾಯ ಸಂಘಗಳಿಗೆ ಬ್ಯಾಂಕ್ ಸಂಪರ್ಕವು ಹಣಕಾಸಿನ ಸೇವೆಗಳನ್ನು ತಲುಪಿಸಲು ಮಹಿಳಾ ಸ್ವ–ಸಹಾಯ ಗುಂಪುಗಳನ್ನು ಲಿಂಕ್ ಮಾಡುವುದು ವ್ಯವಸ್ಥಿತವಾಗಿ ಜಾರಿಯಾಗಬೇಕು ಎಂದರು.

ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯು ಈಗಾಗಲೇ ಕೆನರಾ ಬ್ಯಾಂಕ್, ಐಸಿಐಸಿಐ, ಯುಬಿಐ, ಯುಕೋ ಬ್ಯಾಂಕ್, ಐಪಿಪಿಬಿ ಮತ್ತು ಎಸ್.ಬಿ.ಐ ಜೊತೆಗೆ ಎಂಓಯು ಸಹಿ ಹಾಕಿದೆ. ಮುಂಬರುವ ದಿನಗಳಲ್ಲಿ ಬ್ಯಾಂಕ್ ಸಾಲ ಸಂಪರ್ಕ ತ್ವರಿತಗೊಳಿಸಲು ಇನ್ನೂ ಕೆಲ ಬ್ಯಾಂಕ್‌ಗಳೊಂದಿಗೆ ಎಂಓಯು ಬಗ್ಗೆ ಯೋಚಿಸಲಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಅಗ್ರಗಣ್ಯ ಬ್ಯಾಂಕ್ ವ್ಯವಸ್ಥಾಪಕ ಟಿ.ತಿರುಮಲೇಶ, ನಬಾರ್ಡ್ ಡಿ.ಡಿ.ಎಮ್ ಕಲಾವತಿ, ಎಸ್.ಬಿ.ಐ ಆರ್.ಸೆ.ಟಿ ನಿರ್ದೇಶಕರಾದ ವಿಜಯ ಕುಮಾರ, ರಾಜ್ಯ ಸಂಪನ್ಮೂಲ ವ್ಯಕ್ತಿ ಡಾ.ರಮೇಶ ಸುವಾರಿ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಜಗನ್ನಾಥ ಜೆ, ಎನ್.ಆರ್.ಎಲ್. ಎಮ್. ಜಿಲ್ಲಾ ವ್ಯವಸ್ಥಾಪಕರಾದ ವಿಜಯ ಕುಮಾರ, ಶ್ರೀಕಾಂತ ಬನ್ನಿಗೋಳ, ಟಿ.ಪಿ.ಎಂ. ಶಿವರಾಜ, ಬಿ.ಎಂ, ಮೌನೇಶ, ವಲಯ ಮೇಲ್ವಿಚಾರಕರಾದ ಪ್ರಕಾಶ, ಸೂರತ್ ಪ್ರಸಾದ ಗಟ್ಟು, ಶರಣು ಬಸವ, ಪ್ರದೀಪ್ ಕುಮಾರ, ಡಿ.ಎಂ.ಐ.ಎಸ್ ಮಂಜುನಾಥ, ಡಿಇಓ ನಾಗನಗೌಡ ಸೇರಿದಂತೆ ವಿವಿಧ ಬ್ಯಾಂಕಗಳ ಸಿಬ್ಬಂದಿ ಇದ್ದರು.

## ಹೆಚ್.ಎಂ.ಪಿ.ವಿ ವೈರಸ್ ಬಗ್ಗೆ ಯಾರು ಭಯಪಡುವ ಅಗತ್ಯವಿಲ್ಲ: ಜಿಲ್ಲಾಧಿಕಾರಿ ಬಿ. ಫೌಜಿಯಾ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಜ.10– **ಹೆಚ್.ಎಂ.ಪಿ.ವಿ** ವೈರಸ್ ಬಗ್ಗೆ ಯಾರು ಭಯಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಹೇಳಿದರು.

ಬುಧುವಾರದಂದು ಜಿಲ್ಲಾಧಿಕಾರಿಗಳ ಕಚೇರಿ ವಿಡಿಯೋ ಕಾನ್ಫರೆನ್ಸ್ ಹಾಲ್ ನಡೆದ ಜಿಲ್ಲಾ ಕಣ್ಗಾವಲು ಸಮಿತಿ ಸಭೆಯಲ್ಲಿ ಮಾತನಾಡಿದರು. ನೆಗಡಿ, ಕೆಮ್ಮು, ಜ್ವರ ಲಕ್ಷಣಗಳು ಕಂಡು ಬಂದರೆ ಹತ್ತಿರದ ಸರಕಾರಿ ಆಸ್ಪತ್ರೆಗಳಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು ಯಾವುದೇ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ತಾಲೂಕು ಅಸ್ಪತ್ರೆ, ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 6 ಬೆಡ್‌ಗಳು ಹಾಸಿಗೆ ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ 10 ಪ್ರತ್ಯೇಕ ಬೆಡ್‌ಗಳ ವ್ಯವಸ್ಥೆಗಳನ್ನು ಈಗಾಗಲೇ ಮಾಡಲಾಗಿದ್ದು, ಮುಂಜಾಗೃತ ಕ್ರಮವಾಗಿ ಕೋವಿಡ್ ಸಮಯದಲ್ಲಿ ಯಾವ ರೀತಿ ಮಾಸ್ಕ ಸೇನಿಟೈಜರ್, ಸಾಬೂನಿನಿಂದ ಸ್ವಚ್ಛವಾಗಿ ಕೈ ತೊಳೆದುಕೊಳ್ಳುವುದು ಇನ್ನೀತರೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ತಿಳಿಸಿದರು.

ಬೆಂಗಳೂರಿನಲ್ಲಿ ಈಗಾಗಲೇ 3 ತಿಂಗಳ ಮತ್ತು 8 ತಿಂಗಳ ಮಕ್ಕಳು ಈಗಾಗಲೇ ಗುಣಮುಖ ಹೊಂದಿರುತ್ತಾರೆ. ಅದಷ್ಟು 14 ವರ್ಷದ ಮಕ್ಕಳು ವೃದ್ಧರು ಹಾಗೂ ದೀರ್ಘಕಾಲದಿಂದ ಬಳಲುತ್ತಿರುವ ರೋಗಿಗಳು ಹೆಚ್ಚಿನ ಮುಂಜಾಗೃತೆ ವಹಿಸುವುದು ಅತ್ಯವಶ್ಯಕವಾಗಿರುತ್ತದೆ.

ಸಾಂಕ್ರಾಮಿಕ ರೋಗಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಮಂಡಳಿಯಲ್ಲಿ ಸ್ವಚತೆ ಕಾಯ್ದಿಕೊಳ್ಳಬೇಕು ಕಲುಷಿತ ನೀರು ಸರಬರಾಜು ಆಗದಂತೆ ಸಂಬಂಧಪಟ್ಟ ಇಲಾಖೆಗಳು ನೋಡಿಕೊಳ್ಳಬೇಕೆಂದರು.

ನೀರನ್ನು ಬ್ಲೀಚಿಂಗ್ ಪೌಡರನಿಂದ ಕ್ಲೋರೇಷನ ಮಾಡಿ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ತಿಳಿಸಿದರು.

ವೈದ್ಯಾಧಿಕಾರಿಗಳೊಂದಿಗೆ ಗುಂಪು ಸಭೆಗಳನ್ನು ನಡೆಸಿ ಜನರಿಗೆ ಆರೋಗ್ಯ ಶಿಕ್ಷಣವನ್ನು ನೀಡುವುದು ಹಾಗೂ ಮನೆಗೆ ಮನೆಗೆ ಭೇಟಿ ಹಾಗೂ ಶಾಲಾ ಭೇಟಿ ನೀಡಿ ಸಾಂಕ್ರಾಮಿಕ ರೋಗಗಳ ಅರಿವು ಮೂಡಿಸಬೇಕು.

ಸಾಂಕ್ರಾಮಿಕ ರೋಗ ಪ್ರಕರಣಗಳಿಗೆ ಚಿಕಿತ್ಸೆ ನೀಡಲು ಅಗತ್ಯವಿರುವ ಆಂಟಿಬಯೋಟಿಕ್ಸ್, ಐವಿ ಪ್ಲೋಯಿಡ್ಸ, ಓಆರ್‌ಎಸ್ ಪ್ಯಾಕೇಟ್ ಆರ್‍ಯೋಗ ಸಂಸ್ಥೆಗಳಲ್ಲಿ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಇಟ್ಟುಕೊಳ್ಳಲು ಸೂಚಿಸಿದರು.

ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ಸರಬರಾಜು ಓವರ್‌ಹೆಡ್ ಟ್ಯಾಂಕ್/ ತೊಂಬೆಗಳನ್ನು ಕಾಲಕಾಲಕ್ಕೆ ಬ್ಲೀಚಿಂಗ್ ಪುಡಿಯಿಂದ ಶುದ್ಧಗೊಳಿಸಬೇಕು ಪೈಪುಗಳು ಒಡೆದಿದ್ದಲ್ಲಿ ತಕ್ಷಣ ದುರಸ್ತಿ ಮಾಡಿಸಬೇಕು ಗೇಟ್ ವಾಲ್ವ್‌ಗಳಲ್ಲಿ ನೀರು ಸೋರಿಯಾಗದಂತೆ ನೋಡಿಕೊಳ್ಳಲು ಸೂಚಿಸಿದರು.

ಹಾವು ಕಡಿತ ಪ್ರಥಮ ಚಿಕಿತ್ಸೆ ಬ್ಯಾನರ್‌ಗಳು ಮಾಡಿ ಸೈನ್ ಬೋರ್ಡ್‌ಗಳು ಮಾಡಿ ಆಸ್ಪತ್ರೆಯಲ್ಲಿ ಹಾಕಿ ಜನರಿಗೆ ಜಾಗೃತಿ ಮೂಡಿಸಬೇಕು ಎಂದರು.

ನಾಯಿ ಕಡಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಚುಚ್ಚುಮದ್ದುಗಳನ್ನು ಅಸ್ಪತ್ರೆಯಲ್ಲಿ ಸಿಗುತ್ತವೆ ಯಾರು ಭಯಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಸಮಗ್ರ ರೋಗಗಳನ್ನು ತಡೆಗಟ್ಟುವಿಕ್ಕೆ ಅಂತರ್ ಇಲಾಖೆಗಳ ಪಾತ್ರ ಬಹಳ ಮುಖ್ಯವಿದೆ ಎಂದರು ಎಲ್ಲಾ ಅಧಿಕಾರಿಗಳು ಸೇರಿ ಸಮನ್ವಯತೆ ಕೆಲಸ ನಿರ್ವಹಿಸಲು ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸರ್ಜನ್ ಡಾ.,.ರುಖಿಯಾ ಅಸ್ನರಬ, ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಖೇಶ ಕಾಂಬಳೆ, ರೋಗಶಾಸ್ತ್ರಜ್ಞರು ಡಾ. ಚಂದ್ರಮೌಳೇಶ್ವರ, ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ರಾಯಚೂರು ಮಹಾನಗರ ನಿವಾಸಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿ: ಅಧ್ಯಕ್ಷೆ ನರಸಮ್ಮ ಮಾಡಗಿರಿ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.10– ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಯಚೂರು ನಗರವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು, ನಗರವಾಸಿಗಳ ಅಗತ್ಯಕ್ಕೆ ತಕ್ಕಂತೆ ಸೌಕರ್ಯ ಒದಗಿಸಬೇಕು. ನಗರದ ಸೌಂದರ್ಯೀಕರಣಕ್ಕೆ ಒತ್ತು ಕೊಡಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ರಾಯಚೂರು ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಜ.08ರಂದು ಬುಧವಾರ ನಡೆದ ಪಾಲಿಕೆಯ ಸಾಮಾನ್ಯ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಎಲ್ಲಾ ಕಡೆಗಳಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು. ಗಟಾರುಗಳಲ್ಲಿ ಮತ್ತು ತಗ್ಗು ಗುಂಡಿಗಳಲ್ಲಿ ನೀರು ನಿಲ್ಲದಂತೆ ಜಾಗೃತೆ ವಹಿಸಬೇಕು. ಕಸವು ಎಲ್ಲೆಂದರಲ್ಲಿ ಹರಡದಂತೆ ವಾಹನಗಳ ಮೂಲಕ ನಿಯಮಿತವಾಗಿ ಸಾಗಣೆ ಮಾಡಬೇಕು. ಎಲ್ಲಾ ವಾರ್ಡ್ಗಳಲ್ಲಿ ಘನತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಡೆಯಬೇಕು. ಅತ್ಯುಪಯುಕ್ತವಾದ ಘನ ತ್ಯಾಜ್ಯ ವಿಲೇವಾರಿ ವಾಹನಗಳು ಮತ್ತು ಯಂತ್ರೋಪಕರಣಗಳ ದುರಸ್ತಿ ನಿರ್ವಹಣೆಯು ಅಚ್ಚುಕಟ್ಟಾಗಿ ಆಗಬೇಕು. ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪರಣೆ ನಿಯಮಿತವಾಗಿ ನಡೆಯಬೇಕು ಎಂದು ಪಾಲಿಕೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕರ ಶೌಚಾಲಯ ಮತ್ತು ಸಮುದಾಯ ಶೌಚಾಲಯಗಳ ನಿರ್ವಹಣೆಯು ಅಚ್ಚುಕಟ್ಟಾಗಿ ನಡೆಯಬೇಕು. ಕೆಲವು ಶೌಚಾಲಯಗಳ ಪರಿಶೀಲನೆ ವೇಳೆಯಲ್ಲಿ ಸ್ವಚ್ಛತೆ ಮತ್ತು ಸುರಕ್ಷತೆ ಇಲ್ಲದಿರುವುದು ಕಂಡು ಬಂದಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಕ್ರಮಬದ್ಧವಾಗಿ ಮರು ಸಾರ್ವಜನಿಕ ಪ್ರಕಟಣೆ ನೀಡಿ, ಸರಿಯಾಗಿ ನಿರ್ವಹಣೆ ಮಾಡುವಂತವರಿಗೆ ಶೌಚಾಲಯಗಳ ನಿರ್ವಹಣೆಯ ಅವಕಾಶ ನೀಡಲು ಕ್ರಮವಹಿಸಬೇಕು ಎಂದು ಅಧ್ಯಕ್ಷರು ಸೂಚನೆ ನೀಡಿದರು.

ಪ್ರತಿ ದಿನ ನಗರದ ಶುಚಿತ್ವ ಕಾಪಾಡುವ ಪೌರಕಾರ್ಮಿಕರೇ ನಮಗೆ ದೇವರು. ಆದ್ದರಿಂದ ಪೌರಕಾರ್ಮಿಕರಿಗೆ ಅಚ್ಚುಕಟ್ಟಾಗಿ ಸಮವಸ್ತ್ರ ಹಾಗೂ ಸುರಕ್ಷತಾ ಪರಿಕರಗಳನ್ನು ನೀಡಲು ಅಗತ್ಯ ಕ್ರಮಕೈಗೊಳ್ಳಬೇಕು. ಕಾಲಕಾಲಕ್ಕೆ ಅವರನ್ನು ವೈದ್ಯಕೀಯ ತಪಾಸಣೆಗೊಳಪಡಿಸಬೇಕು. ಪೌರಕಾರ್ಮಿಕರ ನೇಮಕಾತಿ, ಬಡ್ತಿ ಎಲ್ಲವು ಕಾಲಮಿತಿಯೊಳಗೆ ನಡೆಸಲು ಕ್ರಮ ವಹಿಸಬೇಕು ಎಂದು ಅವರು ಪೌರಾಯುಕ್ತರಿಗೆ ಸೂಚನೆ ನೀಡಿದರು.

ರಾಯಚೂರು ಮಹಾನಗರ ಪಾಲಿಕೆಯ ಮೂಲ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ನೀಡಲು ಜಿಪಿಎಸ್ ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ಸ್ಲಂ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಮತ್ತು ಅವರು ವಾಸಿಸುವ ಪ್ರದೇಶದಲ್ಲಿ ಶುಚಿತ್ವ ಕಾಪಾಡಲು ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಮಹಾನಗರ ಪಾಲಿಕೆಯ ಮಳಿಗೆಗಳನ್ನು ಪಡೆದವರು ಬೇರೆಯವರಿಗೆ ಬಾಡಿಗೆ ನೀಡಿ ಹಣ ಪಡೆಯುವುದು ಕಂಡು ಬರುತ್ತಿದೆ. ಜೊತೆಗೆ ಮಹಾನಗರ ಪಾಲಿಕೆಗೆ ಸಹ ನಿಯಮಿತವಾಗಿ ಬಾಡಿಗೆ ಹಣ ಕಟ್ಟುತ್ತಿಲ್ಲ ಎಂದು ಕೆಲವು ಸದಸ್ಯರು ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಉಪ ಪೌರಾಯುಕ್ತರು, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮಹಾನಗರ ಪಾಲಿಕೆ ವ್ಯಾಪ್ತಿಯ ಮಳಿಗೆಗಳ ಟೆಂಡರ್ ಪ್ರಕ್ರಿಯೆ ಕುರಿತು ಹಲವಾರು ವರ್ಷಗಳಿಂದ ಚರ್ಚಿಸುತ್ತಿದ್ದರೂ ಟೆಂಡರ್ ನಡೆಸದೇ ಇರಲು ಕಾರಣವೇನು ಎಂಬುದು ತಿಳಿಯುತ್ತಿಲ್ಲ. ಆದಾಯ ಬರುವುದನ್ನು ಅಧಿಕಾರಿಗಳು ತಡೆಯುತ್ತಿದ್ದಾರೆ ಎಂದು ನಗರಸಭೆ ಸದಸ್ಯ ಎನ್.ಶ್ರೀನಿವಾಸರೆಡ್ಡಿ ಅವರು ಅಸಮಾಧಾನ ವ್ಯಕ್ತಪಡಿಸಿದರು. ಈ ಬಗ್ಗೆ ಪರಿಶೀಲಿಸಿ ಅತಿ ಶೀಘ್ರ ಟೆಂಡರ್ ಪ್ರಕ್ರಿಯೆ ನಡೆಸುವುದಾಗಿ ಪೌರಾಯುಕ್ತರು ಸಭೆಗೆ ಮಾಹಿತಿ ನೀಡಿದರು.

ತರಕಾರಿ ಮಾರುಕಟ್ಟೆ ಚರ್ಚೆ: ರೇಡಿಯೋ ಸ್ಟೇಷನ್ ರಸ್ತೆಯಲ್ಲಿನ ತರಕಾರಿ ಮಾರುಕಟ್ಟೆಯನ್ನು ಉಸ್ಮಾನಿಯಾ ತರಕಾರಿ ಮಾರುಕಟ್ಟೆಗೆ ಸ್ಥಳಾಂತರಿಸುವ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ರಾಯಚೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದೆ. ರಾಯಚೂರು ನಗರದ ಜನಸಂಖ್ಯೆ ದಿನದಿಂದ ದಿನಕ್ಕೆ ಏರುಗತಿಯಲ್ಲಿದೆ. ಹೀಗಾಗಿ ಎಲ್ಲ ಪ್ರದೇಶದ ಜನರಿಗೂ ಅನುಕೂಲವಾಗುವಂತೆ ನಗರದ ನಾಲ್ಕು ಕಡೆಗಳಲ್ಲಿ ತರಕಾರಿ ಮಾರುಕಟ್ಟೆಗಳನ್ನು ಪ್ರಾರಂಭಿಸಬೇಕು ಎಂದು ನಗರಸಭೆ ಸದಸ್ಯ ಎನ್. ಕೆ.ನಾಗರಾಜ ಸಭೆಗೆ ಸಲಹೆ ಮಾಡಿದರು.

ರಾಯಚೂರು ನಗರದ ವಾರ್ಡ್ ನಂ.19ರಲ್ಲಿನ ಶ್ರಿ ಆಂಜನೇಯ ದೇವಸ್ಥಾನದ ಬಳಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕೂಟ್‌ನಿಂದ ಬಾಲಕ ಮೃತಪಟ್ಟಿದ್ದು ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಮತ್ತು ಇನ್ನೀತರರು ಸಹ ಅಪಾಯಕ್ಕೆ ಸಿಲುಕದಂತೆ ಈ ಪ್ರದೇಶದಲ್ಲಿ ಸೂಕ್ತ ರಕ್ಷಣಾ ಕ್ರಮ ಕೈಗೊಳ್ಳುವಂತೆ ಸದಸ್ಯರಾದ ಹೇಮಲತಾ ಬೂದೆಪ್ಪ ಅವರು ಸಭೆಗೆ ಮನವಿ ಮಾಡಿದರು.

ನಗರದ ವಾರ್ಡ್ ನಂಬರ್ 29ರ ಹೊಸ ಕೋರ್ಟ್ ಬಳಿ ವಾಸಿಸುವ ಜನರಿಗೆ ಉಪ್ಪು ನೀರು ಪೂರೈಕೆಯಾಗುತ್ತಿದ್ದು, ಇದನ್ನು ಬೇಗನೆ ಸರಿಪಡಿಸಬೇಕು ಎಂದು ನಗರಸಭೆ ಸದಸ್ಯ ಜಯಣ್ಣ ಅವರು ಸಭೆಗೆ ತಿಳಿಸಿದರು. ಯರಮರಸ್ ಬಳಿಯಲ್ಲಿನ ಕೆಲವು ಖಾಸಗಿ ಲೇಔಟ್‌ಗಳು ಖಾತಾ ನೊಂದಣಿಯಿಲ್ಲದೇ ಕಾರ್ಯನಿರ್ವಹಿಸುತ್ತಿವೆ ಎಂದು ಸದಸ್ಯ ನರಸರೆಡ್ಡಿ ಅವರು ಸಭೆಗೆ ತಿಳಿಸಿದರು. ಸದಸ್ಯರಾದ ಇ.ಶಶಿರಾಜ, ಎಂ.ಪವನಕುಮಾರ ಹಾಗೂ ಇನ್ನೀತರರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಸಜೀದ್ ಸಮೀರ್, ಪಾಲಿಕೆಯ ಉಪ ಪೌರಾಯುಕ್ತರಾದ ಗುರುಸಿದ್ದಯ್ಯಸ್ವಾಮಿ ಹಿರೇಮಠ ಸೇರಿದಂತೆ ಪಾಲಿಕೆಯ ಸದಸ್ಯರು ಇದ್ದರು.



ಬಸವಕಲ್ಯಾಣ : – ತಾಲೂಕಿನ ಸುಕ್ಷೇತ್ರ ಹಾರಕೂಡದಲ್ಲಿ ಸದ್ಗುರು ಚನ್ನಬಸವ ಶಿವಯೋಗಿಗಳ 73ನೇ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಹಂದರಂಬಲಿ ಕಾರ್ಯಕ್ರಮದಲ್ಲಿ ಶ್ರೀ ಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಭಕ್ತರಿಗೆ ಪ್ರಸಾದ ಉಣಗೊಳಿಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷರಾದ ಸಿದ್ರಾಮಪ್ಪ ಗುದಗೆ, ಮುಡಬಿ ಪೊಲೀಸ್ ಠಾಣೆಯ ಪಿ.ಎಸ್.ಐ. ಜಯಶ್ರೀ ಹೊಡಲ, ಮಲ್ಲಿನಾಥ ಹಿರೇಮಠ ಹಾರಕೂಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಮೊರಾರ್ಜಿ ಶಾಲೆ ಗಬ್ಬೆದ್ದ ಶೌಚಾಲಯ ಮೂಗು ಮುಚ್ಚಿಕೊಂಡ ತಹಶೀಲ್ದಾರ

ಮಲ್ಲಮ್ಮ ನುಡಿ ವಾರ್ತೆ

ನಾಲತವಾಡ:ಸಮೀಪದ ಘಾಳಪೂಜಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ತಹಶೀಲ್ದಾರ್ ಬಲರಾಮ ಕಟ್ಟಿಮನಿ ದಿಢೀರ್ ಭೇಟಿ ನೀಡುವ ಮೂಲಕ ವಸತಿ ನಿಲಯದಲ್ಲಿ ಕೊಠಡಿಗಳ ಹಾಗೂ ಶೌಚಾಲಯಗಳ ಅಶುಚಿತ್ವ ಕಂಡು ಕೆಂಡಾಮಂಡರಾದ ಘಟನೆ ನಡೆಯಿತು.

ಕಳೆದ 2 ತಿಂಗಳ ಹಿಂದೆ ವಿದ್ಯಾರ್ಥಿನಿಗೆ ಯುವಕನೋರ್ವ ಬಲವಂತದ ತಾಳಿ ಕಟ್ಟಿದ್ದ ಪ್ರಕರಣ, ಅಗ್ನಿ ಅವಘಡದಂತೆ ಘಟನೆಗಳ ಹಿನ್ನಲೆ ಸದ್ಯ ಬಾರೀ ನಿಗಾಯಿಟ್ಟಿರುವ ಮೇಲಧಿಕಾರಿಗಳ ಆದೇಶದ ಹಿನ್ನಲೆಯಲ್ಲಿ ಭೇಟಿ ನೀಡಿದ ತಹಶೀಲ್ದಾರರು ವಿದ್ಯಾರ್ಥಿಗಳ ವಸತಿ ಕೊಠಡಿಗಳಲ್ಲಿ ಮಕ್ಕಳನ್ನು ಕರೆದು ವಿಚಾರಿಸಿದರು.

ಮಕ್ಕಳೊಂದಿಗೆ ಶಾಲೆಯಲ್ಲಿ ಊಟ, ಸಿಹಿ ತಿಂಡಿಗಳು, ಚಿಕನ್ ಊಟ, ಬೆಳಿಗ್ಗೆ ಉಪಹಾರ ಕುರಿತು ಮಾಹಿತಿ ಪಡೆದ ಅಧಿಕಾರಿಗಳು ಬೆಡ್‌ಶಿಟ್, ಶೂಜ್‌ಗಳು ವಿತರಣೆಯಾಗದ ಕುರಿತು ಸಂಶಯ ವ್ಯಕ್ತಪಡಿಸಿದರು.



ಮೂಗು ಮುಚ್ಚಿಕೊಂಡ ಅಧಿಕಾರಿಗಳು: ಸುಸಜ್ಜಿತ ವಸತಿ ಶಾಲೆಯನ್ನು ಕಂಡ ಸಂತಸ ವ್ಯಕ್ತಪಡಿಸಿದ್ದ ತಹಶೀಲ್ದಾರರು ನಂತರ ಮಕ್ಕಳ ಶೌಚಾಲಯಗಳಲ್ಲಿ ಸ್ವಚ್ಛತೆಯ ಕೊರತೆ ಹಾಗೂ ಗಬ್ಬು ವಾಸನೆಯಿಂದ ಮೂಗು ಮುಚ್ಚಿಕೊಂಡು ಪ್ರಾಚಾರ್ಯರ ಹಾಗೂ ನಿಲಯ ಪಾಲಕರ ವಿರುದ್ಧ ರೇಗಿದರು. ತಕ್ಷಣವೇ ಶೌಚಾಲಯಗಳಲ್ಲಿ ಸ್ವಚ್ಚತೆ ಕಾಪಾಡಿಕೊಳ್ಳಬೇಕು, ಸಂಗ್ರಹಿಸಲಾದ ತರಕಾರಿಯಲ್ಲೂ ಗುಣಮಟ್ಟದ ಕೊರತೆ ಕಂಡು ಬಂದಿದೆ, ಗಂಡು ಮಕ್ಕಳಿಗೆ ಬೆಡ್‌ಶಿಟ್ ವಿತರಣೆ ಏಕೆ ಮಾಡಿಲ್ಲ, ಶೂಜ್ ವಿತರಣೆಯಾದರೂ ಎಲ್ಲೂ ಕಾಣುತ್ತಿಲ್ಲ ಕಾರಣ ನೀಡಿ ಎಂದು ಸ್ಥಳದಲ್ಲಿದ್ದ ನಿಲಯಪಾಲಕ ಬಾಲಚಂದ್ರ ಮೇಟಿ ಅವರಿಗೆ ಸೂಚಿಸಿದರು.

ನಂತರ ಅಧಿಕಾರಿಗಳೊಂದಿಗೆ ಆಗಮಿಸಿದ್ದ ಕಂದಾಯ ನಿರೀಕ್ಷಕರಾದ ವಿ.ವಿ.ಅಂಬಿಗೇರ ಅವರಿಗೆ ನಿಲಯಪಾಲಕರಿಂದ ಸಮಸ್ಯೆಗಳ ಕುರಿತು ಕಾರಣ ಕೇಳಿ ಮಾಹಿತಿ ಸಂಗ್ರಹಿಸಿ ಎಂದು ಸೂಚಿಸಿದರು.

ಪರಿಶೀಲನೆ ಮಾಡಲಾಗಿ ಬೆಡ್‌ಶಿಟ್ ವಿತರಣೆಯಾಗದ ಕುರಿತು ದಾಖಲೆ, ಶೌಚಾಲಯದಲ್ಲಿ ಸ್ವಚ್ಛತೆ ಕೊರತೆ, ತರಕಾರಿ ಗುಣಮಟ್ಟದ ಕೊರತೆ, ಸಿಹಿ ವಿತರಣೆಯಾಗಿಲ್ಲ ಎನ್ನುವ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿದ್ದೆನೆ ಶೀಘ್ರವೇ ಮಾಹಿತಿ ಕೊಡುವಂತೆ ಕೇಳಿದ್ದೇನೆ ಇವೆಲ್ಲಾ ಅಂಶಗಳನ್ನು ಜಿಲ್ಲಾಧಿಕಾರಿಗಳಿಗೆ ಪತ್ರದ ಮೂಲಕ ಗಮನಕ್ಕೆ ತರುತ್ತೇನೆ–ಬಲರಾಮ ಕಟ್ಟಿಮನಿ, ತಹಶೀಲ್ದಾರ ಮುದ್ದೇಬಿಹಾಳ.

ಒತ್ತಾಯ: ವಸತಿ ಶಾಲೆಗಳಲ್ಲಿ ಪೋಲೀಸ್ ಇಲಾಖೆಯ ಮೂಲಕ ಮಕ್ಕಳಿಗೆ ರಕ್ಷಣೆ, ದೈರ್ಯ ಹಾಗೂ ಕಾನೂನು ಅರಿವು ಮೂಡಿಸಬೇಕು ಮತ್ತು ಮೊರಾರ್ಜಿ ಶಾಲೆಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು ರಾತ್ರಿ ವೇಳೆ ಭದ್ರತಾ ರಕ್ಷಕರನ್ನು ನೇಮಿಸಬೇಕು, ಪಕ್ಕದ ನಾಲತವಾಡದ ಮೊರಾರ್ಜಿ ಶಾಲೆಯಲ್ಲಿ 11 ಜನ ಡಿ ದರ್ಜೆ ನೌಕರರಿದ್ದಾರೆ, ಬ್ರಹತ್ ಘಾಳಪೂಜಿ ವಸತಿ ಶಾಲೆಯಲ್ಲಿ 6 ಜನ ಇದ್ದಾರೆ ಇದನ್ನು ಸರಿಪಡಿಸಬೇಕು ಎಂದು ಅಧಿಕಾರಿಗಳ ಜೊತೆಯಲ್ಲಿದ್ದ ಜಿಲ್ಲಾ ದೌರ್ಜನ್ಯ ಸಮೀತಿಯ ಡಿಎಸ್‌ಎಸ್ ಮುಖಂಡ ಮಲ್ಲು ತಳವಾರ ಆಗ್ರಹಿಸಿದರು. ಈ ವೇಳೆ ಕಂದಾಯ ನಿರೀಕ್ಷಕರಾದ ವಿ.ವಿ.ಅಂಬಿಗೇರ ಇದ್ದರು.

## ಇಟಗಾ; ಪಿಕೆಪಿಎಸ್‌ಗೆ ಅಧ್ಯಕ್ಷ ಉಪಾಧ್ಯಕ್ಷ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ತಾಲೂಕಿನ ಇಟಗಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಆನಂದಸಾಗರ್ ಎಸ್. ನಾರಾಯಣಪುರ್, ಉಪಾಧ್ಯಕ್ಷರಾಗಿ ಜೈಭೀಮ ಪುಂಡಲೀಕ, ಅವಿರೋಧ ಆಯ್ಕೆಯಾದರು. ಪಿಕೆಪಿಎಸ್ ಕಾರ್ಯಾಲಯದಲ್ಲಿ ಶುಕ್ರವಾರ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೆ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಭೀಮಪ್ರಕಾಶ ಸೊನಕಾಂಬಳೆ ಘೋಷಿಸಿದರು. ಬಳಿಕ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು. ಸಂಘದ ನೂತನ ನಿರ್ದೇಶಕರಾದ ಸಂತೋಷ ಬಸವಣ್ಣಪ್ಪ, ಬಸಪ್ಪ ನಿಂಗಪ್ಪ, ಶಂಕರ ಯಂಕಪ್ಪ, ಅಣ್ಣೆಪ್ಪ ಶಂಕ್ರಪ್ಪ, ಕಸ್ತೂರಬಾಯಿ ಸಂಗಪ್ಪ, ಕಲಾವತಿ ವೆಂಕಟರೆಡ್ಡಿ, ಪ್ರಭು ಭೀಮಶಾ, ಮಂಜುನಾಥ ಅಂಬಣ್ಣ, ಎಂ.ಡಿ ಇಸ್ಮಾಯಿಲ್ ರುಕ್ಕಮೋದ್ದಿನ, ಮಾಣಿಕಪ್ಪ ರಾಮಶೇಟ್ಟಿ, ಮುಖ್ಯ ಕಾರ್ಯನಿರ್ವಾಹಕ ದೀಪಿಕಾ, ಸಿಬ್ಬಂದಿಗಳಾದ ಪರಮೇಶ್ವರ್ ಸಿಂಧೆ, ಸೂರ್ಯಕಾಂತ ಸಿಂಧೆ, ಈರಮ್ಮ ಚೌದರಿ, ಮಹಾಂತೇಶ್ ಚೀನಕೇರಿ ಹಾಗೂ ಪ್ರಮುಖರಾದ ಶ್ರೀನಿವಾಸ ರೆಡ್ಡಿ, ಸೂರ್ಯಕಾಂತ ಪಂಚಾಳ, ಧನರಾಜ ಮೈಸುಟ್ಟಿ, ಭದ್ರು ಯಾಧವ, ಸಿದ್ದು ಕಲ್ಲೂರ್, ನಾಗರಾಜ ನಾರಾಯಣಪುರ್, ಸಿದ್ದು ರಾಜೇಶ್ವರ, ವಿಜಯಕುಮಾರ ಮಾನಕರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬೆಳಕೇರಾ; ಪಿಕೆಪಿಎಸ್ ಗೆ ಆಯ್ಕೆಯಾದ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ತಾಲೂಕಿನಬೆಳಕೇರಾ ಗ್ರಾಮದ ಪಿಕೆಪಿಎಸ್ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆಗೆ ರವಿವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದಅಭ್ಯರ್ಥಿಗಳಿಗೆಶುಕ್ರವಾರ ಪ್ರಮಾಣಪತ್ರವಿತರಿಸಲಾಯಿತು. ಸಾಮಾನ್ಯಸ್ಥಾನದಿಂದಗೆಲುವು ಸಾಧಿಸಿದ,ವಿಶ್ವನಾಥಮಾಣಿಕರಾವ, ಸಂಜೂಕುಮಾರ್ ಕಂಟೇಪ್ಪ, ಬಾಬುರಾವಗೋವಿಂದರಾವ, ಸಂತೋಷ್‌ವೀರಶೆಟ್ಟಿ,ಶಿವಕುಮಾರ ಈಶ್ವರ, ಮಹಿಳಾ ಸ್ಥಾನದಿಂದ, ಮಲ್ಲಮ್ಮಾಜಗನಾಥ,ನಸೀಮಾ ಬೇಗಂ ಇಸ್ಮಾಯಿಲ್ ಸಾಬ್, ಪರಿಶಿಷ್ಟ ಜಾತಿ ಸ್ಥಾನದಿಂದ, ಬಾಬುರಾವ್‌ಶಿವರಾಜ್,ಪರಿಶಿಷ್ಟ ಪಂಗಡಸ್ಥಾನದಿಂದ,ಮಾರುತಿ ತುಕಾರಾಮ,ಹಿಂದುಳಿದವರ್ಗ(ಎ) ಸ್ಥಾನದಿಂದ, ಮೋದಿನಸಾಬ್ ಮಸ್ತಾನಸಾಬ್, ಹಿಂದುಳಿದ ವರ್ಗ(ಬಿ)ಸ್ಥಾನದಿಂದ,ಮಡೇಪ್ಪಾ ರಾಮಣ್ಣ, ಸಾಲಗರರಲ್ಲದ ಸ್ಥಾನದಿಂದ, ವೆಂಕಟರೆಡ್ಡಿ ಶಾಯಿರೆಡ್ಡಿ ಆಯ್ಕೆಯಾಗಿದ್ದಾರೆ, ಒಟ್ಟು 12 ಅಭ್ಯರ್ಥಿಗಳಿಗೆ ಚುನಾವಣಾಧಿಕಾರಿ ಸುದರ್ಶನ್ ವಿಶ್ವಕರ್ಮ ಅವರು ಶುಕ್ರವಾರ ನಿರ್ದೇಶಕರ ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಮೃತಪ್ಪ, ಕ್ಷೇತ್ರ ಸಹಾಯಕ ಬೀರಪ್ಪ,ಸಿಬ್ಬಂದಿಗಳಾದಸಂತೋಷ ಈರಬಾಯಿ,ಸಂಗಮೇಶಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಜ. 12 ರಂದು ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ವಿವೇಕತೋರಣ ಉಪನ್ಯಾಸ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: 'ಸ್ವಾಮಿ ವಿವೇಕಾನಂದರ 162ನೇ ಜಯಂತಿಯ ಅಂಗವಾಗಿ ಜ. 12 ರಂದು ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ವಿವೇಕತೋರಣ ಉಪನ್ಯಾಸ ಆಯೋಜಿಸಲಾಗಿದೆ.

ಈ ಕುರಿತು ನಗರದ ಖಾಸಗಿ ಹೊಟೆಲ್ ಒಂದರಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಂಗತೋರಣದ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು ಹಾಗೂ ಕಲ್ಯಾಣ ಕರ್ನಾಟಕ ವಿಕಾಸ ಅಕಾಡೆಮಿಯ ಜಿಲ್ಲಾ ಸಂಚಾಲಕ ಡಾ.ಜಿ.ಆರ್. ವಸ್ತ್ರದ ಅವರು , 'ಸ್ವಾಮಿ ವಿವೇಕಾನಂದ' ವಿಶ್ವವನ್ನೇ ಚಕಿತಗೊಳಿಸಿದ ಮಹೋನ್ನತ ವ್ಯಕ್ತಿತ್ವ. ಅವರ ಧೀರವಾಣಿ, ಧೀರೋದ್ಧಾತ್ತ ನಡೆ, ಸಾಟಿಯಿಲ್ಲದ ಸ್ವಾಭಿಮಾನ, ಅಪರಿಮಿತ ಸ್ವದೇಶಾಭಿಮಾನ, 'ಗುರಿ ಸೇರುವವರೆಗೂ ವಿರಮಿಸದಿರಿ' ಎಂಬ ದೃಢ ವಿಶ್ವಾಸ ಇನ್ನೂ ಈ ಭೂಮಿಯನ್ನು ಜಾಗೃತಗೊಳಿಸುತ್ತಿವೆ. ನಮ್ಮೆಲ್ಲರ ಬಾಳು ಅದೇ ಘನತೆಯಿಂದ ಬೆಳಕಾಗಿ ಅಷ್ಟೇ ಸರಳತೆಯಿಂದ ಅನಂತವಾಗಲೆಂಬ ಸದಾಶಯದೊಂದಿಗೆ ಸಿಡಿಲ ಸನ್ಯಾಸಿ ಸ್ವಾಮಿ ವಿವೇಕಾನಂದರ 162ನೇ ಜಯಂತಿಯ ಅಂಗವಾಗಿ ಬಳ್ಳಾರಿಯಲ್ಲಿ ಅನುನಯದ ಕಾರ್ಯಕ್ರಮ 'ವಿವೇಕ ತೋರಣ-ಉಪನ್ಯಾಸ'ವನ್ನು ಆಯೋಜಿಸಲಾಗಿದೆ.

ಅಂದು ಸಂಜೆ 6.00 ರಿಂದ 8.00 ಗಂಟೆಯವರೆಗೆ ಡಾ| ರಾಜಕುಮಾರ ರಸ್ತೆಯಲ್ಲಿರುವ ರಾಘವ ಕಲಾಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಗದಗ ಮತ್ತು ವಿಜಯಪುರ ರಾಮಕೃಷ್ಣ-ವಿವೇಕಾನಂದ ಆಶ್ರಮದ ಆಶ್ರಮದ ಅಧ್ಯಕ್ಷರೂ, ಸರ್ವ ಸಮರ್ಪಿತರೂ ಹಾಗೂ ಪ್ರಖರ ವಾಗ್ಮಿ ಗಳೂ ಆಗಿರುವ ಪೂಜ್ಯ ಶ್ರೀ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರು ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ನಗರದ ಹಿರಿಯ ಉದ್ಯಮಿ ಕೆ.ಜಿ.ತಿಮ್ಮಾರೆಡ್ಡಿ ಹಾಗೂ ಖ್ಯಾತ ತಜ್ಞ ವೈದ್ಯ ಡಾ. ಬಿ.ಧರ್ಮಾರೆಡ್ಡಿ ಅವರು ಪಾಲ್ಗೊಳ್ಳಲಿದ್ದಾರೆ.

ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತಿ ಕುರಿತು ಹೇಳುವುದಾದರೆ, ಅವರು, ಗಣೇಶ ಚತುರ್ಥಿಯಂದು ಕೋಲಾರ ಜಿಲ್ಲೆಯಲ್ಲಿ ಜನಿಸಿದ ಶ್ರೀ ಸ್ವಾಮೀಜಿಯವರು ವಿಜ್ಞಾನ ಪದವೀಧರರಾಗಿದ್ದು, ಕೆನರಾ ಬ್ಯಾಂಕಿನಲ್ಲಿ ಸೇವೆಯಲ್ಲಿರುವಾಗ ರಾಮಕೃಷ್ಣ ಮಿಷನ್‌ನ ಪೂಜ್ಯ ಪುರುಷೋತ್ತಮಾನಂದರಿಂದ ಪ್ರಭಾವಿತರಾಗಿ 1993ರಲ್ಲಿ ಸನ್ಯಾಸ ಸ್ವೀಕರಿಸಿ, ಸ್ವಾಮಿ ನಿರ್ಭಯಾನಂದ ಸರಸ್ವತಿಗಳಾದರು.

ಶಿವಮೊಗ್ಗದ ಶಾರದ ಅಂಧರ ವಿಕಾಸ ಕೇಂದ್ರ, ಅಖಿಲ ಕರ್ನಾಟಕ ವಿವೇಕಾನಂದ ಮಹಾ ಮಂಡಳ, ವಿಜಯಪುರದ ಮನಗೂಳಿಯಲ್ಲಿ ವಿವೇಕಾನಂದ ವಸತಿ ಶಾಲೆಗಳನ್ನು ಆರಂಭಿಸಿದ್ದಲ್ಲದೇ ಬಡ, ಅನಾಥ ಮಕ್ಕಳಿಗೆ ಹಾಗೂ ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧರ ಮಕ್ಕಳಿಗೆ ಹಾಗೂ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳನ್ನು ದತ್ತು ತೆಗೆದುಕೊಂಡು ಎಸ್.ಎಸ್.ಎಲ್.ಸಿ. ವರೆಗೂ ಉಚಿತ ವಸತಿ ಊಟ ಮತ್ತು ಶಿಕ್ಷಣ ನೀಡುತ್ತಿದ್ದಾರೆ.

ಧಾರವಾಡ, ವಿಜಯಪುರ, ಗದಗ ಜಿಲ್ಲೆಗಳಲ್ಲಿ ರಾಮಕೃಷ್ಣ-ವಿವೇಕಾನಂದ ಆಶ್ರಮಗಳನ್ನು ಸ್ಥಾಪಿಸಿದ್ದಲ್ಲದೇ ಕಲಬುರ್ಗಿ, ಬೀದರ, ರಾಣೆಬೆನ್ನೂರ, ಚಿತ್ರದುರ್ಗ ಆಶ್ರಮಗಳನ್ನು ಆರಂಭಿಸಲು ಪ್ರೇರಕಶಕ್ತಿಯಾಗಿದ್ದಾರೆ.

'ಭವ್ಯ ಜೀವನ ಪರಿಚಯ' ಎಂಬ ಪ್ರವಚನ ಮಾಲಿಕೆ ಮೂಲಕ ಇಡೀ ಕರ್ನಾಟಕದಾದ್ಯಂತ ಸ್ವಾಮಿ ವಿವೇಕಾನಂದರ ವಿಚಾರಧಾರೆ ಹಾಗೂ ಭಾರತೀಯ ಪರಂಪರೆ ಎತ್ತಿ ಹಿಡಿಯುವ ಜೀವನ ಶೈಲಿಯನ್ನು ಪರಿಚಯಿಸುತ್ತಿದ್ದಾರೆ.

ವಿಶೇಷವಾಗಿ ಯುವಜನತೆ, ಪಾಲಕ-ಪೋಷಕರು ಹಾಗೂ ಶಿಕ್ಷಕರನ್ನು ಉದ್ದೇಶಿಸಿ ವ್ಯಕ್ತಿತ್ವ ವಿಕಸನ-ಪ್ರವಚನಗಳಿಂದ ಖ್ಯಾತರಾಗಿದ್ದಾರೆ.

ಶ್ರೀ ಸ್ವಾಮೀಜಿಯವರು ವಿಶ್ವ ಸಂಸ್ಥೆಯ ಸಿಯೋಲ್‌ನಲ್ಲಿ ಆಯೋಜಿಸಿ ನಿರ್ವಹಿಸಿದ ಕ್ರೀಡಾ ಹಾಗೂ ಸಾಂಸ್ಕೃತಿಕ ಮೇಳದಲ್ಲಿ ಪ್ರಭಾವಿತರಾಗಿ ಅವರಿಗೆ 'ಶಾಂತಿಯ ರಾಯಭಾರಿ' ಎಂಬ ಪ್ರಶಸ್ತಿ ನೀಡಿದ್ದಲ್ಲದೇ ವಿಶ್ವ ವಾಣಿಜ್ಯ ಕೇಂದ್ರ (ಘಖಿಅ) ಅನಾಹುತದಲ್ಲಿ ಮಡಿದವರಿಗಾಗಿ ಹಿಂದು ಧರ್ಮದ ಪರವಾಗಿ ಪ್ರಾರ್ಥನೆ ಸಲ್ಲಿಸಲು ಆಹ್ವಾನಿಸಿದ್ದು ನಮ್ಮ ರಾಜ್ಯಕ್ಕೆ ಸಂದ ಗೌರವ.

ಕ್ಯಾಲಿಫೋರ್ನಿಯಾ. ಚಿಕಾಗೋ, ಅಟ್ಲಾಂಟಾ, ಇಂಡಿಯಾನ ಪೊಲೀಸ್, ನ್ಯೂಜೆರ್ಸಿ ಮುಂತಾದ ಕಡೆಗಳಲ್ಲಿ ವಿಶ್ವದ ಹಲವಾರು ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಸತ್ಸಂಗ, ವ್ಯಕ್ತಿತ್ವ ವಿಕಸನ, ಸುಯೋಗ್ಯ ಯೋಚನೆ ಮೊದಲಾದ ವಿಷಯಗಳ ತರಬೇತಿ ಭಾಷಣ ನೀಡುತ್ತಿದ್ದಾರೆ ಎಂದರು.

ಭಕ್ತಿ ಸಂಗೀತ ಕಾರ್ಯಕ್ರಮ : ಅಂದು ಸಂಜೆ ಉಪನ್ಯಾಸದ ಆರಂಭದಲ್ಲಿ ಬಳ್ಳಾರಿಯ ಸುಪ್ರಸಿದ್ಧ ಹಿಂದೂಸ್ತಾನಿ ಗಾಯಕ ರಾಘವೇಂದ್ರ ಗುಡದೂರು ಅವರು ಭಕ್ತಿ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಅವರಿಗೆ ವೀರೇಶ್ ಕುರುಗೋಡು ಅವರು ತಬಲಾ ಸಾತ್ ನೀಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ರಂಗತೋರಣದ ಅಡವಿಸ್ವಾಮಿ ಇನ್ನಿತರರು ಇದ್ದರು.

# ಹಾಲುಮತ ಸಂಸ್ಕೃತಿ ವೈಭವ ಭೀತಿ ಪತ್ರ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತಾಲೂಕಿನ ಕನಕ ಭವನದಲ್ಲಿ ಹಾಲುಮತ ಸಂಸ್ಕೃತಿಯ ಕನಕ ಗುರುಪೀಠ ಸೇವಾ ಸಮಿತಿ ಅಧ್ಯಕ್ಷರಾದ ಬಾಲಾಜಿ ಜಬಾಡೆ ಅವರ ನೇತೃತ್ವದಲ್ಲಿ ಭಾಲ್ಕಿ ಕನಕ ಭವನದಲ್ಲಿ ಅದ್ದೂರಿಯಾಗಿ ಭೀತ್ತಿ ಪತ್ರ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಹಾಗೂ ಮುಖಂಡರು ಸೇರಿ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಿಗೆ ಹೂವಿನ ಸನ್ಮಾನ ಮುಖಾಂತರ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ದಿನಾಂಕ 12, 13 ಮತ್ತು 14 ಜನವರಿ 2025 ರಂದು ಹಾಲುಮತ ಸಂಸ್ಕೃತಿ ವೈಭವ-2025 ಕೃಷ್ಣಾ ನದಿಯ ತೀರದ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ - ತಿಂಥಣಿ ಬ್ರಿಜ್ ಕಲಬುರಗಿ ವಿಭಾಗ, ದೇವದುರ್ಗ ತಾಲೂಕು,ರಾಯಚೂರು ಜಿಲ್ಲೆಯಲ್ಲಿ ಮೂರು ದಿವಸ ನಡಿವುವ ಪೂಜಾರಿಗಳ ಸಮಾವೇಶ,ಹಾಲುಮತ ಭಾಸ್ಕರ ,ಕನಕರತ್ನ ಸಿದ್ಧಶ್ರೀ ಪ್ರಶಸ್ತಿ ಪ್ರಧಾನ ಮತ್ತು ಸನ್ಮಾನ ಕಾರ್ಯಕ್ರಮ ನಡೆಯಲಿದೆ.

ಭಾಲ್ಕಿ ತಾಲೂಕಿನ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರಬೇಕೆಂದು ವಿನಂತಿ ಮಾಡಲಾಯಿತು.

ಈ ಸಂಧರ್ಭದಲ್ಲಿ ಸಂಜೀವ್ ಕುಮಾರ್ ಗುಂಜರ್ಗೆ, ಶ್ರೀನಿವಾಸ್ ಮೇತ್ರೆ, ಧನರಾಜ್ ಮೇತ್ರೆ, ರವಿ ಮೇತ್ರೆ, ರಮೇಶ್ ಮೇತ್ರೆ, ವೆಂಕಟ್ ಮಲಗೊಂಡ, ಪೂಜ್ಯರಾದ ಗೋಪಾಲ್ ಪೂಜಾರಿ, ಲೋಕೇಶ್ ಗೋದೇ, ದಾಸ್ ಖೇಡ್ಕರ್, ಯಲ್ಲಾಲಿಂಗ ಮೇತ್ರೆ, ಮಾರುತಿ ಕುರುಬ ಖೇಳ್ಗಿ, ಲೋಕೇಶ್ ಭಾಗ್ಯ ನಗರ ಮತ್ತಿತರು ಭಾಗಿಯಾಗಿದ್ದರು.

# ಜ.12 ರಂದು ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.10-ಬಳ್ಳಾರಿಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 220/110/11ಕೆ.ವಿ ಅಲ್ಲೀಪುರ ಸ್ವೀಕರಣ ಕೇಂದ್ರದ ಎಫ್-37 ಮತ್ತು ಎಫ್-38 ಕೈಗಾರಿಕಾ ಫೀಡರ್‌ಗಳ ಹೆಚ್ಚುವರಿ ಭಾರವನ್ನು ಎಫ್-71 ಹರಗಿನದೋಣಿ ಎನ್‌ಜೆವೈ ಫೀಡರ್ ಮೇಲೆ ವರ್ಗಾಹಿಸುವ ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಜ.12 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯವಾಗಲೀದೆ ಎಂದು ಜೆಸ್ಕಾಂನ ಗ್ರಾಮೀಣ ಉಪ ವಿಭಾಗದ ಕಾರ್ಯ ಮತ್ತು ಪಾಲನಾ ಸಹಾಯಕ ಕಾರ್ಯನಿರ್ವಾಹಕಅಭಿಯಂತರರಾದ ಮೋಹನಬಾಬು ತಿಳಿಸಿದ್ದಾರೆ.

*ವಿದ್ಯುತ್ ವ್ಯತ್ಯವಾಗುವ ಪ್ರದೇಶಗಳು:*

ಎಫ್-32 ಐಪಿ ಸೆಟ್ ಫೀಡರ್ ಮಾರ್ಗದ ಬೆಳಗಲ್ಲು,ಬೆಳಗಲ್ಲು ತಾಂಡ,ಜಾನೆಕುಂಟೆ,ಜಾನೆಕುಂಟೆ ತಾಂಡ, ಹರಗಿನದೋಣಿ, ಅಲ್ಲೀಪುರ, ಆಲದಹಳ್ಳಿ, ಕೃಷಿ ಪ್ರದೇಶಗಳು. ಎಫ್-37 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು ಗ್ರಾಮ, ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶಗಳು.

ಎಫ್-38 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು,ಬೆಳಗಲ್ಲು ತಾಂಡ,ಜಾನೆಕುಂಟೆ,ಜಾನೆಕುಂಟೆ ತಾಂಡ,ಹರಗಿನದೋಣಿಗ್ರಾಮಗಳು. ಎಫ್-71 ಹರಗಿನದೋಣಿ ಎನ್‌ಜೆವೈ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ, ಹೊನ್ನಳ್ಳಿ, ಹೊನ್ನಳ್ಳಿ ತಾಂಡ ಗ್ರಾಮ ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮದ್ಯಪಾನ, ಮದ್ಯ ಮಾರಾಟ ನಿಷೇಧಾಜ್ಞೆ ಜಾರಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 10- : ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯ ಅಂಗವಾಗಿ ಮದ್ಯಪಾನ ಹಾಗೂ ಮದ್ಯ ಮಾರಾಟ ನಿಷೇಧಾಜ್ಞೆ ಜಾರಿಗೊಳಿಸಿ ಯಾದಗಿರಿ ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ಆದೇಶ ಹೊರಡಿಸಿದ್ದಾರೆ.

ಯಾದಗಿರಿ ಜಿಲ್ಲೆಯಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 21ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ, ಯಾದಗಿರಿ ತಾಲೂಕಿನ ಮೈಲಾಪೂರ, ಅರಕೇರಾ ಹಾಗೂ ರಾಮಸಮುದ್ರ 2025ರ ಜನವರಿ 12ರ ಮಧ್ಯರಾತ್ರಿಯಿಂದ 2025ರ ಜನವರಿ 18ರ ಮಧ್ಯರಾತ್ರಿಯ ವರೆಗೆ ಎಲ್ಲಾ ವೈನ್‌ಶಾಪ್, ಬಾರ್‌ಗಳು, ಸಗಟು ಮತ್ತು ಚಿಲ್ಲರೆ ಮದ್ಯ ಮದ್ಯ ಮಾರಾಟ ನಿಷೇಧಿಸಿ ಆದೇಶಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**CITATION**

**IN THE COURT OF THE PRL. CIVIL JUDGE AND JMFC., AT HUMNABAD**

**CRL. MISC. No.2138/2024**

Petitioners:-

1) Manna Bai W/o Late. Mahadev Age 76 Yrs Occu Household

2) Narsinga Giri S/o Late. Mahadev Giri Age 72 Yrs Occu Agriculture

3) Mohan Giri S/o Lat Mahadev Giri Age 48 Yrs Occu Agriculture

4) Kusuma Bai W/o Narsing rao Age 71 Yrs

5) Sheelavati W/o Mohan Giri Age 42 Yrs Occu Household

All R/o Village Hallikhed (k) Tq:Humnabad Dist:Bidar.

Respondent:-

The Registrar of birth and Death Through the Tahasildar Office Humnabad

Sub:-Petitione U/Sec 13(3) of Birth and Death Registration Act 1969

Whereas the above named petitioners have filed the petition under section 13(3) of birth and death Registration Act 1969 praying this honorable court to issu death Certificate wife of petitioner No. 1 and petitioner No.2 & 3 sons and petitioner No. 4 and 5 Daughter-in-Law namely; Mahadev S/o Rajendra Giri who died on 19-11-2024 at village Hallikhed (K) Tq:Humnabad Dist:Bidar. The petitioners claiming the death Certificate of said Mahadev for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 11-02-2025 at 11.00AM in person or any authorized pleader to answer such claim otherwise th matter will be heard and determined in your absence as per law.

Given under my hand and seal of he court, this the 07-01-2025

//By order of the court//
Chief Ministerial Officer,
Prl. Civil judge and JMFC court
Humnabad

# ಪಿಕೆಪಿಎಸ್ ರೈತರ ಆಶೋತ್ತರ ಪೂರೈಸಲಿ - ಹಾರಕೂಡ ಶ್ರೀ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ರೈತ ಕೇಂದ್ರ ವ್ಯವಸ್ಥೆಯಾಗಿದ್ದು, ಕೃಷಿಕರ ಪ್ರಾಥಮಿಕ ಬೇಡಿಕೆಗಳನ್ನು ಪೂರೈಸುವಂತ ರೈತಸ್ನೇಹಿ ಕೇಂದ್ರವಾಗಿ ಕಾರ್ಯನಿರ್ವಹಿಸುವಂತಾಗಬೇಕು ಎಂದು ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಗ್ರಾಮದ ಪಿಕೆಪಿಎಸ್ ನ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಪದಗ್ರಹಣ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ನೇಗಿಲ ಯೋಗಿಯ ನಿಸ್ವಾರ್ಥ ಸೇವೆ ಮಾಡುವುದೇ ದೇವರ ಪೂಜೆಯಾಗಿದೆ, ರಾಷ್ಟ್ರದ ಅನ್ನದಾತ ನೆಮ್ಮದಿಯಿಂದ ಬದುಕಿದರೆ ಮಾತ್ರ ದೇಶ ಸುಭಿಕ್ಷೆಯಾಗಿರುತ್ತದೆ.

ಆಧುನಿಕ ತಂತ್ರಜ್ಞಾನದ ಬಳಕೆಯ ಕುರಿತು ಇಂತಹ ಸಂಘಗಳು ನೂತನವಾದ ಯೋಜನೆಯನ್ನು ರೂಪಿಸಿಕೊಂಡು ರೈತರಿಗೆ ಋತುಮಾಕ್ಕನುಗುಣವಾಗಿ ಸೂಕ್ತ ಮಾರ್ಗದರ್ಶನ, ಸಹಾಯ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವಂತಾಗಬೇಕು.

ಕೃಷಿ ಪ್ರಧಾನವಾದ ನಮ್ಮ ದೇಶ ಇಡೀ ವಿಶ್ವಕ್ಕೆ ಆಹಾರ ಪೂರೈಸುವ ಅನ್ನದಾತವಾಗುವಂತೆ, ಸರ್ವರೂ ತಳಸ್ಪರ್ಶಿಯಿಂದ ಪ್ರಯತ್ನಶೀಲರಾಗಬೇಕಿರುವುದು ತುರ್ತು ಅಗತ್ಯವಿದೆ ಎಂದು ನುಡಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರ ಸಾರಥ್ಯದಲ್ಲಿ ಹಾರಕೂಡ ಪಿಕೆಪಿಎಸ್ ರೈತಬಂಧುವಾಗಿ ಕಾರ್ಯನಿರ್ವಹಿಸುವಂತಾಗಲಿ, ರೈತ ವರ್ಗ ತೃಪ್ತಿಯ ಜೀವನ ಸಾಗಿಸುವಂತಾಗಲಿ ಎಂದು ಶುಭ ಹಾರೈಸಿದರು ಈ ವೇಳೆ ಮುಖಂಡರಾದ ಪೃಥ್ವಿರಾಜ ದೇಗಾಂವ, ರಾಜಕುಮಾರ ಪಾಟೀಲ ಹಾರಕೂಡ, ನೂತನ ಅಧ್ಯಕ್ಷ ಸಂಜುಕುಮಾರ ದೇಗಾಂವ ಗದಲೇಗಾಂವ ಬಿ. ಉಪಾಧ್ಯಕ್ಷ ಸುಭಾಷ ದೇಗಾಂವ ಹಾರಕೂಡ, ರಾಮಲಿಂಗ ರೆಡ್ಡಿ, ಅಯ್ಯಪ್ಪ ಸಜ್ಜನಶೆಟ್ಟಿ, ಶರಣು ಗುದಗೆ, ನಾಗೇಂದ್ರ ಪಾಟೀಲ್ ಖೇರ್ಡಾ, ಕೆ. ದಯಾನಂದ ದೇಗಾಂವ, ಮಂಜುನಾಥ ಪಿರಜೆ, ಶಿವಶರಣಪ್ಪ ಜಮಾದಾರ, ಸುನೀತಾ ಪಾಟೀಲ ಸೈದಾಪುರ, ಬಸಮ್ಮ ತುಳಾಜೆ, ಸಿದ್ರಾಮ ಹೆಗಡೆ, ಸಂಜು ಪೂಜಾರಿ,

ರಾಮಲಿಂಗ ಭೂತೆ, ಶ್ಯಾಮಲಿಂಗ ಬುರಂಡೆ ಮುಂತಾದವರು ಉಪಸ್ಥಿತರಿದ್ದರು. ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಾಗೇಶ ಮಹಾಜನ ಸ್ವಾಗತಿಸಿದರು. ವಾಲ್ಮೀಕಿ ಬಿರಾದಾರ ವಂದಿಸಿದರು.

# ಕಲ್ಯಾಣ ದಾರ್ಶನಿಕ ಪರಂಪರೆಯ ನೆಲ: ಡಾ. ಪ್ರಿಯಾಂಕಾ ಚಂದ್ರ.



(ವರದಿ.ಡಿ.ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ:- ಕಲ್ಯಾಣದ ಭಾಗದಲ್ಲಿ ಶರಣರು, ನಾನಕರು, ಸಾಯಿಬಾಬಾ, ಸಂತರು, ಸೂಫಿಗಳು ಸೇರಿ ಹಲವು ದಾರ್ಶನಿಕ ಪರಂಪರೆಯ ಪವಿತ್ರ ನೆಲವಿದೆ. ಸಾಮಾಜಿಕ ಸಮಾನತೆಯ ಪಾಠ ಮಾಡಿದ ನೆಲ ಕಲ್ಯಾಣ ಜಗತ್ತಿನ ಗಮನ ಸೆಳೆಯುವ ತಾತ್ವಿಕ ಕೇಂದ್ರವಾಗಿದೆ ಎಂದು

ನವದೆಹಲಿಯ ಭಾರತ ಸರ್ಕಾರದ ಸಂಸ್ಕೃತಿ ಮಂತ್ರಾಲಯದ ನಿರ್ದೇಶಕಿ

ಡಾ.ಪ್ರಿಯಾಂಕಾ ಚಂದ್ರ ಹೇಳಿದರು.

ಇಲ್ಲಿನ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂವಾದ ಸಮಾರಂಭದಲ್ಲಿ ಮಾತನಾಡಿ ವಿಶ್ವಗುರು, ತತ್ವಜ್ಞಾನಿ ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಚಿಂತನೆ ಮತ್ತು ಸಾಮಾಜಿಕನ್ಯಾಯದಪರಿಕಲ್ಪನೆಗಳಿವೆ ಎಂದರು.

ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರ ಸಿದ್ಧಾಂತ ವಿಶ್ವಮಾನ್ಯವಾಗಿವೆ. ಅವರ ತತ್ವ ಸಿದ್ಧಾಂತಗಳನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚು ಪ್ರಸಾರವಾಗುವ ಕೆಲಸಗಳು ನಡೆಯಲಿ ಎಂದರು.

ನವದೆಹಲಿಯ

ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು

ಪ್ರಧಾನ ಕಾರ್ಯದರ್ಶಿಗಳು

ಡಾ.ರಾಜಕುಮಾರ ಹೆಬ್ಬಾಳೆ ಮಾತನಾಡಿ ರಾಷ್ಟ್ರೀಯ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತಿನ ವತಿಯಿಂದ ಬರುವ ಬಸವ ಜಯಂತಿಯ ಅಮೃತ ಮಹೋತ್ಸವದಲ್ಲಿ ಉತ್ತರ ಭಾರತದ ಹಾಗೂ ದಕ್ಷಿಣ ಭಾರತದ ಕಲಾವಿದರನ್ನು ಬಸವಕಲ್ಯಾಣದ ಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ತರಲು ಪ್ರಯತ್ನ ಮಾಡುತ್ತೇನೆ ಎಂದರು.

ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ವತಿಯಿಂದ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವವು ಪ್ರತಿ ವರ್ಷ ಭಾರತಾದ್ಯಂತ ಆಚರಿಸಲು ಕೇಂದ್ರ ಸರ್ಕಾರ ಆದೇಶಿಸುವಂತೆ ಹಾಗೂ ಬಸವಣ್ಣನವರನ್ನು ಭಾರತದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಲು ಮನವಿಪತ್ರ ಸಲ್ಲಿಸಲಾಯಿತು.

ಬಿಡಿಪಿಸಿ ಅಧ್ಯಕ್ಷರಾದ ಬಸವರಾಜ ಕೋರಕೆ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಚಿರಡೆ, ಕಾರ್ಯದರ್ಶಿ ಶ್ರೀಕಾಂತ ಬಡದಾಳೆ, ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಾ. ಮಹೇಶ ಪಾಟೀಲ, ಅನಂತ ಚಂದ್ರ, ಸಂಸ್ಥೆಯ ಆಡಳಿತಾಧಿಕಾರಿ ಡಾ. ಮಲ್ಲಿಕಾರ್ಜುನ ಲಕಶೆಟ್ಟಿ, ಶ್ರೀ ಬಸವೇಶ್ವರ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಡಾ. ರುದ್ರಮಣಿ ಮಠಪತಿ, ಡಾ. ಶಾಂತಲಾ ಪಾಟೀಲ, ವಿವೇಕಾನಂದ ಶಿಂಧೆ, ಡಾ. ಬಸವರಾಜ ಖಂಡಾಳೆ, ಪವನ ಪಾಟೀಲ, ಸಂಗೀತಾ ಮಹಾಗಾವೆ, ಜಗದೇವಿ ಜಾವಳಗೆ, ರೋಶನ್ ಬಿ, ಶ್ರೀನಿವಾಸ ಉಮಾಪುರೆ, ಗಂಗಾಧರ ಸಾಲಿಮಠ, ಗುರುದೇವಿ ಕಿಚಡೆ, ನೀಲಮ್ಮ ಮೇತ್ರೆ, ನಾಗವೇಣಿ ಬಿರಾದಾರ, ಸುನಿಲ್ ಮದಕಟ್ಟಿ, ಬಸವರಾಜ ಗುಂಗೆ ಮೊದಲಾದವರಿದ್ದರು.

ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ವತಿಯಿಂದ

ಈ ವೇಳೆ ಡಾ. ಪ್ರಿಯಾಂಕಾ ಚಂದ್ರ, ಡಾ. ರಾಜಕುಮಾರ ಹೆಬ್ಬಾಳೆ, ಡಾ. ಮಹೇಶ ಪಾಟೀಲ ಅವರನ್ನು ಸನ್ಮಾನಿಸಲಾಯಿತು.

ಶ್ರೀ ಬಸವೇಶ್ವರ ಪದವಿ ಕಾಲೇಜು ಪ್ರಾಚಾರ್ಯ ಡಾ. ಭೀಮಾಶಂಕರ ಬಿರಾದಾರ ಇದ್ದರು.

# ರಸ್ತೆ ಒತ್ತುವರಿ ಮಾಡಿದ ಶೆಡ್, ಡಬ್ಬಿ ತೆರವಿಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಜ.10-ರಾಯಚೂರಿನ ಜಿಲ್ಲಾಧಿಕಾರಿಗಳ ವಸತಿ ಗೃಹ ರಸ್ತೆಯಿಂದ ಸಾತ್‌ಮೈಲ್ ರಸ್ತೆಯವರೆಗೂ ಸ್ಟೇಟ್ ಹೈವೇ-30 ಮತ್ತು ನ್ಯಾಷನಲ್ ಹೈವೇ 150-ಎ ರಲ್ಲಿನ ರಸ್ತೆ ಗಡಿಗಳನ್ನು ಒತ್ತುವರಿ ಮಾಡಿ ಶೆಡ್ ಮತ್ತು ಡಾಬಾಗಳನ್ನು ಹಾಕಿಕೊಂಡಿರುವ ವ್ಯಾಪಾರಸ್ಥರು ತಮ್ಮ ಸ್ವಂತ ಖರ್ಚಿನಲ್ಲಿ ಕೂಡಲೇ ತಮ್ಮ ಡಬ್ಬಿ ಮತ್ತು ಶೆಡ್ ಅಂಗಡಿಗಳನ್ನು ಅತ್ಯಂತ ತುರ್ತಾಗಿ ತೆರವುಗೊಳಿಸಬೇಕೆಂದು ರಾಯಚೂರು ಮಹಾನಗರ ಪಾಲಿಕೆಯ ಪೌರಾಯುಕ್ತರು ಸೂಚಿಸಿದ್ದಾರೆ. ಒಂದು ವೇಳೆ ನಾವು ತೆರವುಗೊಳಿಸುವ ಸಂದರ್ಭದಲ್ಲಿ ತಮ್ಮ ಯಾವುದೇ ಡಬ್ಬಿಗಳು ಶೆಡ್‌ಗಳು, ಸರಕುಗಳು ಜಖಂಗೊಂಡಲ್ಲಿ ಈ ಕಚೇರಿಯು ಜವಾಬ್ದಾರರಾಗಿರುವುದಿಲ್ಲ. ಹಾಗೂ ಯಾವುದೇ ನಷ್ಟ ಪರಿಹಾರವನ್ನು ಕೊಡಲಾಗವುದಿಲ್ಲವೆಂದು ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ಒತ್ತುವರಿದಾರರಿಗೆ ತಿಳಿಸಲಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಕ್ತರ ಆರಾಧ್ಯ ದೇವತೆ ಬನಶಂಕರಿದೇವಿ



ಜನೇವರಿ 13 ರಂದು ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ಬನಶಂಕರಿದೇವಿ ಜಾತ್ರೆ ನಡೆಯಲಿದ್ದು, ಆ ನಿಮಿತ್ತ ಲೇಖನ.

ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ

ಉತ್ತರಕರ್ನಾಟಕದಬಹುದೊಡ್ಡ ಜಾತ್ರೆಬಾದಾಮಿಬನಶಂಕರಿದೇವಿ ಜಾತ್ರೆ. ಬನದ ಹುಣ್ಣಿಮೆಯಿಂದ ಪ್ರಾರಂಭವಾಗುವ ಈ ಜಾತ್ರೆ ಭಾರತ ಹುಣ್ಣಿಮೆಯವರೆಗೂ ನಡೆಯುತ್ತದೆ. ದೇಶದ ವಿವಿಧ ರಾಜ್ಯಗಳ ಭಕ್ತರು ದೇವಿಯ ದರ್ಶನಕ್ಕೆಬರುತ್ತಿದ್ದು, ಇದೊಂದು ಉತ್ಸವವಾಗಿ ನಡೆದುಕೊಂಡು ಬರುತ್ತಿದೆ. ಭಾರತದಲ್ಲಿರುವ ಶಕ್ತಿ ಪೀಠಗಳಲ್ಲಿ ಬದಾಮಿ ಬನಶಂಕರಿದೇವಿಯ ಕ್ಷೇತ್ರವೂ ಒಂದು. ಅಗಸ್ತ್ಯ ಋಷಿಗಳು ಬನಶಂಕರಿಯನ್ನು ಬನಸಿರಿದೇವಿ ಎಂದು ಕರೆದರು. 'ಬನ' ಎಂದರೆ ಅರಣ್ಯ, 'ಸಿರಿ' ಎಂದರೆ ಸಂಪತ್ತು. ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಬಾದಾಮಿ ಅವರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಚಾಲುಕ್ಯರು ಬನಶಂಕರಿದೇವಿಯನ್ನುತಮ್ಮಆರಾಧ್ಯ ದೇವತೆಮತ್ತುಕುಲದೇವತೆಯನ್ನಾಗಿ ಪೂಜಿಸುತ್ತಿದ್ದರು.

ಸ್ಕಂದ ಪುರಾಣದ ಪ್ರಕಾರ ಪೂರ್ವಕಾಲದಲ್ಲಿ ನೂರಾರು ವರ್ಷಗಳು ಮಳೆಯೇ ಆಗದೇ ಭೂಮಿಯಲ್ಲಿ ಘೋರ ದುರ್ಭಿಕ್ಷೆ ಉಂಟಾಗಲು, ಸಕಲಕ್ರಿಯಾಕರ್ಮಗಳು ಲೋಪವಾದಾಗ ದೇವತೆಗಳು ನಿರಾಶರಾದರು. ಬ್ರಹ್ಮಾಂಡವೇ ತತ್ತರಿಸಿ ಹೋಯಿತು. ಆಗ ಎಲ್ಲಾ ದೇವತೆಗಳು ಮತ್ತು ಪ್ರಜೆಗಳು ಸೇರಿ ಶಿವನನ್ನು ಕುರಿತು ತಪಸ್ಸು ಮಾಡಿದರು. ಶಿವ, ಬ್ರಹ್ಮ ಮತ್ತು ಎಲ್ಲಾ ದೇವತೆಗಳು ಈಗಿರುವ ಬಾದಾಮಿ ಕ್ಷೇತ್ರಕ್ಕೆ ಬಂದು ಅಲ್ಲಿ ಬನಶಂಕರಿಯನ್ನು ಕುರಿತು ಪ್ರಾರ್ಥನೆ ಮಾಡಿ ಈ ಜಗತ್ತಿನ ಜನ್ಮ ಸ್ಥಿತಿ ಮತ್ತು ಲಯಕ್ಕೆ ಕಾರಣಳಾದವಳೇ ನೀನು. ಈ ಕ್ಷೇತ್ರದಲ್ಲಿ ಮಳೆಯಿಲ್ಲದೆ ಯಜ್ಞ ಯಾಗಾದಿಗಳು ನಿಂತು ಹೋಗಿವೆ. ಜಗತ್ತಿನ ಜೀವವಾದ ಜಲವೇ ಇಲ್ಲದೆ ಬದುಕಲು ಕಷ್ಟವಾಗಿದೆ. ಆದ್ದರಿಂದ ಈ ಜಗತ್ತಿಗೆ ಜಲ ನೀಡಿ ಕಾಪಾಡು ಮಳೆ ಸುರಿಸು, ಎಲ್ಲಾ ಕರ್ಮಾದಿಗಳು ನಿರ್ವಿಘ್ನವಾಗಿ ಸಾಗುವಂತೆ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸಿದರು.

ಈ ಪ್ರಾರ್ಥನೆಗೆ ಬನಶಂಕರಿದೇವಿ ಪ್ರಸನ್ನಳಾಗಿ ಪ್ರತ್ಯಕ್ಷಳಾದಳು. ತನ್ನ ಶರೀರದಿಂದ ಉತ್ಪನ್ನವಾದ ಶಾಖಗಳಿಂದ ಮೂರೂ ಲೋಕಗಳನ್ನು ಸಂರಕ್ಷಿಸಿದಳು. ಭೂಮಿತಾಯಿ ನೀರಿನ ದಾಹವನ್ನು ತಣಿಸಿದಳು. ಅದರಿಂದ ಆಹಾರ ಧಾನ್ಯಗಳು ಉತ್ಪತ್ತಿಯಾಗಿ ಜಗತ್ತಿನ ಜೀವರಾಶಿಗಳ ಹಸಿವು ನಿವಾರಿಸಿತು. ಜಲ ಸಂಪತ್ತಿನಿಂದ ಅನೇಕ ಬನಗಳು ನಿರ್ಮಾಣವಾದವು. ದೇವಿಯ ಮೈ ಶಾಖದಿಂದ ತರಕಾರಿ (ಕಾಯಿಪಲ್ಲೆ) ಗೆಡ್ಡೆ ಗೆಣಸುಗಳು ಉತ್ಪತ್ತಿಯಾದವು. ಈ ಕಾರಣದಿಂದ ದೇವಿಯನ್ನು 'ಶಾಕಾಂಬರಿ' ಎಂದು ಸಹ ಕರೆಯುವರು.

ದೇವಿಯ ಕ್ಷೇತ್ರದ ಅಕ್ಕಪಕ್ಕದಲ್ಲಿ ಹರಿದ್ರಾತೀರ್ಥ, ತೈಲತೀರ್ಥ, ಕ್ಷಮಾತೀರ್ಥ, ಪದ್ಮತೀರ್ಥ, ಇಂದ್ರೀಯ ನಿಗ್ರಹತೀರ್ಥ ಹೀಗೆ ಅನೇಕ ತೀರ್ಥ ಕೊಳಗಳನ್ನು ಸೃಷ್ಟಿ ಮಾಡಿದಳು. ದೇವಿಯ ಅನುಗ್ರಹದಿಂದ ಈ ಭೂಮಿ ನಂದನವಾಗಿ ಕಂಗೊಳಿಸಲು ಭೂಮಿಯಲ್ಲಿ ಸುಭಿಕ್ಷೆ ನೆಲೆಸಿತು. ಹೀಗೆ ಅನೇಕ ವರ್ಷಗಳು ಕಳೆದ ನಂತರ ದುರ್ಗಮಾಸುರ ಎಂಬ ರಾಕ್ಷಸನು ಮತ್ತು ಅವನ ಸಹಚರರು ಜನಗಳನ್ನು ಮತ್ತು ದೇವತೆಗಳನ್ನು ಹಿಂಸಿಸುತ್ತಿದ್ದರು. ಆಗ ದೇವತೆಗಳು ಮತ್ತು ಪ್ರಜೆಗಳು ಸೇರಿ ದೇವಿಯನ್ನು ಕುರಿತು ತಪಸ್ಸು ಮಾಡಿದರು. ತಪಸ್ಸಿಗೆ ಮೆಚ್ಚಿದ ದೇವಿಯು ರಾಕ್ಷಸನೊಡನೆ ಘೋರಯುದ್ಧ ಮಾಡಿ ಸಂಹಾರ ಮಾಡಿದಳು. ಸಮಸ್ತ ಭಕ್ತ ಕುಲಕೋಟಿಗೆ ಅಭಯ ಹಸ್ತವನ್ನು ನೀಡುತ್ತಾ ಅಂದಿನಿಂದ ಇಂದಿನವರೆಗೂ ಈ ಬದಾಮಿ ಕ್ಷೇತ್ರದಲ್ಲಿ ನೆಲೆಯಾಗಿ ನಿಂತಿರುವಳು.

ಸುಂದರದೇವಾಲಯ: ಈಗಿರುವ ಬನಶಂಕರಿದೇವಿ ದೇವಾಲಯದ ಕಟ್ಟಡ ಯಾವ ಕಾಲದಲ್ಲಿ ಆಗಿದೆ ಎಂದು ನಿರ್ದಿಷ್ಟವಾದ ದಾಖಲೆಗಳಿಲ್ಲ. 1500 ವರ್ಷಗಳ ಹಿಂದಿನದು ಎಂದು ನಾವು ಭಾವಿಸಬಹುದು. ಹಳೆಯಬನಶಂಕರಿ ದೇವಾಲಯದ ಗರ್ಭ ಗೃಹವು ಮಣ್ಣಿನಲ್ಲಿ ಹೂತು ಹೋಗಿದೆ. ಈ ಪೀಠದಲ್ಲಿಯೇ 'ಪರಶುರಾಮ ಅನಗಳ' ಎಂಬುವವರ ಹೆಸರು ಸಹ ಇದೆ.

ಬನಶಂಕರಿದೇವಿಯ ವಿಗ್ರಹವು ಐದು ಅಡಿ ಉದ್ದ ಇದ್ದು, ಕಪ್ಪು ಶಿಲೆಯಲ್ಲಿ ಸಿಂಹ ರೂಪಿಣಿಯಾಗಿ ದೇವಿ ನೆಲೆಸಿರುವಳು. ದೇವಿ ಎಂಟು ಕೈಗಳಿಂದ ಹೊಂದಿರುತ್ತಾಳೆ. ಬಲಗೈಯಲ್ಲಿ ಖಡ್ಗ, ಗಂಟೆ, ತ್ರಿಶೂಲ ಮತ್ತು ಲಿಪಿ ಹಾಗೂ ಎಡಗೈಯಲ್ಲಿ ಡಮರು, ಢಾಲು, ರುಂಡ ಮತ್ತು ಅಮೃತ ಪಾತ್ರೆಗಳಿವೆ ಹಾಗೂ ದೇವಿಯು ತ್ರಿನೇತ್ರವುಳ್ಳವಳು. ಇವಳನ್ನು ಮಹಾಕಾಳಿ, ಮಹಾಲಕ್ಷ್ಮೀ ಮತ್ತು ಮಹಾ ಸರಸ್ವತಿ ಎಂತಲೂ ಕರೆಯುವರು. ಬಲಗೈ ಸುಜ್ಞಾನದ ಸಂಕೇತ ಮತ್ತು ಎಡಗೈ ಶೌರ್ಯದ ಸಂಕೇತವಾಗಿದೆ. ದೇವಸ್ಥಾನದ ಶಿಖರವು ಚೌಕ ಕೋನಾಕಾರವಾಗಿ ಹಂತ ಹಂತವಾಗಿ ಮೇಲೆರುತ್ತಾ ಹೋಗಿದೆ.


ಈ ಗೋಪುರದಲ್ಲಿ ನಾವು ಯಾವ ದೇವರ ವಿಗ್ರಹವನ್ನೂ ಕಾಣುವದಿಲ್ಲ. ದೇವಾಲಯಕ್ಕೆ ನಾಲ್ಕು ದಿಕ್ಕಿನಲ್ಲಿ ದ್ವಾರಗಳಿವೆ. ದೇವಾಲಯದ ಗುಡಿಯ ಆವರಣದಲ್ಲಿ ನಾಲ್ಕು ದೀಪಸ್ಥಂಭಗಳಿವೆ. ಕಾರ್ತಿಕಮಾಸದಲ್ಲಿ ಈ ದೀಪಸ್ತಂಭಗಳಲ್ಲಿ ಭಕ್ತರು ದೀಪವನ್ನು ಬೆಳಗಿಸುತ್ತಾರೆ. ಬನದ ಹುಣ್ಣಿಮೆಯಂದು ಜರುಗಲಿರುವ ಬನಶಂಕರಿದೇವಿಯ ಜಾತ್ರೆ ತಿಂಗಳ ಕಾಲ ನಡೆಯುವ ದೊಡ್ಡ ಉತ್ಸವ. ತಂದೆ–ತಾಯಿ ಬಿಟ್ಟರೆ ಜಾತ್ರೆಯಲ್ಲಿ ಎಲ್ಲವೂ ಸಿಗುತ್ತದೆ ಎಂಬುದು ಜನರಾಡುವ ಮಾತು. ಜಾತಿ, ಮತ, ಪಂತವೆನ್ನದೇ ಸಕಲ ಭಕ್ತರು ಜಾತ್ರೆಗೆ ಆಗಮಿಸಿ ದೇವಿ ದರ್ಶನ ಮಾಡಿ ಸಂಭ್ರಮಿಸುತ್ತಾರೆ.

ಹತ್ತಾರು ರಂಗಭೂಮಿ ನಾಟಕ ಕಂಪನಿಗಳು ಹಾಸ್ಯಭರಿತ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತವೆ. ನಾಟಕ ಕಂಪನಿಗಳು ಪ್ರೇಕ್ಷಕರನ್ನು ಸೆಳೆಯಲು ಚಲನಚಿತ್ರ, ಧಾರಾವಾಹಿ ಹಾಗೂ ಕಾಮಿಡಿ ಕಿಲಾಡಿಗಳ ನಟ–ನಟಿಯರನ್ನು ಕರೆಸುತ್ತಾರೆ. ಇದರ ಜೊತೆಗೆ ಮೋಜಿನ ಆಟಗಳು, ಚಲನಚಿತ್ರಗಳ ಪ್ರದರ್ಶನವಿರುತ್ತದೆ. ಹಳ್ಳಿಯ ರೊಟ್ಟಿ ಊಟ ಇಲ್ಲಿನ ವಿಶೇಷತೆ. ಬೇರೆಡೆಯಿಂದ ಜಾತ್ರೆಗೆ ಬರುವ ಭಕ್ತರು ಹಳ್ಳಿಯ ಜವಾರಿ ಊಟದ ರುಚಿ ಸವಿದು ಸಂತಸಪಡುತ್ತಾರೆ. ಬನಶಂಕರಿ ಸುತ್ತಮುತ್ತಲಿನ ಹಳ್ಳಿಗಳ ಮಹಿಳೆಯರು ಜೋಳ ಹಾಗೂ ಸಜ್ಜೆ ರೊಟ್ಟಿ, ಮೊಸರು, ಚಟ್ನಿ, ಕಾಳು ಪಲ್ಲೆ, ಉಪ್ಪಿನಕಾಯಿ, ಮೆಂತೆ ಸೊಪ್ಪು, ಹಾಕರಕಿ ಸೊಪ್ಪು ಹೀಗೆ



ಶ್ರೀಮತಿ ಶೈಲಜಾ ಮಹಾಬಳೇಶ್ವರ
ಗುಡಗುಂಟಿ, ಬಾಗಲಕೋಟೆ
ಮೊ.ನಂ.9449712488

# ವೈಕುಂಠ ಏಕಾದಶಿ – ಕುರಿಗಾಹಿ ಯಿಂದ ತಿರುಗಲ್ ತಿಮ್ಮಪ್ಪನಿಗೆ ವಿಶೇಷ ಪೂಜೆ





ಮಲ್ಲಮ್ಮ ನುಡಿ ವಾರ್ತೆ


ಕೊಪ್ಪಳ: ಇಂದು ವೈಕುಂಠ ಏಕಾದಶಿ ಪ್ರಯುಕ್ತ ಜಗತ್ತಿನಾದ್ಯಂತ ವಿಷ್ಣು ದೇವಾಲಯದಲ್ಲಿ ಶ್ರೀಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವರಿಗೆ ಭಕ್ತಿಯಿಂದ ನಡೆದುಕೊಂಡು ಕೃತಾರ್ಥರಾಗುವ ಜನರನ್ನು ಎಲ್ಲೆಡೆ ಕಾಣುತ್ತೇವೆ. ಆದರೆ, ಶಹಪುರ ಗ್ರಾಮದ ಕುರಿಗಾಹಿ ವೀರಣ್ಣ ಕೋಮಲಾಪುರ ಅವರು ಕೆರೆಹಳ್ಳಿ ಗ್ರಾಮದ ಬಳಿಯಿರುವ ತಿರುಗಲ್ ತಿಮ್ಮಪ್ಪ ಬೆಟ್ಟಕ್ಕೆ ತೆರಳಿ ಪಾಳುಬಿದ್ದ ಶ್ರೀ ತಿರುಗಲ್ ತಿಮ್ಮಪ್ಪ ಹಾಗೂ ಲಕ್ಷ್ಮಿದೇವಿಯರ ಭಗ್ನಗೊಂಡ ದೇಗುಲದಲ್ಲಿ ಪೂಜೆ ಸಲ್ಲಿಸುವ ಮೂಲಕ ತನ್ನ ಮುಗ್ಧ ಭಕ್ತಿಯನ್ನು ಸಮರ್ಪಿಸಿದ್ದಾನೆ.

ಕ್ರಿ.ಶ.12 ನೇ ಶತಮಾನದ ಕಂಪಿಲರಾಯ, ಗಂಡುಗಲಿ ಕುಮಾರರಾಮನ ಅವಧಿಯಲ್ಲಿ ನಿರ್ಮಿಸಿರಬಹುದಾದ ಈ ದೇವಾಲಯ ಸಮುಚ್ಚಯ ನಿಧಿಚೋರರ ಹಾವಳಿಗೆ ಸಿಲುಕಿ ಹಾಳಾಗಿದೆ. ತನ್ನ ತಂದೆ–ಯ ಜೊತೆಗೆ ಬಾಲ್ಯದಿಂದಲೂ ಕುರಿ ಮೇಯಿಸಿಕೊಂಡು ಇಲ್ಲಿ ವಿಶೇಷ ದಿನಗಳಲ್ಲಿ ಗ್ರಾಮಸ್ಥರು ಪೂಜೆ ಸಲ್ಲಿಸುವುದನ್ನು ವೀರಣ್ಣ ಗಮನಿಸಿದ್ದ. ತನ್ನ ತಂದೆ–ತಾಯಿಗಳ ನಿಧನಾನಂತರವೂ ಇಲ್ಲಿ ಕುರಿಗಳನ್ನು ಮೇಯಿಸಲು ಬರುತ್ತಿದ್ದ ವೀರಣ್ಣನಿಗೆ ತಿರುಗಲ್ ತಿಮ್ಮಪ್ಪ, ಲಕ್ಷ್ಮಿದೇವಿಯರೇ ತನ್ನ ತಂದೆ–ತಾಯಿಯೆಂದು ಭಾವಿಸಿದ್ದಾನೆ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಜರುಗುವ ಕೊನೆ ಶನಿವಾರದಂದು ಇಲ್ಲಿಗೆ ಆಗಮಿಸಿ ಭಕ್ತಿಯಿಂದ ಹಣ್ಣು, ಕಾಯಿ ನೀಡಿ ಪೂಜಿಸುವ ಪರಿಪಾಠ ಬೆಳೆಸಿಕೊಂಡಿರುವ ವೀರಣ್ಣ ಈ ಬಾರಿ ಏಕೋ ತನ್ನ ತಂದೆ–ತಾಯಿಯರ ಸ್ಮರಣೆ ಆಗುತ್ತಿರುವ ಹಿನ್ನೆಲೆಯಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಶ್ರೀ ತಿರುಗಲ್ ತಿಮ್ಮಪ್ಪನ ಬೆಟ್ಟ ಹತ್ತಿ ಶ್ರೀ ಲಕ್ಷ್ಮಿವೆಂಕಟೇಶ್ವರ ಸ್ವಾಮಿಯರ ಭಗ್ನಗೊಂಡ ದೇಗುಲದಲ್ಲಿ ಪೂಜೆ ಸಲ್ಲಿಸಿ ಭಕ್ತಿಯನ್ನು ಸಮರ್ಪಿಸಿದ್ದಾನೆ.

ಪಾಳು ಬಿದ್ದ ಈ ದೇಗುಲದಲ್ಲಿ ದೇವರಿದ್ದಾನಾ ವೀರಣ್ಣ? ನಿಮ್ಮೂರಿನಲ್ಲೇ ಪಾಂಡುರಂಗನ ಗುಡಿ ಇದೆ. ಅಲ್ಲಿಯೇ ಪೂಜೆ ಮಾಡಬಹುದಿತ್ತಲ್ಲಾ? ಅಂದರೆ, ದೇವರು ಎಲ್ಲಾ ಕಡೆ ಇದ್ದಾನೆ. ಕಲ್ಲು, ಮಣ್ಣು, ನೀರು, ಗಾಳಿ ಮತ್ತು ಬೆಳಕು ಆತನದ್ದೇ. ಆತನಿಲ್ಲದ ಸ್ಥಳವೇ ಇಲ್ಲ. ಅಣು ಅಣುವಿನಲ್ಲೂ ಭಗವಂತ ತುಂಬಿಕೊಂಡಿದ್ದಾನೆ. ಆತನಿಲ್ಲದ ಜಾಗವೇ ಇಲ್ಲ. ಮೊದಲಿನಿಂದಲೂ ನನ್ನ ತಂದೆ, ಅಣ್ಣನೊಂದಿಗೆ ಕುರಿ ಕಾಯಲು ಇಲ್ಲಿಗೆ ಬರುತ್ತಿದ್ದೆ. ನನ್ನ ಅಪ್ಪ–ಅಮ್ಮನ ಪ್ರೀತಿ, ವಾತ್ಸಲ್ಯ ಮತ್ತು ಮಮತೆ ಇಲ್ಲಿ ಅನುಭವಿಸಿದ್ದೇನೆ. ಹಸಿವಾದಾಗ ಕುರಿ ಹಾಲು, ಜೋಳದ ಸಂಗಟಿ ತಿಂದು ಬೆಳೆದಿದ್ದೇನೆ. ಕಾಡಿನಲ್ಲಿನ ಕಾರೆ, ಕವಳೆ ಹಣ್ಣು ಸೇರಿದಂತೆ ಬಗೆ ಬಗೆಯ ಹಣ್ಣು ತಿಂದು ಬೆಳೆದಿದ್ದೇನೆ. ನನಗೀಗ ಅಪ್ಪ–ಅಮ್ಮ ಇಲ್ಲ. ಇಲ್ಲಿಗೆ ಬಂದು ಹೋದರೆ ನನಗೆ ನನ್ನ ಹೆತ್ತವರ ವಾತ್ಸಲ್ಯ ಮತ್ತೆ ದೊ–ರೆತ ಅನುಭವವಾಗುತ್ತದೆ. ಈ ಪ್ರದೇಶ ಅಭಿವೃದ್ಧಿ ಆಗಬೇಕು. ಇಲ್ಲಿ ಪ್ರವಾಸೋದ್ಯಮ ಬೆಳೆಯಬೇಕು. ರಸ್ತೆ ಆಗಬೇಕು. ಅರಣ್ಯ ಪ್ರದೇಶ ಉಳಿದರೆ ತಾನೇ ಮುಂದಿನ ಪೀಳಿಗೆ ಬದುಕಿ ಉಳಿಯಲು ಸಾಧ್ಯ ? ಎಂದು ವೀರಣ್ಣ ತನ್ನ ಮುಗ್ಧತೆಯಿಂದ ನುಡಿಯುತ್ತಾನೆ.

ಇಂದು ವೈಕುಂಠ ಏಕಾದಶಿ ಆದ್ದರಿಂದ ಹಣ್ಣು, ಹೂವು, ದೀಪ, ಧೂಪ ಸಲ್ಲಿಸಿದ ವೀರಣ್ಣ ಪಾಳು ಬಿದ್ದ ಶ್ರೀ ತಿರುಗಲ್ ತಿಮ್ಮಪ್ಪ, ಶ್ರೀ ಲಕ್ಷ್ಮೀ ದೇವಿಯರ ಭಗ್ನಗೊಂಡ ದೇಗುಲಗಳಿಗೆ ಕುಂಕುಮ ಹಚ್ಚಿ, ಹೂವಿನಿಂದ ಅಲಂಕರಿಸಿ ಹಣ್ಣುಗಳನ್ನು ಸಮರ್ಪಿಸಿದ ಈತನ ಮುಗ್ಧ ಭಕ್ತಿಗೆ ಏನೆನ್ನಬೇಕು....?

# ಲಿಂಗಸುಗೂರ ಪತ್ರಿಕಾ ಭವನದಲ್ಲಿ ಪತ್ರಕರ್ತ ಬಿ.ಎ ನಂದಿಕೋಲಮಠ ಶ್ರದ್ಧಾಂಜಲಿ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು: ಕಾರ ಅಪಘಾತದಲ್ಲಿ ಸಾವನ್ನಪ್ಪಿದ ಲಿಂಗಸುಗೂರ ಪಟ್ಟಣದ ಪ್ರಜಾವಾಣಿ ವರದಿಗಾರ ಬಿ.ಎ. ನಂದಿಕೋಲಮಠ ಅವರಿಗೆ ತಾಲೂಕು ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಗುರುರಾಜ ಗೌಡೂರ ಅಧ್ಯಕ್ಷತೆಯಲ್ಲಿ ಪತ್ರಕರ್ತರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಆಯೋಜಿಸಿದ ಶ್ರದ್ಧಾಂಜಲಿ ಸಭೆಯಲ್ಲಿ ದಿವಂಗತ ಬಿ.ಎ ನಂದಿಕೋಲಮಠ ಅವರ ಭಾವಚಿತ್ರಕ್ಕೆ ಪತ್ರಕರ್ತರು ಪುಷ್ಪ ನಮನ ಸಲ್ಲಿಸಿ ಮೌನ ಆಚರಿಸಿದರು. ಹಿರಿಯ ಹಾಗೂ ಕಿರಿಯ ಪತ್ರಕರ್ತ ಅವರ ಒಡನಾಟದ ಬಗ್ಗೆ ಮಾತನಾಡಿ ನೇರ ನುಡಿ ದಕ್ಷತೆ, ಪ್ರಮಾಣಿಕ ವರದಿಗಾರರಾಗಿದು ಅವರ ಸಾವು ತುಂಬಲಾರದ ನಷ್ಟವಾಗಿದೆ, ಸಾವುನಪ್ಪಿದ ಪತ್ರಕರ್ತರ ಕುಟುಂಬಕ್ಕೆ ಸರಕಾರದಿಂದ ಪರಿಹಾರ ಒದಗಿಸಲು ಒತ್ತಾಯಿಸಿ ನಿಧನ ಹೊಂದಿದ ಪತ್ರಕರ್ತರ ಭಾವಚಿತ್ರ ಅಳವಡಿಸಲು ತಿಳಿಸಲಾಯಿತು.

ನಂತರ ಮೃತ ವರದಿಗಾರನ ಮನಗೆ ಭೇಟಿನೀಡಿ ಕಟುಂಬಸ್ಥರಿಗೆ ಸಾಂತ್ವಾನ ಹೇಳಲಾಯಿತು.

ಈ ಸಂದರ್ಬದಲ್ಲಿ ಹಿರಿಯ ಪತ್ರಕರ್ತರಾದ ಗುರುರಾಜ ಮುತಾಲಿಕ, ನಾಗರಾಜ ಮಸ್ಕಿ, ಘನಮಠದಯ್ಯ, ಖಾಸಿಮ ಅಲಿ ಹಟ್ಟಿ, ಅಮರೇಶ ಬಲ್ಲಟಗಿ, ಎನ ಬಸವರಾಜ, ಅಮರೇಶ ಕಲ್ಲೂರು, ಶರಣಯ್ಯ ಒಡೆಯರ, ಖಾಜಾ ಹುಸೇನ, ಶಿವರಾಜ ಕೆಂಭಾವಿ, ಅಮರಯ್ಯ ಘಂಟಿ, ನಾಗರಾಜ ಗೋರೆಬಾಳ, ಗೌತಮ ಕುಮಾರ

ಹನುಮಂತಕನ್ನಾಳ, ರಾಘವೇಂದ್ರ ಪಂಪಾಪತಿ ಭಜಂತ್ರಿ,, ಕಿಶೋರ್ ಮುತಾಲಿಕ, ಮಹ್ಮದಮುಸ್ತಫ, ರವಿ ಹೊಸಮನಿ, ಸಾದತಅಲಿ, ಶ್ರೀಕಾಂತ,, ಹನುಮಂತ ನಾಯಕ, ಯಲ್ಲಪ್ಪ, ಉಮರ ಬಾಬಿ ಶೇಖ. ರಮೇಶ ಇದ್ದರು.

# ನಾಳೆ ಹೇಮ–ವೇಮ ಸಂಸ್ಥೆಯ ವಾರ್ಷಿಕೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.10–ನಗರದ ಹೇಮ–ವೇಮ ಸಂಸ್ಥೆ ಜ.12 ರಂದು ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ, ಶಾಲಾ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಂಡಿದೆ.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೇರಿ, ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ನವನಗರದ ಕಲಾಭವನದಲ್ಲಿ ರವಿವಾರ ಬೆಳಿಗೆ 10 ಗಂಟೆಗೆ ಸಮಾರಂಭ ಜರುಗಲಿದೆ ಎಂದು ಹೇಳಿದರು.

ಹರಿಹರತಾಲೂಕಿನ ಎರೆಹೊಸಳ್ಳಿಯ ರಡ್ಡಿಗುರುಪೀಠದ ವೇಮನಾನಂದ ಸ್ವಾಮೀಜಿ ದಿವ್ಯಸಾನಿಧ್ಯವಹಿಸಲಿದ್ದು, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಹೇಮ ವೇಮ ಸಂಸ್ಥೆ ಅಧ್ಯಕ್ಷ ಆರ್.ಎಲ್.ಕಟಗೇರಿ, ಉಪಾಧ್ಯಕ್ಷ ವಿ.ಆರ್.ಸೋರಗಾಂವಿ ಪಾಲ್ಗೊಳ್ಳುವರು. ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಜಿ.ಆರ್. ಹಲಗಲಿ ಅಧ್ಯಕ್ಷತೆ ವಹಿಸುವರು ಎಂದು ಕೇರಿ ತಿಳಿಸಿದರು.

ಹೇಮ–ವೇಮ ಸಂಸ್ಥೆ 1988ರಲ್ಲಿ ಆರಂಭಗೊಂಡು 36 ವರ್ಷಗಳಲ್ಲಿ ಮಹತ್ತರ ಸಾಧನೆ ಮಾಡಿದೆ. ವಿವಿಧೆಡೆ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಅನೇಕ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧಕರಾಗಿದ್ದಾರೆ ಎಂದು ತಿಳಿಸಿದರು.

ಗುಣಮಟ್ಟದ ಶಿಕ್ಷಣದ ಜತೆಗೆ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ಕೆಲಸ ಮಾಡಲಾಗುತ್ತಿದೆ. ಶಿಕ್ಷಣದ ಜೊತೆ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ, ವಿಜ್ಞಾನ ವಿಭಾಗ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ವಿದ್ಯಾರ್ಥಿಗಳನ್ನು ಪಾಲ್ಗೊಳಿಸುವ ಕೆಲಸ ಮಾಡಲಾಗುತ್ತಿದೆ ಎಂದು ವೆಂಕಟೇಶ ಕೇರಿ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಗೌರವಾಧ್ಯಕ್ಷ ಆರ್.ಎಲ್.ಕಟಗೇರಿ, ಕಾರ್ಯಾಧ್ಯಕ್ಷ ಡಾ.ಜಿ.ಆರ್.ಹಲಗಲಿ, ಶಿಕ್ಷಣ ಸಮಿತಿ ಕಾರ್ಯಾಧ್ಯಕ್ಷ ರವಿ ಪಾಟೀಲ, ಕಾರ್ಯದರ್ಶಿ ಶಂಕರ ಯಡಹಳ್ಳಿ, ಎಸ್‌ಡಿಎಂಸಿ ಅಧ್ಯಕ್ಷ ಶ್ರೀಕಾಂತ ಪಾಟೀಲ ಇದ್ದರು.

# ಸ್ವಾಮಿ ವಿವೇಕಾನಂದ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.10–ಸ್ವಾಮಿ ವಿವೇಕಾನಂದ ಯುವ ವಿಚಾರ ವೇದಿಕೆ, ರಾಮಕೃಷ್ಣ ಶಾರದಾಂಬಾ ವಿವೇಕಾನಂದ ಆಧ್ಯಾತ್ಮಿಕ ಕೇಂದ್ರ, ವಿವೇಕ ವಿಚಾರ ವಿಸ್ತಾರ ವ್ಯಕ್ತಿತ್ವ ವಿಕಸನ ಹಾಗೂ ಪರಿಸರ ಜಾಗೃತಿ ಅಭಿಯಾನ ವತಿಯಿಂದ ಈ ಬಾರಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಂಸ್ಥಾಪಕ ಆನಂದ ಶಿರಬೂರ ಹೇಳಿದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿ.12 ರಿಂದ 23 ರವರೆಗೆ ಜಯಂತ್ಯುತ್ಸವ ನಡೆಯಲಿದ್ದು, ದಿ.12 ರಂದು ದಿವ್ಯತ್ರೈಯರ ಪೂಜೆ ಹಾಗೂ ಮಹಾಸರಸ್ವತಿ ಹೋಮದೊಂದಿಗೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ ಎಂದರು.

ಜಿಲ್ಲೆಯ 21 ಆಯ್ದ ಕಾಲೇಜುಗಳಲ್ಲಿ ವ್ಯಕ್ತಿತ್ವ ವಿಕಸನ ಹಾಗೂ ಪರಿಸರ ಜಾಗೃತಿ ಅಭಿಯಾನ ನಡೆಯಲಿದ್ದು, ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ತಿಳಿಸುವುದರ ಮೂಲಕ ಅವರ ಭವಿಷ್ಯವನ್ನು ಉಜ್ವಲವಾಗಿ ನಿರ್ಮಿಸಿಕೊಳ್ಳುವ ನಿಟ್ಟಿನಲ್ಲಿ ಪ್ರೇರಣಾದಾಯಿ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ ಎಂದು ಆನಂದ ಹೇಳಿದರು.

ರಾಮಕೃಷ್ಣ ಆಶ್ರಮದ ಪೂಜ್ಯ ಸ್ವಾಮೀಜಿಗಳು, ಅನೇಕ ಜನ ಭಾಷಣಕಾರರು ಆಧ್ಯಾತ್ಮೀಕ ಕೇಂದ್ರದ ಹಿರಿಯರು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವರು. 21 ಕಾಲೇಜುಗಳ 10ಸಾವಿರ ವಿದ್ಯಾರ್ಥಿಗಳನ್ನು ತಲುಪಿ ಎಲ್ಲಾ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಉಚಿತವಾಗಿ ಹಂಚುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಅಭಿಯಾನ ಜಮಖಂಡಿ ತಾಲೂಕಿನ ಮರೇಗುದ್ದಿಯಿಂದ ಆರಂಭವಾಗಿ 23 ರವರೆಗೆ ನಡೆಯಲಿದ್ದು ಕೊನೆಯ ದಿನದಂದು ಸಮಾರೋಪ ಸಮಾರಂಭ ಜರುಗಲಿದೆ. ಸಮಾರಂಭದಲ್ಲಿ ಲಿಂಗೈಕ್ಯರಾಗಿರುವ ಪೂಜ್ಯ ಗುರುಗಳ ಸ್ಮರಣಾರ್ಥವಾಗಿ ನೀಡಲಾಗುವ ರಾಜ್ಯ ಮಟ್ಟದ ವಿವೇಕ ಚೇತನ ಪ್ರಶಸ್ತಿಗೆ ಮಂಡ್ಯ ಜಿಲ್ಲೆಯ ಶ್ರೀಮತಿ ಲೀಲಾರಾಣಿ ಬಿ.ಎಸ್. ತುಮಕೂರಿನ ಶಿವರಾಜ ಮೂಲೆಮನಿ, ಬಾಗಲಕೋಟೆಯ ಮಹಾಂತೇಶ ನರಸನಗೌಡ್ರ, ಸುರೇಶ ಯಡಹಳ್ಳಿ ಹಾಗೂ ರಾಯಚೂರಿನ ಮಂಜುನಾಥ ಡಿ.ಎಲ್. ಅವರನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕಳೆದ 20 ವರ್ಷಗಳಿಂದ ಸೇವೆ ಸಲ್ಲಿಸುತ್ತ ಶಾಲಾ ಮಕ್ಕಳ ಉನ್ನತಿಗಾಗಿ ಶ್ರಮಿಸುತ್ತಿರುವುದಕ್ಕೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸ್ವಾಮಿ ಗಿರಿಜೇಶಾನಂದ ಮಹಾರಾಜರು, ಸಿದ್ದು ಹೂಗಾರ, ಪ್ರವೀಣ ಗಂಗಣ್ಣವರ, ಶ್ರೀಶೈಲ ಹುನ್ನೂರ, ಗಂಗಾಧರ ಬಿಂಗಿ ಇದ್ದರು.

# ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ–ಶಾಸಕ ಮೇಟಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.10–ಗ್ರಾಮಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಎಚ್.ವಾಯ್.ಮೇಟಿ ಹೇಳಿದ್ದಾರೆ.

ತಾಲೂಕಿನ ಭಗವತಿ ಗ್ರಾಮದಲ್ಲಿ ಈಚೆಗೆ 20 ಲಕ್ಷ ರೂ.ಗಳ ಯೋಜನೆ ಎರಡು ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ರಸ್ತೆ, ಚರಂಡಿ ನಿರ್ಮಾಣ, ಸಿಸಿ ರಸ್ತೆಗಳು, ಶಾಲಾ ಕೊಠಡಿ ಸೇರಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಕೈಗೊತ್ತಿಕೊಳ್ಳಲಾಗುತ್ತಿದೆ ಎಂದರು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಭಗವತಿ ಗ್ರಾಮದಲ್ಲಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಗ್ರಾಮದ ಸರಕಾರಿ ದವಾಖಾನೆಯಿಂದ ಬಸವಂತಪ್ಪ ಕಲ್ಲೋಲ ಮನೆಯವರೆಗೆ 10 ಲಕ್ಷ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಭಗವತಿ–ಭೈರಮಟ್ಟಿ ಮುಖ್ಯ ರಸ್ತೆಯಿಂದ ಭಗವತಿ ಸರಕಾರಿ ಕಾಲೇಜು ರಸ್ತೆ(10 ಲಕ್ಷ)ಯ ನಿರ್ಮಾಣ ಕಾರ್ಯಕ್ಕೆ ಈಗ ಚಾಲನೆ ನೀಡಲಾಗಿದೆ ಎಂದು ಮೇಟಿ ಹೇಳಿದರು.

ಗುಣಮಟ್ಟದ ಕಾಮಗಾರಿ ನಿರ್ವಹಿಸಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಶಾಸಕರು ಗುತ್ತಿಗೆದಾರರಿಗೆ ಸೂಚಿಸಿದರು. ಜಿಪಂ ಇಂಜನೀಯರಿಂಗ್ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್.ಎಂ.ರೇವಡಿ, ಸಹಾಯಕ ಇಂಜನೀಯರ್ ರಕ್ಷಾ ಕಳ್ಳಿಗುಡ್ಡ, ಭಗವತಿ ಪಿಡಿಓ ಶಶಿಕಲಾ ಕೊಡತಿ, ಗ್ರಾಪಂ ಅಧ್ಯಕ್ಷ ಶಿವಪುತ್ರಪ್ಪ ದೊಡಮನಿ, ಗುತ್ತಿಗೆದಾರ ಕುಮಾರ ಬಿಂಜವಾಡಗಿ, ಶರಣಪ್ಪ ಗುಳೇದ, ಚನ್ನಪ್ಪ ಕಲ್ಲೋಲ, ರಾಮಣ್ಣ ಕಿರಸೂರ, ಶಿವಾನಂದ ಮಲ್ಲಾಪೂರ, ಹನಮಂತ ಮಳಗಾವಿ, ಗ್ರಾಪಂ ಸದಸ್ಯರು ಇದ್ದರು.

# ಸದ್ಗುರು ಶ್ರೀ ಚನ್ನಬಸವ ಶಿವಯೋಗಿಗಳ 73ನೇ ಜಾತ್ರಾ ಮಹೋತ್ಸವದ ನಿಮಿತ್ಯ ಹಂದರಂಬಲಿ ಕಾರ್ಯಕ್ರಮ – 40 ಸಾವಿರಕ್ಕೂ ಅಧಿಕ ಭಕ್ತರು ಪ್ರಸಾದ ಸೇವನೆ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ತಾಲೂಕಿನ ಹಾರಕೂಡ ಸುಕ್ಷೇತ್ರದಲ್ಲಿ ಲಿಂ. ಚನ್ನಬಸವ ಶಿವಯೋಗಿಗಳವರ 73ನೇ ಜಾತ್ರಾ ಮಹೋತ್ಸವದ ಸಮಾರೋಪ ಕಾರ್ಯಕ್ರಮದೋಪಾದಿಯಲ್ಲಿ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ರಥ–ಕ್ಕೆ ಪೂಜೆ ಸಲ್ಲಿಸಿ ತಡಸಿ ಇಳಿಸುವುದರೊಂದಿಗೆ ಹಂದರಂಬಲಿ ಕಾರ್ಯಕ್ರಮಕ್ಕೆ ಶುಭ ಚಾಲನೆ ನೀಡಿದರು.

ಜಾತ್ರೆಯಲ್ಲಿ ಕಾಯಾ ವಾಚಾ ಮನಸಾ ಸೇವೆ ಸಲ್ಲಿಸಿದ ಹಾರಕೂಡ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರಿಗೆ ಪ್ರೀತಿಯಿಂದ ಪ್ರಸಾದ ಉಣಬಡಿಸಿ ಆಶೀರ್ವದಿಸುವ ವಾಡಿಕೆ ಮೊದಲಿನಿಂದಲೂ ಇದೆ.

ಮೊದಮೊದಲು ನೂರ–ರಿಂದ 150 ಜನರಿಗಾಗಿ ಮಾಡುವ ಪ್ರಸಾದ ಈಗ 40 ರಿಂದ 50 ಸಾವಿರ ಜನರು ಈ ಪ್ರಸಾದವನ್ನು ಸವಿದು ಧನ್ಯರಾಗುತ್ತಾರೆ.

ಶ್ರೀಮಠದಿಂದಲೇ ಮಾಡುವ ಈ ಮಹಾಪ್ರಸಾದವನ್ನು ಸ್ವೀಕರಿಸಲು ದೂರದ ಊರುಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಿಯಿಂದ ಬರುವ ಜನಸಾಗರ, ಯಾವುದೇ ಜಾತಿ, ಮತ, ಪಂಥ, ಧರ್ಮ, ವರ್ಗ, ವರ್ಣ, ಲಿಂಗ ಭೇದವಿಲ್ಲದೆ ಸಮಾನ ಪಂಕ್ತಿ ಭೋಜನ ಮಾಡುವುದು ವಿಶ್ವಗುರು ಬಸವಣ್ಣನವರ ಕಾಯಕ ದಾಸೋಹ ಹಾಗೂ ಸಮಾನತೆಗೆ ದೊಡ್ಡ ನಿದರ್ಶನವಾಗಿದೆ.

ಈಗಿನ ಪೀಠಾಧಿಪತಿಗಳಾದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರ ಶುದ್ಧ ಅಂತ:ಕರಣದ ಸಮನ್ವಯ ಧೋರಣೆಯಿಂದ ಶ್ರೀಮಠ ಶ್ರೇಷ್ಠ ದಾಸೋಹ ಕ್ಷೇತ್ರವಾಗಿ ತಡೆಯಿಲ್ಲದೆ ಮುನ್ನಡೆಯಲು ಸಾಧ್ಯವಾಗಿದೆ.

ಬಜ್ಜಿ, ಭರತ, ರೊಟ್ಟಿ, ಹುಗ್ಗಿ, ಅನ್ನ, ಸಾರು ಗಳಿಂದ ಕೂಡಿದ ಪ್ರಸಾದ ಕೇವಲ ಆಹಾರವಾಗಿರದೆ ಲಿಂಗೈಕ್ಯ ಚನ್ನಬಸವ ಶಿವಯೋಗಿಗಳ ದಿವ್ಯಾನುಗ್ರಹದ ಅಮೃತವೇ ಸರಿ ಎಂದು ಭಕ್ತಾದಿಗಳ ಅಂತರಾಳದ ಅಭಿಪ್ರಾಯವಾಗಿದೆ.

# ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ : ಸ್ಕೈ ಬಲೂನ್ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ : ಜನವರಿ 10–ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ಯಾದಗಿರಿ ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಾಯದೊಂದಿಗೆ ಕಲ್ಯಾಣ ಕರ್ನಾಟಕ ವಿಭಾಗದ ದ್ವಿತೀಯ ಜಾಂಬೋರೇಟ್ ಕಾರ್ಯಕ್ರಮದ ಪ್ರಯುಕ್ತ 2025ರ ಜನವರಿ 10ರ ಶುಕ್ರವಾರ ರಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಸುರೇಶ್.ಆರ್ ಸಜ್ಜನ್ ಅವರ ಅಧ್ಯಕ್ಷತೆಯಲಿ ಸ್ಕೈ ಬಲೂನ್ ಬಿಡುಗಡೆ ಸಮಾರಂಭವನ್ನು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು. ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೊಳ ಅವರು ಉದ್ಘಾಟಿಸಿ ಕಾರ್ಯಕ್ರಮವನ್ನು ನೆರವೇರಿಸಿದರು ಈ ಸಂದರ್ಭದಲ್ಲಿ ಯಾದಗಿರಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಾಧ್ಯಕ್ಷರು ಶ್ರೀ ರಾಜ ಮುಕುಂದ ನಾಯಕ ಸ್ಕೈ ಬೆಲೂನ್ ನೆನಪಿನ ಕಾಣಿಕೆಯಾಗಿ ನೀಡಿ ಈ ಒಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳು ಶ್ರೀ ರಾಘವೇಂದ್ರ ಹಳ್ಳಳ್ಳಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ ೦ಖಔಅ, ರೇ–೦ಜರಿಂಗ್ ವಿಭಾಗ, ಕಲ್ಯಾಣ ಕರ್ನಾಟಕ ಉಸ್ತುವಾರಿ, ಶ್ರೀ ಸಿದ್ದು ಪಾಟೀಲ್ ಜಾಂಬೋರೇಟ್ ಖಜಾಂಚಿಗಳು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್ ಮಾಸ್ಟರ್ ಇನ್ನಿತರರು ಉಪಸ್ಥಿತರಿದ್ದರು.

# ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಶಿಕ್ಷಣ ಅತ್ಯವಶ್ಯಕ : ಈಶ್ವರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.10: ನಮ್ಮ ನಿಜವಾದ ಸಂಪತ್ತು ಮಾನವ ಸಂಪನ್ಮೂಲವಾಗಿದೆ, ಇದರ ಅಭಿವೃದ್ಧಿಗಾಗಿ ಶಿಕ್ಷಣ ವ್ಯವಸ್ಥೆ ಸರಿಪಡಿಸುವುದು ಅತ್ಯವಶ್ಯಕವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನಭಾತಂಬ್ರಾಗ್ರಾಮದಲ್ಲಿ ಶುಕ್ರವಾರ 4.70 ಲಕ್ಷ ರೂ. ಅನುದಾನದಲ್ಲಿನಿರ್ಮಿಸಲಾದ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಉದ್ಘಾಟಿಸಿ ಅವರು ಮಾತನಾಡಿದರು. ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ನಾವು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕಿದೆ. ಶಿಕ್ಷಣದ ಹಕ್ಕು, ಕಾಯಿದೆ ಜಾರಿಯಿಂದ 10ನೇ ತರಗತಿಯ ವರೆಗೆ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕಿದೆ. ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ತಾಲೂಕಿನಲ್ಲಿ ಹಲವಾರು ಶಾಲಾ, ಕಾಲೇಜುಗಳ ಕಟ್ಟಡ ನಿರ್ಮಾಣಮಾಡಿ, ಅವುಗಳಿಗೆ ಮೂಲಭೂತಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕಅಭಿವೃದ್ಧಿನಿಗಮದಿಂದ ಈ ಭಾಗದಲ್ಲಿ ಶಿಕ್ಷಕರ ಕೊರತೆ ನೀಗಿಸುವ ನಟ್ಟಿನಲ್ಲಿ ಅಥಿತಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಶಿಕ್ಷಣ ಅಂದರೆ ಸತ್ಯದ ಅನ್ವೇಶಣೆ, ಎಲ್ಲಾ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಉನ್ನತ ಮಟ್ಟಕ್ಕೆ ಬರುವುದೇ ನಮ್ಮೆಲ್ಲರ ಆಸೆಯಾಗಿದೆ ಎಂದು ಹೇಳಿದರು.



ಜಿ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಡಾ। ಗಿರೀಶ ಬದೋಲೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈಸಂದರ್ಭದಲ್ಲಿಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ, ಬೀದರ ಸಹಾಯಕ ಆಯುಕ್ತ ಮಹಮದ ಶಕೀಲ, ಬಸವಕಲ್ಯಾಣ ಸಹಾಯಕ ಆಯುಕ್ತ ಮುಕುಲ ಜೈನ್, ಸುಂದರೇಶಬಾಬು, ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ, ಕ್ಷೇತ್ರಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ, ಗೋಪಾಲಹಿಪ್ಪರಗಿ, ಮನೋಹರ ಹೊಳಕರ, ಮಲ್ಲಿನಾಥ ಸಜ್ಜನ್, ಮಲ್ಲಿಕಾರ್ಜುನ ಕನ್ನಾಳೆ, ಸಹದೇವಗೌಡಗಾವೆ, ಬಿಆರ್‌ಪಿ ಚೇತನಾ ಚನಶೆಟ್ಟಿ, ಸಂತೋಷ ಮುದಾಳೆ, ಡಿ.ಡಿ.ಪಿ.ಐ ಎಸ್. ಎಲ್.ಪ್ರಸನ್ನಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಶಿವಶಂಕರ ಕಾಮಶೆಟ್ಟಿ, ಅಲ್ತಾಫ್, ಗ್ರಾ.ಪಂ. ಅಧ್ಯಕ್ಷ ಮಹಾಂತೇಶ ಬಸವರಾಜ ಪಾಟೀಲ, ಪ್ರಮುಖರಾದ ರವೀಂದ್ರ ಚಿಡಗುಪ್ಪೆ, ಹಣಮಂತರಾವ ಚವ್ಹಾಣ, ಕಾಶಿನಾಥ ಲದ್ದೆ, ಮಹಾದೇವ ಬೆಲೂರೆ ಉಪಸ್ಥಿತರಿದ್ದರು. ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಸ್ವಾಗತಿಸಿದರು.

> ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎನ್ನುವ ದೃಷ್ಟಿಯಿಂದ ತಾಲೂಕಿನ ಖಟಕ ಚಿಂಚೋಳಿಯಲ್ಲಿಯ ಪ್ರಾಥಮಿಕ ಶಾಲಾ ಕಟ್ಟಕ್ಕೆ 5 ಕೋಟಿ ರೂ. ಮತ್ತು ಬ್ಯಾಲಹಳ್ಳಿ(ಕೆ) ಗ್ರಾಮದ ಪ್ರಾಥಮಿಕ ಶಾಲಾ ಕಟ್ಟಡಕ್ಕೆ 5 ಕೋಟಿ ರೂ. ಮಂಜೂರು ಮಾಡಲಾಗಿದೆ. ಅಲ್ಲದೇ ತಾಲೂಕಿನ ಪ್ರತಿಯೊಂದು ಶಾಲೆಗಳಿಗೂ ಮೂಲ ಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
>
> – ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು

# ಜ.16 ರಿಂದ 18ರ ವರೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಜಿಲ್ಲೆಗೆ ಭೇಟಿ



ಮಲ್ಲಮ ನುಡಿ ವಾರ್ತೆ

ಬಳ್ಳಾರಿ,ಜ.10:ಇದೇ ಜ.16,17 ಮತ್ತು 18 ರಂದು ಬಳ್ಳಾರಿ ಜಿಲ್ಲೆಗೆ ಕರ್ನಾಟಕ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಭೇಟಿ ನೀಡಲಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಲ್ಲಿಕೆಯಾದ ಲೋಕಾಯುಕ್ತ ದೂರುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಸಿದ್ಧರಿರುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉಪಲೋಕಾಯುಕ್ತರ ಭೇಟಿ ಹಿನ್ನಲೆಯಲ್ಲಿ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ದಾಖಲಾದ ದೂರು ಪ್ರಕರಣಗಳ ಕುರಿತು ಜ.18 ರಂದು ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಉಪಲೋಕಾಯುಕ್ತರು ವಿಚಾರಣೆ ನಡೆಸಲಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ದಾಖಲೆ ಹಾಗೂ ಮಾಹಿತಿಯೊಂದಿಗೆ ಹಾಜರಾಗುವಂತೆ ಅವರು ತಿಳಿಸಿದರು.

ಜ.18 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ (ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ) ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ. ಹಾಗಾಗಿ ದೂರುದಾರರು ಮತ್ತು ಎದುರುದಾರರು ನಿಗದಿತ ಸಮಯದಲ್ಲಿ ಹಾಜರಿರಬೇಕಾಗುತ್ತದೆ. ಸಂಬಂದಪಟ್ಟ ಇಲಾಖೆ ಮುಖ್ಯಸ್ಥರು ದೂರುದಾರಿಗೆ ಈ ಕುರಿತು ಮಾಹಿತಿ ನೀಡಿ, ವಿಚಾರಣೆಗೆ ಹಾಜರಾಗುವಂತೆ ತಿಳಿಸಬೇಕು ಎಂದರು.

*ಜ.17ರಂದು ಸಾರ್ವಜನಿಕರಿಂದ ಅಹವಾಲು ಸ್ವೀಕಾರ:* ಜ.17 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಮತ್ತು ವಿಚಾರಣೆ ನಡೆಸುವರು. ಜಿಲ್ಲೆಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿ, ನೌಕರರಿಂದ ತಮಗೆ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬವೇನಾದರೂ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ಯಾವುದೇ ತರಹದ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಅದರಿಂದ ತೊಂದರೆಗೊಳಗಾದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದ್ದು, ಈ ವೇಳೆ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳದಲ್ಲಿ ಉಪಸ್ಥಿತರಿರಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

*ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರಬೇಕು:* ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಅವರ ಭೇಟಿ ಹಿನ್ನಲೆಯಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ತಪ್ಪದೇ ಕೇಂದ್ರಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸಬೇಕು. ಅಧಿಕಾರಿಗಳು ಉಪಲೋಕಾಯುಕ್ತರ ಭೇಟಿ ವೇಳೆ ಗೈರು ಹಾಜರಾಗಿರುವುದು ಕಂಡುಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಜ.16 ರಂದು ಉಪಲೋಕಾಯುಕ್ತರು ಜಿಲ್ಲೆಯ ಹಾಸ್ಟೆಲ್, ಕಚೇರಿಗಳು, ಅಂಗನವಾಡಿಕೇಂದ್ರ, ಆಸ್ಪತ್ರೆಗಳಿಗೆ ಅನಿರೀಕ್ಷಿತ ಭೇಟಿ ಪರಿಶೀಲನೆ ನಡೆಸುವರು. ಎಲ್ಲಾ ಅಧಿಕಾರಿಗಳು ತಮ್ಮ ಕಚೇರಿ ಸೇರಿದಂತೆ ಕಚೇರಿ ಆವರಣಗಳನ್ನು ಸ್ವಚ್ಛವಾಗಿಟ್ಟುಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿ.ಸಿದ್ದರಾಜು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ದತ್ತು ಸ್ವೀಕಾರ ಕೇಂದ್ರದಲ್ಲಿ ಮಗುವಿಗೆ ನಾಮಕರಣ



ಮಲ್ಲಮ ನುಡಿ ವಾರ್ತೆ

ರಾಯಚೂರು ಜ.10 : ಮಕ್ಕಳ ರಕ್ಷಣಾ ಘಟಕದ ಅಡಿಯಲ್ಲಿ ಬರುವ ಸರ್ಕಾರಿ ವಿಶೇಷ ದತ್ತು ಸ್ವೀಕಾರ ಕೇಂದ್ರಕ್ಕೆ ಒಪ್ಪಿಸಲ್ಪಟ್ಟ ಮಗುವಿಗೆ ನಾಮಕರಣ ಕಾರ್ಯಕ್ರಮವು ನಗರದ ಸರ್ಕಾರಿ ಪರಿವೀಕ್ಷಣಾಲಯ ಸಂಸ್ಥೆಯಲ್ಲಿ ಸಂಭ್ರಮದಿಂದ ನಡೆಯಿತು.

ಪರಿವೀಕ್ಷಣಾಲಯದ ಸಭಾಂಗಣವನ್ನು ತಳಿರು ತೋರಣಗಳಿಂದ ಸಿಂಗರಿಸಿ, ನಾಮಕರಣದ ತೊಟ್ಟಿಲನ್ನು ಹೂಗಳಿಂದ ಅಲಂಕರಿಸಲಾಗಿತ್ತು. ಮಕ್ಕಳು ಹಾಗೂ ಮಹಿಳಾ ಸಿಬ್ಬಂದಿಯು ಹೊಸ ಬಟ್ಟೆಗಳನ್ನು ಧರಿಸಿ ಹಬ್ಬದ ರೀತಿಯಲ್ಲಿ ಸಂಭ್ರಮದಿಂದ ಪಾಲ್ಗೊಂಡಿದ್ದರು.

ಸಂಪ್ರದಾಯದ ಪ್ರಕಾರ ವಿಧಿವಿಧಾನಗಳನ್ನು ನೆರವೇರಿಸಿ ನಾಮಕರಣಕ್ಕೆ ಸಂಬಂಧಿಸಿದ ಹಾಡುಗಳನ್ನು ಸಂಸ್ಥೆಯ ಮಹಿಳಾ ಸಿಬ್ಬಂದಿ ಹಾಡುವ ಮೂಲಕ ಮಗುವಿಗೆ ಶುಭ ಹಾರೈಸಿದರು. ಈ ವೇಳೆ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹರವಿ ಅವರು ಮಗುವಿಗೆ ನಾಮಕರಣ ಮಾಡಿದರು. ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಜಿಲ್ಲಾಧ್ಯಕ್ಷರಾದ ಮಂಗಳ ಹೆಗಡೆ, ಜಿಲ್ಲಾ ಸ್ತ್ರೀ–ಶಕ್ತಿ ಒಕ್ಕೂಟದ ಅಧ್ಯಕ್ಷೆ ಈರಮ್ಮ, ಬಾಲಕಿಯರ ಬಾಲ ಮಂದಿರದ ಅಧೀಕ್ಷಕರಾದ ಕುಮಾರಿ ಭಾರತಿ ನಾಯಕ್, ಬಾಲಕರ ಬಾಲ ಮಂದಿರದ ಅಧೀಕ್ಷಕ ನಾಗರಾಜ್, ಸರ್ಕಾರಿ ಪರಿವೀಕ್ಷಣಾಲಯದ ಅಧೀಕ್ಷಕ ಶೇಖ್ ಮಹೇಬೂಬ್, ಪರಿವೀಕ್ಷಣಾಧಿಕಾರಿ ವಿನಯಕುಮಾರ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಡಿಯಲ್ಲಿ ಬರುವ ವಿವಿಧ ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

# ಜ.20 ರಂದು ನಗರಸಭೆ ಕಟ್ಟಡ ಉದ್ಘಾಟನೆ: ಅಧ್ಯಕ್ಷೆ ಅನಪುರ



ಮಲ್ಲಮ ನುಡಿ ವಾರ್ತೆ

ಯಾದಗಿರಿ :ಜ.10: ಕೊನೆಗೂ ನೂತನ ನಗರಸಭೆ ಕಟ್ಟಡದ ಉದ್ಘಾಟನೆಗೆ ಮೂರ್ಹತ ನಿಗದಿಯಾಗಿದೆ. ಸುಸಜ್ಜಿತ ಮತ್ತು ಲಿಫ್ಟ್ ಸೌಲಭ್ಯ ಹೊಂದಿರುವ ಭವ್ಯ ಕಟ್ಟಡದ ಉದ್ಘಾಟನೆಗೆ ಜ. 20 ರಂದು ದಿನಾಂಕ ನಿಗದಿಗೊಳಿಸಲಾಗಿದೆ ಎಂಬ ಮಾಹಿತಿ ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ ತಿಳಿಸಿದ್ದಾರೆ.

ಇದರ ನಗರಸಭೆ ಸರ್ವ ಸದಸ್ಯರ ಸಭೆ ಹಾಗೂ ಅಧಿಕಾರಿಗಳ ಪೂರ್ವಭಾವಿಯಾಗಿ ಗುರುವಾರ ಸಂಜೆ ನೂತನ ಕಟ್ಟಡದ ವಿಕ್ಷಣೆ ಮಾಡಿರುವ ಅಧ್ಯಕ್ಷರು ಅಲ್ಲಿನ ಮುಗಿದಿರುವ ಮತ್ತು ಉಳಿದ ಕಾಮಗಾರಿ ಮುಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪೌರಾಡಳಿತ ಸಚಿವ ರಹಿಂಖಾನ್ ಕಟ್ಟಡ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ, ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರು ಸೇರಿದಂತೆಯೇ ಜಿಲ್ಲೆಯ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆಂದು ಅನಪುರ ತಿಳಿದ್ದಾರೆ.

ಕಾರ್ಯಕ್ರಮ ಅಚ್ಚುಕಟ್ಟಾಗಿ ಆಗಲು ನಗರಸಭೆ ಅಧಿಕಾರಿಗಳ ಸಭೆ ನಡೆಸಿರುವ ಅವರು, ಜಿಲ್ಲೆಯಲ್ಲಿ ಮಾದರಿ ಕಟ್ಟಡ ಇದಾಗಿದ್ದು, ಯಾವುದೇ ಲೋಪ ಆಗದಂತೆಯೆ ಯಶಸ್ಸಿಗೊಳಿಸಬೇಕೆಂದು ಅವರು ಸಂಬಂಧಪಟ್ಟವರಿಗೆ ಸೂಚಿಸಿದ್ದಾರೆ. ನಗರಸಭೆ ಉಪಾಧ್ಯಕ್ಷೆ ರೂಕಿಯಾ ಬೇಗಂ, ಪೌರಾಯುಕ್ತ ಉಮೇಶ ಚವ್ಹಾಣ, ಉಪಾದಕ್ಷರಾದ ರುಕಿಯಾ ಬೇಗಂ ಮತ್ತು ನಗರಸಭೆ ಸದಸ್ಯರು ಇದ್ದರು.


ಕರ್ನಾಟಕ ಸರ್ಕಾರ

**ಪುರಸಭೆ ಕಾರ್ಯಾಲಯ ಚಿಟಗುಪ್ಪ**

ಸಂ: ಪುಸಚಿ/ಕಾಮಗಾರಿ/ಸಿಆರ್– /2024–25 ದಿನಾಂಕ: 09.01.2025

**:: ಟೆಂಡರ್ ಪ್ರಕಟಣೆ ::**

1) ಕಾಮಗಾರಿ / ಸರಕು / ಸೇವೆಯ ವಿವರ: (DMA/2024-25/WS/WORK_INDENT34799) (DMA/2024-25/WS/WORK_INDENT34800), 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ: KPPPನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: KPPPನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: KPPPನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು: 23.01.2025 4:30PM, 6) ಟೆಂಡರ ತೆರೆಯುವ ದಿನಾಂಕ: 24.01.2025 5:00PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಮುಖ್ಯಾಧಿಕಾರಿಗಳು, ಪುರಸಭೆ ಚಿಟಗುಪ್ಪ 08483–277536, Email : itstaff_ulb_chittguppa@yahoo.com, 8) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಮುಖ್ಯಾಧಿಕಾರಿ
ಪುರಸಭೆ ಚಿಟಗುಪ್ಪಾ

ವಾ.ಸಾ.ಸಂ.ಇ/ಬೀದರ/354/ಕೆ.ಎಸ್.ಎಂ.ಸಿ.&ಎ/2024–25


# ಉದ್ಯೋಗ ಖಾತ್ರಿ ಯೋಜನೆ ಲಾಭ ಪಡೆಯಲು ಕರೆ



ಬಸವಕಲ್ಯಾಣ:ಜ.10:ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇದೊಂದು ಕಾಯ್ದೆಯಾಗಿದೆ. ಹೀಗಾಗಿ ಬಡವರು ಮತ್ತು ಕಾರ್ಮಿಕರು ಇದರ ಲಾಭ ಪಡೆದುಕೊಳ್ಳಬೇಕು ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ರಮೇಶ ಸುಲ್ಪಿ ಹೇಳಿದರು. ಗ್ರಾಮ ಸ್ವರಾಜ್ ಅಭಿಯಾನ ಕರ್ನಾಟಕ(ನಾಗರಿಕ ಸಮಾಜ ಸಂಸ್ಥೆ ಒಕ್ಕೂಟ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ತಾ.ಪಂ.ಸಭಾಂಗಣದಲ್ಲಿ ಹಮ್ಮಿಕೊಂಡ ಕಾಯಕ ಬಂಧುಗಳ(ಮೇಟ್ಸ್) ತರಬೇತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ನರೇಗಾ ಯೋಜನೆಯಲ್ಲಿ ಸಾಕಷ್ಟು ಹುದ್ದೆಗಳು ನೀಡಲಾಗಿದೆ. ಅದರಲ್ಲಿ ಗ್ರಾಮೀಣ ಹಂತದಲ್ಲಿ ಮೇಟ್ಸ್ ಪ್ರಮುಖ ಪಾತ್ರ ನಿರ್ವಹಿಸಿದೆ.. ಹೀಗಾಗಿ ಕಾರ್ಮಿಕರಿಗೆ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳಲು ಮೇಟ್ಸ್ ಗಳಿಗೆ ತರಬೇತಿ ನೀಡಲಾಗುತ್ತಿದೆ. ಆದ್ದರಿಂದ ತರಬೇತಿ ಪಡೆಯುತ್ತಿರುವ ಶಿಬಿರಾರ್ಥಿಗಳು ಇಲ್ಲಿ ನೀಡುವ ಪ್ರತಿಯೊಂದು ವಿಷಯಗಳು ಚನ್ನಾಗಿ ಅರ್ಥ ಮಾಡಿಕೊಂಡು ತರಬೇತಿ ಯಶಶ್ವಿಗೊಳಿಸಬೇಕು ಎಂದರು ತಿಳಿಸಿದರು. ನಂತರ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರಾದ ಸಂತೋಷ ಚವ್ಹಾಣ ರವರು ಮಾತನಾಡಿ, ನರೇಗಾ ಯೋಜನೆ ಇರುವುದು ಬಡವರಿಗಾಗಿ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಕೂಲಿ ಕಾರ್ಮಿಕರಿಗೆ ಯೋಜನೆ ಬಗ್ಗೆ ತಿಳಿಸಿ, ಅವರಿಗೆ ಕೆಲಸ ಕೊಡುವ ಜವಬ್ದಾರಿ ನಿಮ್ಮದಾಗಿದೆ. ಆದ್ದರಿಂದ ಸುಮ್ನೆ ತರಬೇತಿ ಪಡೆದಯಕೊಂಡುಹೋಗುವುದಲ್ಲ. ಇಲ್ಲಿ ಕಲಿಸುವ ವಿಷಯಗಳನ್ನು ಮನನ ಮಾಡಿಕೊಳ್ಳುವ ಮೂಲಕ ಜನರಿಗೆ ಮುಟ್ಟಿಸುವ ಕೆಲಸ ಆಗಬೇಕು ಎಂದರು. ತರಬೇತಿಯ ರಾಜ್ಯ ಸಂಪನ್ಮೂಲ ವ್ಯಕ್ತಿ ನಾಗರಾಜ ಶೀಲವಂತ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ತಾ.ಪಂ.ಸ.ನಿ.(ಪಂ.ರಾ) ಅರುಣಕುಮಾರ ಪಾಟೀಲ್, ತರಬೇತಿ ಸಂಪನ್ಮೂಲ ವ್ಯಕ್ತಿಗಳಾದ ವೀರಾರೆಡ್ಡಿ, ಚಾಮಲಾ, ಅಮರಪಲ್ಲಿ, ನಟ–ರಾಜ, ಐಚಿಘುಟು ಸೇರಿದಂತೆ ಮತ್ತಿತರರು ಇದ್ದರು.

## ಹಳೆಯ ವಿದ್ಯಾರ್ಥಿ ಸಂಘ ಉದ್ಘಾಟನೆ



ಮಲ್ಲಮ ನುಡಿ ವಾರ್ತೆ

ಬೀದರ.ಜ.10:ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ನಗರದ ಬಸವೇಶ್ವರ ಶಿಕ್ಷಣ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ 'ನೆನಪಿನಂಗಳ'ದ ಉದ್ಘಾಟನಾ ಸಮಾರಂಭ ಇತ್ತೀಚೆಗೆ ನಡೆಯಿತು.

2022–23ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕರಾಗಿ ನೇಮಕ ಹೊಂದಿದ 52 ಜನರನ್ನು ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ.ರಜನೀಶ್ ವಾಲಿ ಸನ್ಮಾನಿಸಿದರು. ಶಿಕ್ಷಣ ರಂಗದಲ್ಲಿ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರ ಹಾಗೂ ಶ್ರೇಷ್ಠವಾದುದು. ಸಮಾಜ ಬದಲಾವಣೆ ಹಾಗೂ ನಿರ್ಮಾಣದ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಹೇಳಿದರು.

ಭಾಲ್ಕಿಯ ಕ್ಷೇತ್ರಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ, ಪ್ರಾಂಶುಪಾಲ ಮಲ್ಲಿಕಾರ್ಜುನ ಚ. ಕನಕಟ್ಟೆ, ಶಂಭುಲಿಂಗ ವಾಲದೊಡ್ಡಿ, ನಿವೃತ್ತ ಶಿಕ್ಷಣಾಧಿಕಾರಿ ಇನಾಯತ ಸಿಂಧೆ, ಶರಣಪ್ಪ ಮೂಲಗೆ, ಬಿ.ವಿ. ಭೂಮರಡ್ಡಿ ಕಾಲೇಜಿನ ಪ್ರಾಂಶುಪಾಲ ಪಿ.ವಿಠ್ಠಲರೆಡ್ಡಿ, ಉಪನ್ಯಾಸಕಿ ವೀಣಾ ಜಲಾದಿ ಹಾಜರಿದ್ದರು.

ಪಾಂಡುರಂಗ ಕುಂಬಾರ ಸ್ವಾಗತಿಸಿದರೆ, ಸಂತೋಷಕುಮಾರ ಸಜ್ಜನ ನಿರೂಪಿಸಿದರು.

# ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ಪ್ರವಾಸ

ಮಲ್ಲಮ ನುಡಿ ವಾರ್ತೆ

ಕಲಬುರಗಿ.ಜ.10:ಕರ್ನಾಟಕ ರಾಜ್ಯ ಅಲ್ಪಸಂಖ್ಯಾಂತರ ಆಯೋಗದ ಅಧ್ಯಕ್ಷರಾದ ಯು. ನಿಸಾರ್ ಅಹಮದ್ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಜನವರಿ 13ರಂದು ಸೋಮವಾರ ಬೆಳಿಗ್ಗೆ ಕಲಬುರಗಿಗೆ ಆಗಮಿಸುವರು.

ನಂತರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಲಬುರಗಿ ವಿಭಾಗದ ಅಲ್ಪಸಂಖ್ಯಾತರ ಪ್ರಮುಖ ಮುಖಂಡರೊಂದಿಗೆ ಮುಂಬರುವ ಆರ್ಥಿಕ ಆಯವ್ಯಯಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಹಾಲಿ ಇರುವ ಯೋಜನೆಗಳಲ್ಲಿ ಮಾರ್ಪಾಡಿನ ಅವಶ್ಯಕತೆಯಿದ್ದಲ್ಲಿ ಹಾಗೂ ನೂತನ ಯೋಜನೆಗಳನ್ನು ಪ್ರಸ್ತಾಪಿಸಿ ಚರ್ಚಿಸಲು ಸಭೆ ನಡೆಸುವರು.

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.